2015

JANUARY "TO" DECEMBER

ವಿಜಯ ಕರ್ನಾಟಕ ಶನಿವಾರ, 26 ಡಿಸೆಂಬರ್ 2015

ಲೇಖಕ 'ಪುಸ್ತಕಮನೆ' ಹರಿಹರಪ್ರಿಯ ಅಭಿಮತ

ಕುವೆಂಪು ಕಂಡಿದ್ದೇ ನಿಜವಾದ ಹಿಂದೂ ಧರ್ಮ

■ ವಿಕ ಸುದ್ದಿಲೋಕ ಬೆಂಗಳೂರು

ಕುವೆಂಪು ಅವರು ಹಿಂದೂ ಧರ್ಮದ ಜೀವ, ಜಗತ್ತು ಮತ್ತು ಈಶ್ವರ ಸಂಬಂಧಗಳನ್ನು ಹಾಗೂ ವೇದ, ಉಪನಿಷತ್ತುಗಳನ್ನೆಲ್ಲ 'ಮನುಜ ಮತ ವಿಶ್ವಪಥ' ತತ್ತ್ವವಾಗಿ ಪರಿವರ್ತಿಸಿದರು. ಅವರು ಕಂಡಿದ್ದೇ ನಿಜವಾದ ಹಿಂದೂ ಧರ್ಮ ಎಂದು ಲೇಖಕ 'ಪುಸ್ತಕಮನೆ' ಹರಿಹರಪ್ರಿಯ ಹೇಳಿದ್ದಾರೆ.

ಗಾಂಧಿ ಶಾಂತಿ ಪ್ರತಿಷ್ಠಾನವು ಗುರುವಾರ ನಗರದ ಗಾಂಧೀ ಭವನದಲ್ಲಿ ಏರ್ಪಡಿಸಿದ್ದ ಡಬ್ಲ್ಯು.ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ಹಿಂದೂ ಧರ್ಮ ಮತ್ತು ಕುವೆಂಪು' ವಿಚಾರ ಕುರಿತು ಅವರು ಮಾತನಾಡಿದರು.

''ಗಾಂಧೀಜಿಯವರ ಸರ್ವೋದಯ ತತ್ತ್ವವನ್ನು ಕುವೆಂಪು ಸಂಪೂರ್ಣವಾಗಿ ಒಪ್ಪಿದ್ದರು. ಆದರೆ, ಗಾಂಧೀಜಿಯವರಿಗೆ ಅದರೊಳಗಿದ್ದ ವರ್ಣ ವ್ಯವಸ್ಥೆ ಗೊತ್ತಾಗಲಿಲ್ಲ. ಕುವೆಂಪು ಅವರು ವರ್ಣ ವ್ಯವಸ್ಥೆಯ ಗೊಡವೆ ಇಲ್ಲದ ಸರ್ವೋದಯ ತತ್ತ್ವವನ್ನು ರೂಪಿಸಿಕೊಂಡರು. ಅವರ 'ಕಾನೂರು ಹೆಗ್ಗಡಿತಿ' ಕಾದಂಬರಿಯು ಸಮನ್ವಯ ದೃಷ್ಟಿಗೂ, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯು ಪೂರ್ಣದೃಷ್ಟಿಗೂ ಮತ್ತು 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವು ಸರ್ವೋದಯ ದೃಷ್ಟಿಗೂ ಅತ್ಯುತ್ತಮ ಉದಾಹರಣೆಗಳಾಗಿವೆ,'' ಎಂದು ಅವರು ವಿಶ್ಲೇಷಿಸಿದರು.

''ಇದೇ ರೀತಿಯಲ್ಲಿ ಕುವೆಂಪು ಅವರು ರಾಮಕೃಷ್ಣ ಪರಮಹಂಸರ, ಕಾಳಿ ಮಾತೆಯಿಂದಲೂ ಮತ್ತು ಮಹರ್ಷಿ ಅರವಿಂದರ ಅತಿಮಾನವತ್ವದ ಪರಿಕಲ್ಪನೆಯಿಂದಲೂ ಹಿಂದೂ ಧರ್ಮವನ್ನು ಬಿಡಿಸಿದರು. ಅವರು ಅಂತಿಮವಾಗಿ ಹಿಂದೂ ಮತವನ್ನು ಒಂದು ಧರ್ಮವನ್ನಾಗಿ ಪರಿವರ್ತಿಸಿದರು. ಅವರು ಸತ್ಯವನ್ನೇ ಅವತಾರವೆಂದು ಪ್ರತಿಪಾದಿಸಿದರು. ಇದನ್ನು ಅವರು ಪರಮಹಂಸ ಮತ್ತು ವಿವೇಕಾನಂದರಿಂದ ಸ್ವೀಕರಿಸಿದರು,'' ಎಂದು ವಿವರಿಸಿದರು.

''ಹಿಂದೂ ಧರ್ಮ ಇನ್ನೂ ಜಗತ್ತಿನಲ್ಲಿ ಉಳಿದಿರಲು ಮಠಮಾನ್ಯಗಳು ಕಾರಣವಲ್ಲ. ಅದಕ್ಕೆ ಕುವೆಂಪು ಅವರಂಥವರ ಕಾಣ್ಕೆಯೇ ಕಾರಣ. ಹಿಂದೂ ಧರ್ಮದೊಳಗಿನ ತಾರತಮ್ಯವನ್ನು ಕಂಡು ಅಂಬೇಡ್ಕರ್ ಬೇರೆ ಧರ್ಮಕ್ಕೆ ಹೋದರೆ, ಕುವೆಂಪು ಒಳಗಿದ್ದುಕೊಂಡೇ ಸಹಸ್ರ ಪುರುಷನಂತೆ ಬೆಳೆದರು,'' ಎಂದರು.

''ಇಂದು ಸಹಿಷ್ಣುತೆ ಬಗ್ಗೆ ತುಂಬಾ ಚರ್ಚೆಯಾಗುತ್ತಿದೆ. ಆದರೆ 'ಕವಿರಾಜಮಾರ್ಗ'ದಲ್ಲೇ ಸಹಿಷ್ಣುತೆಯ ಅಗತ್ಯ ಪ್ರತಿಪಾದನೆ ಆಗಿದೆಯೆಂದರೆ ಆಗಿನ ಸಮಾಜದಲ್ಲೂ ಅಸಹಿಷ್ಣುತೆ ಇತ್ತೆಂದೇ ಅರ್ಥ. ಈ ದೇಶದಲ್ಲಿ ರಾಮಾಯಣ, ಮಹಾಭಾರತಗಳ ಕಾಲದಿಂದಲೂ ಅಸಹಿಷ್ಣುತೆ ಇದೆ. ಕುವೆಂಪು ಅವರು ಶೂದ್ರ ತಪಸ್ವಿ, ಬೆರಳ್‌ಗೆ ಕೊರಳ್‌ನಂಥ ಕೃತಿಗಳನ್ನು ಬರೆದಾಗ ಕೂಡ ಇಂಥ ಅಸಹಿಷ್ಣುತೆ ಅವರನ್ನು ಕಾಡಿತ್ತು,'' ಎಂದು ಅವರು ಪುರಾವೆಗಳನ್ನು ನೀಡಿದರು. ಚಿಂತಕ ಮಲ್ಲೇಪುರಂ ವೆಂಕಟೇಶ್, ಗಾಂಧೀವಾದಿ ಹೊ.ಶ್ರೀನಿವಾಸಯ್ಯ, ದತ್ತಿ ಸಂಸ್ಥಾಪಕ ಡಬ್ಲ್ಯು.ಎಚ್.ದೇವಕುಮಾರ್, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ವೂಡೇ ಪಿ. ಕೃಷ್ಣ ಉಪಸ್ಥಿತರಿದ್ದರು.

ಉದಯವಾಣಿ ಬೆಂಗಳೂರು

ಶುಕ್ರವಾರ | ಡಿಸೆಂಬರ್ | 25 | 2015

ಕುವೆಂಪು 2ನೇ ಸಾಂಸ್ಕೃತಿಕ ವಿವೇಕಾನಂದರು: ಹರಿಹರ ಪ್ರಿಯ

ಬೆಂಗಳೂರು: ರಾಷ್ಟ್ರಕವಿ ಕುವೆಂಪು ಅವರು ಭಾರತ ಹಾಗೂ ಹಿಂದೂ ಧರ್ಮದ 'ಎರಡನೇ ಸಾಂಸ್ಕೃತಿಕ ವಿವೇಕಾನಂದರು' ಎಂದು ಚಿಂತಕ ಹರಿಹರ ಪ್ರಿಯ ಬಣ್ಣಿಸಿದ್ದಾರೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನ ಗುರುವಾರ ನಗರದ ಗಾಂಧೀ ಭವನದಲ್ಲಿ ಹಮ್ಮಿಕೊಂಡಿದ್ದ 'ಹಿಂದೂ ಧರ್ಮ ಮತ್ತು ಕುವೆಂಪು' ವಿಷಯ ಕುರಿತು ದತ್ತಿ ಉಪನ್ಯಾಸ ನೀಡಿದರು.

ವಿಶ್ವದೆಲ್ಲೆಡೆ ಸುತ್ತಿದ ವಿವೇಕಾನಂದರು ವಿದೇಶಗಳಲ್ಲಿ ಹಿಂದೂ ಧರ್ಮದ ಶ್ರೇಷ್ಠತೆ ಕುರಿತು ಸಾರಿದರೆ; ರಾಷ್ಟ್ರಕವಿ ಕುವೆಂಪು ತಮ್ಮ ಸಹಸ್ರ ಅಕ್ಷರ ದಾಸೋಹದಿಂದ ಜಗತ್ತಿಗೆ ಹಿಂದೂ ಧರ್ಮದ ವಾಸ್ತವತೆಯನ್ನು ಮನವರಿಕೆಮಾಡಿಕೊಟ್ಟರು. ಯಾವ ಮಠಾಧೀಶರು ಅಥವಾ ಮಠದಿಂದಲೂ ಹಿಂದೂ ಧರ್ಮ ಬೆಳೆದಿಲ್ಲ. ಹಿಂದೂ ಧರ್ಮ ಉಳಿದಿರುವುದು ಕುವೆಂಪು ಅವರಿಂದ, ನಿಜವಾದ ಹಿಂದೂ ಧರ್ಮ ಎಂದರೆ ಕುವೆಂಪು ಅವರದ್ದು ಹೀಗಾಗಿಯೇ ಅವರು ಹಿಂದೂ ಧರ್ಮದ ಎರಡನೇ ಸಾಂಸ್ಕೃತಿಕ ವಿವೇಕಾನಂದರಾಗಿದ್ದಾರೆ ಎಂದು ಶ್ಲಾಘಿಸಿದರು.

ಕುವೆಂಪು ಅವರ ಹಿಂದೂ ಧರ್ಮದಲ್ಲಿ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಎಂಬ ಮೂರು ಘಟಕಗಳಿವೆ. ಹಿಂದೆ ಹಿಂದೂಧರ್ಮವು ಒಂದು ಮತ, ಜಾತಿ ಹಾಗೂ ಜನಾಂಗವಾಗಿತ್ತು. ಕುವೆಂಪು ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟ ನಂತರ ಈ ರೂಪ ಕಳಚಿಸಿಕೊಂಡು ನಿಜವಾದ ಹಿಂದೂ ಧರ್ಮವಾಗಿ ರೂಪುಗೊಂಡಿತು ಎಂದು ಹೇಳಿದರು.

ಮತವಂತರು, ಕುಲವಂತರು ಹಾಗೂ ಜಾತಿವಂತರಿಂದ ಇಂದು ರಾಜ್ಯ, ರಾಷ್ಟ್ರ ಹಾಗೂ ವಿಶ್ವದಲ್ಲಿ ಅನಾಹುತಗಳು ನಡೆಯುತ್ತಿವೆ. ಹಿಂದೂ- ಅಹಿಂದು ಎನ್ನುವುದು ಒಂದೇ ನಾಣ್ಯದ ಎರಡು ಮುಖಗಳಾಗಿದ್ದು ಕಾಲಕಾಲಕ್ಕೆ ಹೊಸ ಹೆಸರು ಪಡೆಯುತ್ತಿವೆ. ಹಿಂದೂ ಧರ್ಮದ ಕುರಿತು ಕೆಲವರು ಹೊಂದಿರುವ ಗೊಂದಲಗಳಿಗೆ ಪರಿಹಾರವೆಂದರೆ ಕುವೆಂಪು ಅವರ ದಾರ್ಶನಿಕತೆ ಎಂದು ಪ್ರತಿಪಾದಿಸಿದರು.

ರಾಮಕೃಷ್ಣ ಪರಮಹಂಸರು ಹಾಗೂ ವಿವೇಕನಂದರಿಂದ ಕುವೆಂಪು ಸಮಾನತೆಯ ತತ್ವ ಸ್ವೀಕರಿಸಿದರು. 'ಕಾನೂನು ಹೆಗ್ಗಡತಿ'ಯಲ್ಲಿ ಸಮಾನತೆ ತತ್ವ, 'ಶ್ರೀರಾಮಾಯಣ ದರ್ಶನಂ'ನಲ್ಲಿ ಸರ್ವಧರ್ಮ ಸಾಮರಸ್ಯ ಹಾಗೂ ಸಹಿಷ್ಣುತೆ ಹಾಗೂ 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಪೂರ್ಣ ದೃಷ್ಟಿಯನ್ನು ಸಾರಿದರು. ಈ ಕೃತಿಗಳು ಸಾಂಸ್ಕೃತಿಕ ರತ್ನಗಳು. ಕುವೆಂಪು ಕೃತಿಗಳು ಶಿಲ್ಪಕಲೆಗಳ ಕಲಾಕೃತಿಗಳು ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಹೊ. ಶ್ರೀನಿವಾಸಯ್ಯ, ಗಾಂಧೀ ಶಾಂತಿ ಪ್ರತಿಷ್ಠಾನದ ಕಾರ್ಯದರ್ಶಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಸುಮತೀಂದ್ರ ನಾಡಿಗ್‌ರಿಗೆ ಬುದ್ಧಿ, ತಲೆ ಇಲ್ಲ

ಕುವೆಂಪು ಅವರಿಗೆ ಅಕ್ಷರ ಸಂಪತ್ತಿನ ಕೊರತೆಯಿತ್ತು. ಅವರ ನಾಡಗೀತೆಯಲ್ಲಿ ಸಾಕಷ್ಟು ದೋಷಗಳಿವೆ. ರವೀಂದ್ರನಾಥ್ ಠಾಗೋರ್ ರೀತಿ ರಾಷ್ಟ್ರಗೀತೆ ಬರೆಯಲು ಅವರಿಗೆ ಸಾಧ್ಯವಾಗಿಲ್ಲ ಎಂದು ಸುಮತೀಂದ್ರ ನಾಡಿಗ್ ಟೀಕಿಸುತ್ತಾರೆ. ನಿಜವಾಗಿ ನಾಡಿಗ್‌ರಿಗೆ ಬುದ್ಧಿ ಹಾಗೂ ತಲೆ ಇಲ್ಲ. ಜೈ ಭಾರತ ಜನನಿಯ ತನುಜಾತೆ... ಹಾಡನ್ನು ನಾಡಗೀತೆಯಾಗಬೇಕು ಎಂದು ಕುವೆಂಪು ಬರೆದಿಲ್ಲ. ತಮ್ಮ 20ನೇ ವಯಸ್ಸಿನಲ್ಲೇ ಆ ಗೀತೆ ಬರೆದಿದ್ದರು. ಮೂರು ಬಾರಿ ಪರಿಷ್ಕರಿಸಿ ತುಂಬಾ ಅರ್ಥಗರ್ಭಿತವಾಗಿರುವಂತೆ ನೋಡಿಕೊಂಡರು. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅದನ್ನು ಪ್ರಕಟಿಸಿದರೆ, ಬಿ.ಎಂ.ಶ್ರೀ ಮುನ್ನುಡಿ ಬರೆದಿದ್ದರು. ಕುವೆಂಪು ದಾರ್ಶನಿಕತೆಗೆ ಈ ಗೀತೆಯೇ ಪ್ರನಾಳಿಕೆ ಎಂದು ಚಿಂತಕ ಹರಿಹರಪ್ರಿಯ ಶ್ಲಾಘಿಸಿದರು.

ವಿಜಯ ಕರ್ನಾಟಕ ಮಂಗಳವಾರ,8 ಡಿಸೆಂಬರ್ 2015



ಬೆಂಗಳೂರಿನ ಗಾಂಧಿ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ಸಸಿಗೆ ನೀರೆರೆಯುವ ಮೂಲಕ 'ಅಖಿಲ ಭಾರತ ಎರಡನೇ ಸ್ವಾತಂತ್ರ್ಯ ಚಳುವಳಿ ಸಂಸ್ಥೆ 'ಉದ್ಘಾಟಿಸಿದರು. ವೂಡೆ ಪಿ. ಕೃಷ್ಣ, ಪ್ರೊ.ಬಿ. ತಿಪ್ಪೇಶ್ ರುದ್ರಪ್ಪ, ಬಸ್ರೂರು ರಾಜೀವ್ ಶೆಟ್ಟಿ ಮತ್ತು ಕೆ.ಸಿ. ರಘು ಮುಂತಾದವರು ಉಪಸ್ಥಿತರಿದ್ದರು.

ಉದಯವಾಣಿ ಸೋಮವಾರ | ಡಿಸೆಂಬರ್ | 7 | 2015



ನಗರದ ಗಾಂಧಿಭವನದಲ್ಲಿ ಭಾನುವಾರ ಅಖಿಲ ಭಾರತ 2ನೇ ಸ್ವಾತಂತ್ರ್ಯ ಚಳವಳಿ ಸಂಸ್ಥೆಯನ್ನು ನಿವೃತ್ತ ಲೋಕಾಯುಕ್ತ ನ್ಯಾ. ಸಂತೋಷ ಹೆಗ್ಡೆ ಅವರು ಉದ್ಘಾಟಿಸಿದರು. ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಸಂಸ್ಥೆಯ ಗೌರವಾಧ್ಯಕ್ಷ ಪ್ರೊ. ಬಿ. ತಿಪ್ಪೇರುದ್ರಪ್ಪ ಇತರರು ಇದ್ದರು.

ಈ ಸಂಜೆ

ಭಾನುವಾರ,
06 ಡಿಸೆಂಬರ್ 2015

ಭ್ರಷ್ಟಾಚಾರ ನಿರ್ಮೂಲನೆಗೆ ಪಣತೊಡಿ

ಬೆಂಗಳೂರು, ಡಿ.6-ತಾಂಡವವಾಡುತ್ತಿರುವ ಭ್ರಷ್ಟಾಚಾರ ನಿರ್ಮೂಲನೆಗೆ ಪ್ರತಿಯೊಬ್ಬರು ಪಣ ತೊಡಬೇಕು ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಇಂದಿಲ್ಲಿ ಸಲಹೆ ಮಾಡಿದರು.

ನಗರದಲ್ಲಿಂದು ನಡೆದ ಅಖಿಲ ಭಾರತ ಎರಡನೇ ಸ್ವಾತಂತ್ರ್ಯ ಚಳುವಳಿ ಸಂಸ್ಥೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ತತ್ವ, ಸಿದ್ಧಾಂತದ ಮೇಲೆ ಅಧಿಕಾರಕ್ಕೆ ಬಂದ ದೆಹಲಿ ಸರ್ಕಾರ, ಬೇಕಾಬಿಟ್ಟಿ ಶಾಸಕರ ವೇತನ ಹೆಚ್ಚಳ ಮಾಡಿದೆ. ಇದರಿಂದ ಜನರ ನಂಬಿಕೆ, ವಿಶ್ವಾಸವನ್ನು ಕಳೆದುಕೊಳ್ಳುತ್ತಿದೆ ಎಂದರು.

ಸಾಮಾಜಿಕ ಹೋರಾಟಗಾರ ಅಣ್ಣಾಹಜಾರೆ ನೇತೃತ್ವದ ಸಮಿತಿ ಸಿದ್ಧಪಡಿಸಿದ ಲೋಕಪಾಲ್ ಮಸೂದೆ ಬದಲಿಗೆ ಬೇರೆ ರೀತಿಯ ಲೋಕಪಾಲನ್ನು ದೆಹಲಿ ಸರ್ಕಾರ ಜಾರಿಗೆ ತಂದಿದೆ. ಅಲ್ಲದೆ, ಪ್ರಧಾನಿ ವೇತನಕ್ಕಿಂತಲೂ ಶಾಸಕರ ವೇತನ ಹೆಚ್ಚಾಗಿರುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಂಸತ್ತಿನಲ್ಲಿ ಗಂಭೀರ ಚರ್ಚೆ ನಡೆಯುತ್ತಿಲ್ಲ. ಯುಪಿಎ ಸರ್ಕಾರವಿದ್ದಾಗ ಜಿಎಸ್‌ಟಿ ಮಸೂದೆ ಮಂಡಿಸಿದ್ದಾಗ ಎನ್‌ಡಿಎ ವಿರೋಧ ಮಾಡಿತ್ತು. ಈಗ ಎನ್‌ಡಿಎ ಮಂಡಿಸುವ ಜಿಎಸ್‌ಡಿ ವಿಧೇಯಕವನ್ನು ಯುಪಿಎ ವಿರೋಧಿಸುತ್ತಿದೆ. ಜನರ ಅನುಕೂಲಕ್ಕಿಂತ ಅವರ ಪಕ್ಷದ ಪ್ರತಿಷ್ಠೆ ಮುಖ್ಯವಾಗಿದೆ. ರಾಜ್ಯ ಲೋಕಾಯುಕ್ತ ಸಂಸ್ಥೆಯಲ್ಲಿ ಒಳ್ಳೆ ಕೆಲಸ ಮಾಡಿದ ತೃಪ್ತಿ ಇದೆ ಎಂದರು.



ನಗರದ ಗಾಂಧಿಭವನದಲ್ಲಿ ನಡೆದ ಅಖಿಲ ಭಾರತ ಎರಡನೇ ಸ್ವಾತಂತ್ರ್ಯ ಚಳುವಳಿ ಸಂಸ್ಥೆಯನ್ನು ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಸಂಸ್ಥೆಯ ಗೌರವಾಧ್ಯಕ್ಷ ಬಿ.ತಿಪ್ಪೇರುದ್ರಪ್ಪ, ಪ್ರೊ.ಡಿ.ಪಿ.ಕೃಷ್ಣ ಮುಂತಾದವರು ಪಾಲ್ಗೊಂಡಿದ್ದರು.

ವೇತನ ಹೆಚ್ಚಳ: ಕೇಜ್ರಿ ಕ್ರಮ ಸರಿಯಲ್ಲ



ನಗರದ ಗಾಂಧಿಭವನದಲ್ಲಿಂದು ಆಯೋಜಿಸಿದ್ದ ಅಖಿಲ ಭಾರತ ಎರಡನೇ ಸ್ವಾತಂತ್ರ್ಯ ಚಳವಳಿಗೆ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ಗಿಡಕ್ಕೆ ನೀರೆರೆದು ಚಾಲನೆ ನೀಡಿದರು. ವೂಡೇ ಪಿ. ಕೃಷ್ಣ ಮತ್ತಿತರರು ಇದ್ದಾರೆ.

ಬೆಂಗಳೂರು, ಡಿ. 6– ತತ್ವಸಿದ್ಧಾಂತದ ಮೇಲೆ ಅಧಿಕಾರಕ್ಕೆ ಬಂದ ಅರವಿಂದ ಕೇಜ್ರಿವಾಲ್ ನೇತೃತ್ವದ ದೆಹಲಿ ಸರ್ಕಾರ ಶಾಸಕರ ವೇತನವನ್ನು ನಾಲ್ಕು ಪಟ್ಟು ಹೆಚ್ಚಿಸಿರುವುದು ಸರಿಯಲ್ಲ. ಇದು ಜನರ ನಂಬಿಕೆ ಮತ್ತು ವಿಶ್ವಾಸಕ್ಕೆ ಮಾಡಿದ ದ್ರೋಹವಾಗಿದೆ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗಡೆ ಹೇಳಿದ್ದಾರೆ.

ನಗರದ ಗಾಂಧಿ ಭವನದಲ್ಲಿಂದು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅಖಿಲ ಭಾರತ ಎರಡನೇ ಸ್ವಾತಂತ್ರ್ಯ ಚಳವಳಿ ಸಂಸ್ಥೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತತ್ವಸಿದ್ಧಾಂತದ ಮೇಲೆ ಅಧಿಕಾರಕ್ಕೆ ಬಂದ ಪಕ್ಷವೊಂದು ಜನರ ಆಶೋತ್ತರಗಳಿಗೆ ವಿರುದ್ಧವಾಗಿ ವರ್ತಿಸುತ್ತಿದೆ. ಅಣ್ಣಾ ಹಜಾರೆ ನೇತೃತ್ವದ ತಂಡ ರೂಪಿಸಿದ್ದ ಲೋಕಪಾಲ್ ಕರಡು ಮಸೂದೆಯನ್ನು ಈ ಸರ್ಕಾರ ಮರೆತುಬಿಟ್ಟಿದೆ. ಇದೀಗ ಮತ್ತೆ ಹೊಸ ಕರಡು ತಯಾರಿಸಿದ್ದಾರೆ. ಅದು ಅಷ್ಟೇನೂ ಬಲಿಷ್ಟವಾಗಿಲ್ಲ ಎಂದು ಟೀಕಿಸಿದರು.

ಸಂಸತ್ತಿನಲ್ಲಿ ಇತ್ತೀಚಿಗೆ ಯಾವುದೇ ಗಂಭೀರ ಚರ್ಚೆಗಳು ನಡೆಯುತ್ತಿಲ್ಲ. ಎಲ್ಲಾ ಸಂಸದರು ತಮ್ಮ ಪಕ್ಷ ಹೇಳಿದ ಕೆಲಸ ಮಾಡುತ್ತಿದ್ದಾರೆ. ಜನರ ಹಿತಾಸಕ್ತಿಗೆ ಪೂರಕವಾದ ಕೆಲಸವನ್ನು ಯಾರೂ ಮಾಡುತ್ತಿಲ್ಲ ಎಂದು ಹೇಳಿದ ಅವರು, ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಜೆ.ಎಸ್.ಪಿ. ಮಸೂದೆ ಮಂಡಿಸಿದ್ದು, ಮಾತ್ರವಲ್ಲ ಇದು ಜನರ ಹಿತಾಸಕ್ತಿಗೆ ಪೂರಕವಾಗಿದೆ ಎಂದು ಹೇಳಿದ್ದು; ಆಗ ಎನ್‌ಡಿಎ ಸರ್ಕಾರ ಆ ಮಸೂದೆಗೆ ವಿರೋಧ ವ್ಯಕ್ತಪಡಿಸಿತ್ತು. ಆದ-ರೆ ಈಗ ಅದೇ ಮಸೂದೆಯನ್ನು ಎನ್‌ಡಿಎ ಮಂಡಿಸಿದ್ದು, ಕಾಂಗ್ರೆಸ್ ವಿರೋಧ ವ್ಯಕ್ತಪಡಿಸುತ್ತಿದೆ ಎಂದು ದೂರಿದರು.

ಪ್ರಜಾಪ್ರಭುತ್ವ ತನ್ನ ಅರ್ಥ ಕಳೆದುಕೊಳ್ಳುತ್ತಿದೆ. ಪ್ರಜಾಪ್ರಭುತ್ವ ಎಂಬುದು ಇತ್ತೀಚೆಗೆ ಕೆಲವರಿಂದ, ಕೆಲವರಿಗಾಗಿ ಎಂದು ಬದಲಾವಣೆಯಾಗಿದೆ ಎಂದು ಹೇಳಿದ ಅವರು, ಪ್ರಜಾಪ್ರಭುತ್ವ ಯಾವುದೇ ಕಾಲದಲ್ಲೂ ಒಂದು ಗುಂಪಿಗೆ ಮೀಸಲಾಗಿರಬಾರದು. ಇದು ದೇಶಕ್ಕೆ ಮಾರಕ ಎಂದು ಹೇಳಿದರು.

ಭ್ರಷ್ಟಾಚಾರವನ್ನು ಸಹಿಸಿಕೊಳ್ಳುವ ಮನಸ್ಥಿತಿ ನಮ್ಮಲ್ಲಿ ಉಂಟಾಗಬಾರದು. ಅದರ ಸಂಪೂರ್ಣ ನಿರ್ಮೂಲನೆ ಸಾಧ್ಯವಿಲ್ಲದಿದ್ದರೂ, ನಿಯಂತ್ರಣ ಸಾಧ್ಯವಿದೆ. ಸಮಾಜದಲ್ಲಿ ಈ ಬಗ್ಗೆ ಜಾಗೃತಿ ಉಂಟಾಗಬೇಕು ಎಂದು ಹೇಳಿದರು.

ಲೋಕಾಯುಕ್ತ ನ್ಯಾಯಮೂರ್ತಿಯಾದ ಬಳಿಕ ತಮ್ಮಲ್ಲಿ ಸಾಕಷ್ಟು ಬದಲಾವಣೆಗಳಾಯಿತು. ಲೋಕಾಯುಕ್ತದಲ್ಲಿ ಕೆಲಸ ಮಾಡಿರುವುದು ನನಗೆ ತೃಪ್ತಿ ತಂದಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಗೌರವಾಧ್ಯಕ್ಷ ಪ್ರೊ. ಬಿ. ತಿಪ್ಪೇಶ್ ರುದ್ರಪ್ಪ, ಗಾಂಧೀಜಿ ಶಾಂತಿ ಫೌಂಡೇಷನ್‌ನ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಅಧ್ಯಕ್ಷ ಬಸ್ರೂರು ರಾಜೀವ್ ಶೆಟ್ಟಿ, ಬಳ್ಳಾರಿ ರೈತ ಸಂಘದ ಉಪಾಧ್ಯಕ್ಷ ಜೆ.ಎಂ. ವೀರಸಂಗಯ್ಯ, ಕೆ.ಸಿ. ರಘು, ಕಾರ್ಯದರ್ಶಿ ಎಚ್.ಎನ್. ಗಂಗಾಧರ್ ಭಾಗವಹಿಸಿದ್ದರು.

ವಿಜಯ ಕರ್ನಾಟಕ ಬುಧವಾರ, 25 ನವೆಂಬರ್ 2015,

ಬೆಮೆಲ್ ನಿರ್ದೇಶಕ ಅನಿರುದ್ಧ ಅವರಿಗೆ ಪ್ರಶಸ್ತಿ



ಬೆಮೆಲ್‌ನ ರೈಲು ಮತ್ತು ಮೆಟ್ರೋ ವಿಭಾಗದ ನಿರ್ದೇಶಕ ಅನಿರುದ್ಧಕುಮಾರ್ ಅವರಿಗೆ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್ (ಇಂಡಿಯಾ) ಎಮಿನೆಂಟ್ ಎಂಜಿನಿಯರ್ ಪ್ರಶಸ್ತಿ ನೀಡಿದೆ. ಹೆವಿ ಎಂಜಿನಿಯರಿಂಗ್ ಇಂಡಸ್ಟ್ರಿಯಲ್ಲಿ ನೀಡಿರುವ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಬೆಂಗಳೂರಿನಲ್ಲಿ ನಡೆದ ಮೆಕ್ಯಾನಿಕಲ್ ಎಂಜಿನಿಯರ್ಸ್ ಸಮ್ಮೇಳನದಲ್ಲಿ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್ ಅಧ್ಯಕ್ಷ ಡಾ. ಎಲ್.ಬಿ. ಮುರಳಿಕೃಷ್ಣ ರೆಡ್ಡಿ ಹಾಗೂ ಡಾ. ಉದಯ್ ಪಿ. ಕೃಷ್ಣ ಪ್ರಶಸ್ತಿ ನೀಡಿ ಗೌರವಿಸಿದರು.

25/11/15




ಬೃಹತ್ ಎಂಜಿನಿಯರಿಂಗ್ ಕೈಗಾರಿಕಾ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ಬಿಇಎಂಎಲ್ ನಿರ್ದೇಶಕ (ರೈಲು ಮತ್ತು ಮೆಟ್ರೊ) ಅನಿರುದ್ಧ್ ಕುಮಾರ್ ಅವರಿಗೆ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ಅತ್ಯುತ್ತಮ ಎಂಜಿನಿಯರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಭಾರತದ ಎಂಜಿನಿಯರ್‌ಗಳ ಸಂಸ್ಥೆಯ ಅಧ್ಯಕ್ಷ ಡಾ.ಎಲ್.ವಿ. ಮುರಳಿ ಕೃಷ್ಣರೆಡ್ಡಿ, ಕಾರ್ಯದರ್ಶಿ ಡಾ. ವೂಡೆ ಪಿ. ಕೃಷ್ಣ, ಮತ್ತಿತರರು ಇದ್ದರು.

ರಾಷ್ಟ್ರ ಕನ್ನಡಿಗರು

ಭಾನುವಾರ

18-10-2015



ಭಾರತೀಯ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ ವತಿಯಿಂದ ಶೇಷಾದ್ರಿಪುರಂ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ವಿ.ಎಸ್. ಮಳೀಮಠ್ ಮತ್ತು ಡಾ. ಎಂ. ರಾಮಾಜೋಯಿಸ್ ಅವರನ್ನು ಸನ್ಮಾನಿಸಲಾಯಿತು. ಎನ್.ಆರ್. ಪಂಡಿತಾರಾಧ್ಯ, ಡಾ. ವೂಡೆ ಪಿ.ಕೃಷ್ಣ, ವಕೀಲರಾದ ಕೃಷ್ಣಮಣಿ ಮತ್ತಿತರರು ಪಾಲ್ಗೊಂಡಿದ್ದರು.

ಹೊಸ ದಿಗಂತ
ಬೆಂಗಳೂರು
ಭಾನುವಾರ, 18 ಅಕ್ಟೋಬರ್ 2015

ಭ್ರಷ್ಟಾಚಾರ ಹೆಚ್ಚಳ: ನಿವೃತ್ತ ನ್ಯಾ.ಮಳಿಮಠ್ ವಿಷಾದ

ನಾಡಿನ ಸಂಪತ್ತು ಕಾಯಬೇಕಾದವರೇ ಲೂಟಿ ಮಾಡುತ್ತಿದ್ದಾರೆ

ಬೆಂಗಳೂರು: ನಮ್ಮನ್ನು ಹಾಗೂ ನಾಡಿನ ಸಂಪತ್ತನ್ನು ಕಾಯಬೇಕಾದವರೇ ಅದನ್ನು ಲೂಟಿ ಮಾಡುತ್ತಿರುವುದು ಭಾರತೀಯ ಸಂವಿಧಾನದ ದುರಂತ ಎಂದು ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಾ.ವಿ.ಎಸ್. ಮಳಿಮಠ್ ಅಭಿಪ್ರಾಯಪಟ್ಟರು.

ಡಾ.ಎಂ. ರಾಮಾಜೋಯಿಸ್ ಅವರ ಅವರ್ ಪಾರ್ಲಿಮೆಂಟ್ ಎಂಬ ಪುಸ್ತಕ ಕುರಿತು ಶನಿವಾರ ನಗರದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಇಂದಿನ ದಿನದಲ್ಲಿ ಭ್ರಷ್ಟಾಚಾರ ಹೆಚ್ಚಾಗುತ್ತಿದೆ. ಸಮಾಜದಲ್ಲಿ ಆಳುವವರೇ ಹೆಚ್ಚು ಪ್ರಾಬಲ್ಯವಂತರಾಗುತ್ತಿದ್ದಾರೆ. ಸಂವಿಧಾನದ ಮೂಲತತ್ವವಾದ ಜನರಿಂದ, ಜನರಿಗಾಗಿ, ಜನರಿಗೋಸ್ಕರ ಎಂಬ ವಾಕ್ಯ ಈಗ ಜನನಾಯಕರಿಂದ, ಜನನಾಯಕರಿಗಾಗಿ, ಜನನಾಯಕರಿಗೋಸ್ಕರ ಎಂಬಂತಾಗಿದೆ ಎಂದರು.

ನಮ್ಮನ್ನು ಹಾಗೂ ನಾಡಿನ ಸಂಪತ್ತನ್ನು ಕಾಯುವವರೇ ಲೂಟಿ ಮಾಡುತ್ತಿರುವ ಪ್ರಸಂಗಗಳೇ ಹೆಚ್ಚುತ್ತಿದೆ. ಅತ್ಯಾಚಾರ ಪ್ರಕರಣಗಳು ಸಮಾಜವನ್ನು ತಲ್ಲಣಗೊಳಿಸುತ್ತಿದೆ. ಸಮಾಜದಲ್ಲಿ ಉತ್ತಮ ನಡತೆಯೇ ಕಾಣೆಯಾಗುತ್ತಿದೆ. ಜನರ ಗುಣ ನಡತೆಯಲ್ಲಿ ಅತ್ಯಂತ ಶ್ರೀಮಂತಿಕೆ ಹೊಂದಿದ್ದ ದೇಶ ಇಂದು ಮೌಲ್ಯರಹಿತ ದೇಶದತ್ತ ಸಾಗುತ್ತಿದೆ ಎಂದು ಖೇದ ವ್ಯಕ್ತಪಡಿಸಿದರು.

ಅನ್ಯಾಯದೊಂದಿಗೆ ಸ್ಪರ್ಧೆ

ಸ್ವಾತಂತ್ರ್ಯಪೂರ್ವದಲ್ಲಿ ಜನರು ಸತ್ಯ, ಅಹಿಂಸೆಗಳಿಗಾಗಿ ಹೋರಾಡುತ್ತಿದ್ದರು. ಆದರೆ, ಪ್ರಸ್ತುತ ವಿದ್ಯಮಾನದಲ್ಲಿ ನಾವು ಕೊಲೆ, ದರೋಡೆ, ಹಿಂಸೆ ಹಾಗೂ ಅನ್ಯಾಯದೊಂದಿಗೆ ಸ್ಪರ್ಧಿಗಿಳಿದಿದ್ದೇವೆ. ಮಾತ್ರವಲ್ಲದೆ ಅತ್ಯಂತ ದೊಡ್ಡ ಹುದ್ದೆಗಳು ಲಭಿಸುವ ಎಲ್ಲಾ ರೀತಿಯ ಶಿಕ್ಷಣವನ್ನು ಶಿಕ್ಷಣ ಕ್ಷೇತ್ರದಲ್ಲಿ ಅಳವಡಿಸಿದ್ದೇವೆ. ಆದರೆ ಮೌಲ್ಯಾಧಾರಿತ, ಸಂಸ್ಕೃತಿ ಆಧಾರಿತ ಶಿಕ್ಷಣಕ್ಕೆ ಒತ್ತು ನೀಡುತ್ತಿಲ್ಲ. ರಾಷ್ಟ್ರೀಯ ಭಾವೈಕ್ಯತೆ, ವಿಚಾರವಂತ ಯುವಕರು ಸಮಾಜದಲ್ಲಿ ವಿರಳ ಎಂದು ವಿಷಾದ ವ್ಯಕ್ತಪಡಿಸಿದರು.

ಜನಪ್ರತಿನಿಧಿಗಳ ಮಾತು ದಾಖಲಾಗಬೇಕು

ಜನರಿಂದ ಆಯ್ಕೆಯಾಗಿರುವ ಜನಪ್ರತಿನಿಧಿಗಳು ಸಂಸತ್ ಕಲಾಪದಲ್ಲಿ ಆಡಿದ ಮಾತುಗಳು, ಮಂಡಿಸಿದ ವಿಚಾರಗಳು ಹಾಗೂ ಭಾಷಣಗಳನ್ನು ಪುಸ್ತಕ ರೂಪದಲ್ಲಿ ಹೊರತರಬೇಕು. ಇದನ್ನು ಸರ್ಕಾರ ಕಡ್ಡಾಯಗೊಳಿಸಬೇಕು. ಹೀಗಾದಲ್ಲಿ ಮಾತ್ರ ಪ್ರತಿಯೊಬ್ಬ ಜನನಾಯಕನ ದಾಖಲೆ ಅಚ್ಚಳಿಯದೇ ಉಳಿಯುವಂತಾಗುತ್ತದೆ ಎಂದು ಹೇಳಿದರು.

ಇಂದಿನ ಜನನಾಯಕರು ಸಂಸತ್‌ನಲ್ಲಿ ತಮ್ಮ ಕ್ಷೇತ್ರದ ಬಗ್ಗೆ ಮಾತನಾಡದೇ ಇರುವುದು ವಿಷಾದನೀಯ. ಪುಸ್ತಕ ರೂಪದಲ್ಲಿ ಸಂಸತ್ ಕಲಾಪದಲ್ಲಾದ ವಿಚಾರಗಳನ್ನು ಹೊರತರುವುದರಿಂದ ಜನರಿಗೂ ತಮ್ಮ ಜನನಾಯಕರ ಸಾಮರ್ಥ್ಯದ ಅರಿವಾಗುತ್ತದೆ. ಸಮಾಜಕ್ಕಾಗಿ ಜನಪ್ರತಿನಿಧಿಗಳ ಕರ್ತವ್ಯವನ್ನು ದಾಖಲಿಸುವ ಕೆಲಸವಾಗಬೇಕು ಎಂದು ನುಡಿದರು.

ಬಾಕಿ ಪ್ರಕರಣ ಹೆಚ್ಚಾಗುತ್ತಿದೆ

ನ್ಯಾಯಾಲಯದಲ್ಲಿ ಪ್ರಕರಣಗಳು ಅಧಿಕವಾಗುತ್ತಿದೆ. ಹೆಚ್ಚುತ್ತಿರುವ ಪ್ರಕರಣಗಳು ಹಾಗೂ ಮೇಲ್ಮನವಿ ಪ್ರಕರಣಗಳಿಂದ ಕೇಸುಗಳು ಬಾಕಿ ಉಳಿಯುತ್ತಿವೆ. ಕೋರ್ಟ್‌ಗಳಲ್ಲಿ ಅಗತ್ಯ ಪ್ರಮಾಣದಲ್ಲಿ ನ್ಯಾಯಾಧೀಶರು ಇಲ್ಲದೇ ಇರುವುದರಿಂದ ಒತ್ತಡ ಹೆಚ್ಚಾಗುತ್ತಿದೆ. ಏತನ್ಮಧ್ಯೆ ಸಿವಿಲ್ ಕೇಸುಗಳನ್ನು ಹೈಕೋರ್ಟ್‌ಗೇ ಅಂತಿಮಗೊಳಿಸಿ, ಸುಪ್ರೀಂ ಕೋರ್ಟ್ ಮೇಲಿರುವ ಒತ್ತಡವನ್ನೂ ಕಡಿಮೆ ಮಾಡಬೇಕಾಗಿದೆ. ಹೈಕೋರ್ಟ್‌ನಲ್ಲಿಯೂ ಪ್ರಕರಣವನ್ನು ಏಕಪೀಠದಿಂದ ವಿಭಾಗೀಯ ಪೀಠ ಹೀಗೆ ಅನೇಕ ದಾರಿ ಮೇಲ್ಮನವಿ ಹಾಕುತ್ತಾರೆ. ಇದರಿಂದ ಹೆಚ್ಚು ಪ್ರಕರಣಗಳು ಬಾಕಿ ಆಗುತ್ತಿವೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಜಾರ್ಖಂಡ್ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಾ.ಎಂ. ರಾಮಜೋಯಿಸ್, ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎನ್.ಆರ್ ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ಡಾ.ವುಡೆ ಪಿ.ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.



ಡಾ.ಎಂ. ರಾಮಾಜೋಯಿಸ್ ಅವರ ಅವರ್ ಪಾರ್ಲಿಮೆಂಟ್ ಎಂಬ ಪುಸ್ತಕ ಕುರಿತು ಶನಿವಾರ ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಡಾ.ವಿ.ಎಸ್. ಮಳಿಮಠ್ ಉದ್ಘಾಟಿಸಿದರು.

ಕನ್ನಡಪ್ರಭ
ಭಾನುವಾರ 18.10.2015
ಬೆಂಗಳೂರು

ಭ್ರಷ್ಟ ನಿರ್ಮೂಲನಾ ಸಂಸ್ಥೆಗೆ ಲಂಚದ ಕಳಂಕ

ನಿವೃತ್ತ ನ್ಯಾ.ವಿ.ಎಸ್. ಮಳಿಮಠ ಅಸಮಾಧಾನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ ನಿರ್ಮೂಲನೆಗೆ ಹುಟ್ಟಿಕೊಂಡ ಸಂಸ್ಥೆಯೇ ಭ್ರಷ್ಟಾಚಾರದಲ್ಲಿ ಮುಳುಗಿರುವುದು ದುರಾದೃಷ್ಟಕರ ಎಂದು ಪರೋಕ್ಷವಾಗಿ ಲೋಕಾಯುಕ್ತ ಸಂಸ್ಥೆಯ ವಿರುದ್ಧ ನಿವೃತ್ತ ಮುಖ್ಯ ನ್ಯಾಯಮೂರ್ತಿ ವಿ.ಎಸ್.ಮಳಿಮಠ ಅವರು ಅಸಮಾಧಾನ ವ್ಯಕ್ತಪಡಿಸಿದರು.

ರಾಷ್ಟ್ರೀಯ ಕಾನೂನು ಶಾಲೆ ಹಾಗೂ ಕಲಬುರ್ಗಿಯ ವಿಜ್ಞಾನೇಶ್ವರ ರಾಜಕೀಯ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ಸಹಯೋಗದಲ್ಲಿ ಶೇಷಾದ್ರಿಪುರಂ ಕಾನೂನು ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮಾಜಿ ರಾಜ್ಯಪಾಲ ಡಾ.ಎಂ.ರಾಮಾಜೋಯಿಸ್ ಅವರ 'ನಮ್ಮ ಸಂಸತ್ತು' ಪುಸ್ತಕದ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು. ಸಾರ್ವಜನಿಕ ಸೇವೆಗಾಗಿ ರಚನೆಯಾಗಿರುವ ಸರ್ಕಾರದ ಸಂಸ್ಥೆಗಳು, ಅಧಿಕಾರಿಗಳು ನಡೆಸುವ ಭ್ರಷ್ಟಾಚಾರ ತಡೆಯುವುದಕ್ಕಾಗಿ ಪ್ರಾರಂಭವಾದ ಸಂಸ್ಥೆಗಳೇ ಭ್ರಷ್ಟಾಚಾರದಲ್ಲಿ ತೊಡಗಿರುವುದು ಶೋಚನೀಯ ಎಂದು ಬೇಸರಿಸಿದರು.

ಧಾರ್ಮಿಕ ಪರಂಪರೆ, ಅಸಹಿಷ್ಣುತೆ ಅಹಿಂಸೆಯ ಇತಿಹಾಸ ಹೊಂದಿರುವ ನಮ್ಮ ದೇಶದಲ್ಲಿ ಮೌಲ್ಯಗಳು ಸಂಪೂರ್ಣವಾಗಿ ಕುಸಿಯುತ್ತಿವೆ. ತಂದೆ, ಶಿಕ್ಷಕ ತನ್ನ ಮಕ್ಕಳ ಮೇಲೆ ಅತ್ಯಾಚಾರ ಮಾಡುವ ದುರ್ಘಟನೆಗಳು ನಡೆಯುತ್ತಿವೆ. ಮೌಲ್ಯಯುತ ಶಿಕ್ಷಣ ನೀಡದಿರುವುದೇ ಇದಕ್ಕೆಲ್ಲ ಮುಖ್ಯ ಕಾರಣವಾಗಿದ್ದು, ಶಿಕ್ಷಣ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕಾದ ಅಗತ್ಯವಿದೆ ಎಂದರು.

ಜನ ಪ್ರತಿನಿಧಿಗಳು ಶಾಸನಸಭೆಗಳಲ್ಲಿ ಯಾವ ರೀತಿ ಚರ್ಚೆಯಲ್ಲಿ ಭಾಗವಹಿಸಿದ್ದಾರೆ? ಜನರ ಸಮಸ್ಯೆಗಳ ಬಗ್ಗೆ ಎಷ್ಟು ಬಾರಿ ಸದನದಲ್ಲಿ ಪ್ರಶ್ನಿಸಿದ್ದಾರೆ ಎಂಬುದನ್ನು ಜನರ ಮುಂದಿಡಬೇಕು ಎಂದು ಒತ್ತಾಯಿಸಿದರು.

ನಿವೃತ್ತ ನ್ಯಾ.ರಾಮಜೋಯಿಸ್, ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಉಪಸ್ಥಿತರಿದ್ದರು.

ಈ ಸಂಜೆ

ಶನಿವಾರ, 17 ಅಕ್ಟೋಬರ್, 2015



ಭಾರತೀಯ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ ವತಿಯಿಂದ ಶೇಷಾದ್ರಿಪುರಂ ಕಾಲೇಜಿನಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ವಿ.ಎಸ್.ಮಳೀಮಠ್ ಮತ್ತು ಡಾ.ಎಂ.ರಾಮಾಜೋಯಿಸ್ ಅವರನ್ನು ಸನ್ಮಾನಿಸಲಾಯಿತು. ಎನ್.ಆರ್.ಪಂಡಿತಾರಾಧ್ಯ, ಡಾ.ವೂಡೆ.ಪಿ.ಕೃಷ್ಣ, ವಕೀಲರಾದ ಕೃಷ್ಣಮಣಿ ಮತ್ತಿತರರು ಪಾಲ್ಗೊಂಡಿದ್ದರು.

ವಿಜಯ ಕರ್ನಾಟಕ
ಸೋಮವಾರ, 7 ಸೆಪ್ಟೆಂಬರ್ 2015

ಮಾಜಿ ರಾಜ್ಯಪಾಲ ಎಚ್.ಆರ್.ಭಾರದ್ವಾಜ್ ವಿಷಾದ

ವಿಚಾರವಾದಿಗಳ ಹತ್ಯಾಕಾಂಡ ಆತಂಕಕಾರಿ

■ ವಿಕ ಸುದ್ದಿಲೋಕ ಬೆಂಗಳೂರು

ದೇಶದಲ್ಲಿ ಹಿಂಸಾಚಾರ ತಾಂಡವವಾಡುತ್ತಿದೆ. ವಿಚಾರವಾದಿಗಳು, ಅಮಾಯಕರು ಮತ್ತು ಶಿಕ್ಷಕರನ್ನು ಅಮಾನುಷವಾಗಿ ಹತ್ಯೆ ಮಾಡಲಾಗುತ್ತಿದೆ. ಎಲ್ಲೆಡೆ ಗಾಂಧಿ ವಾದಕ್ಕೆ ವಿರುದ್ಧವಾದಂತಹ ಘಟನೆಗಳು ಜರುಗುತ್ತಿವೆ ಎಂದು ಮಾಜಿ ರಾಜ್ಯಪಾಲ ಎಚ್.ಆರ್.ಭಾರದ್ವಾಜ್ ವಿಷಾದ ವ್ಯಕ್ತಪಡಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಎಂವಿಆರ್ ಫೌಂಡೇಷನ್ ನಗರದ ಗಾಂಧಿ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಮಹಾತ್ಮಗಾಂಧಿ ಹಾಗೂ ಪಂಡಿತ್ ಜವಾಹರಲಾಲ್ ನೆಹರು ಪರಂಪರೆಯ ಪ್ರಸ್ತುತತೆ ಇಂದು ಮತ್ತು ಮುಂದು' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

''ಶ್ರೇಷ್ಠ ವಿಚಾರವಾದಿಯಾಗಿದ್ದ ಹಂಪಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಎಂ.ಎಂ.ಕಲಬುರ್ಗಿ ಅವರ ಹತ್ಯೆಯ ಸುದ್ದಿ ಕೇಳಿ ತೀವ್ರ ಆಘಾತವಾಯಿತು. ಅವರು ಹೇಳಬೇಕಾದ ವಿಚಾರವನ್ನು ನಿರ್ಭಯವಾಗಿ ಪ್ರತಿಪಾದಿಸುತ್ತಿದ್ದರು. ದೇವರ ಬಗ್ಗೆ ಸತ್ಯವನ್ನು ಹೇಳುತ್ತಿದ್ದರು. ಜನರು ಒಗ್ಗೂಡುವ ಬದಲಿಗೆ ಹಿಂಸೆಯನ್ನು ಅನುಸರಿಸುತ್ತಿದ್ದಾರೆ,'' ಎಂದು ವಿಷಾದಿಸಿದರು.



ನಗರದಲ್ಲಿ ಭಾನುವಾರ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾಜಿ ರಾಜ್ಯಪಾಲ ಎಚ್ ಆರ್ ಭಾರದ್ವಾಜ್, ಕೇಂದ್ರದ ಮಾಜಿ ಸಚಿವ ಎಂ.ವಿ.ರಾಜಶೇಖರನ್, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಹೊ.ಶ್ರೀನಿವಾಸಯ್ಯ ಮತ್ತಿತರರು ಭಾಗವಹಿಸಿದ್ದರು.


''ಗಾಂಧಿ ಟೋಪಿ, ತ್ರಿವರ್ಣ ಧ್ವಜದ ಪೋಷಾಕಿನಲ್ಲಿರುವವರು ನಿಜವಾದ ಗಾಂಧಿವಾದಿಗಳಾಗಿಲ್ಲ. ಇವರು ಗಾಂಧಿಯ ವಿಚಾರಧಾರೆಗಳಿಗೆ ವಿರುದ್ಧವಾಗಿದ್ದಾರೆ. ಕೆಲವರು ವೈಯಕ್ತಿಕ ಲಾಭಕ್ಕಾಗಿ ಹಿಂಸೆಗೆ ಒತ್ತು ನೀಡುತ್ತಿದ್ದಾರೆ. ರೈತರ ಆತ್ಮಹತ್ಯೆಗಳು ನಡೆಯುತ್ತಿರುವುದು ನಿಜಕ್ಕೂ ದುರದೃಷ್ಟಕರ. ಕೈಗಾರೀಕರಣಕ್ಕಾಗಿ ಕೃಷಿಯನ್ನು ನಿರ್ಲಕ್ಷ್ಯ ಮಾಡುವುದು ಸರಿಯಲ್ಲ. ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಬೇಕೆಂದು ಗಾಂಧೀಜಿ ಪ್ರತಿಪಾದಿಸುತ್ತಿದ್ದರು,'' ಎಂದು ತಿಳಿಸಿದರು.

ರಾಜ್ಯಸಭೆಯ ಮಾಜಿ ಸದಸ್ಯ ಎಚ್.ಹನುಮಂತಪ್ಪ ಮಾತನಾಡಿ ''ಸುಭಾಷ್‌ಚಂದ್ರ ಬೋಸ್ ಮತ್ತು ಸರ್ದಾರ್ ಪಟೇಲ್ ಅವರು ಪ್ರಧಾನಿಯಾಗಬೇಕಿತ್ತೆಂದು ಎಲ್ಲರೂ ಹೇಳುತ್ತಾರೆ. ಸ್ವಾತಂತ್ರ್ಯಕ್ಕೆ ಮುನ್ನವೇ ಬೋಸ್ ನಿಧನರಾದರು. ಮೊದಲ ಚುನಾವಣೆಗೆ ಮುನ್ನವೇ ಪಟೇಲ್ ದೈವಾಧೀನರಾದರು. ಹೀಗಿರುವಾಗ ಪ್ರಧಾನಿಯಾಗಲು ಹೇಗೆ ಸಾಧ್ಯವಿತ್ತು,'' ಎಂದು ಪ್ರಶ್ನಿಸಿದರು.

ಕೇಂದ್ರದ ಮಾಜಿ ಸಚಿವ ಎಂ.ವಿ.ರಾಜಶೇಖರನ್, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಹೊ.ಶ್ರೀನಿವಾಸಯ್ಯ, ಡಾ. ವೂಡೇ ಪಿ.ಕೃಷ್ಣ, ಮುರಳೀಧರ ಹಾಲಪ್ಪ ಮತ್ತಿತರರು ಉಪಸ್ಥಿತರಿದ್ದರು.

ಈ ಸಂಜೆ

ಶುಕ್ರವಾರ, 04-09-2015



ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ವತಿಯಿಂದ ನಗರದಲ್ಲಿಂದು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪಿ.ಕೆ.ತ್ಯಾಗರಾಜನ್, ಡಾ.ಎಸ್. ಗೋಮತಿನಯಗಮ್, ಅನಿರುದ್ ಕುಮಾರ್ ಹಾಗೂ ಡಾ.ಟಿ.ವಿ.ಗೋವಿಂದರಾಜ್ ಅವರಿಗೆ ಅತ್ಯುತ್ತಮ ಎಂಜಿನಿಯರ್ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ನವೀಕರಿಸಬಹುದಾದ ಇಂಧನ ಸಚಿವಾಲಯದ ಕಾರ್ಯದರ್ಶಿ ಉಪೇಂದ್ರ ತ್ರಿಪಾಠಿ, ಡಾ.ವೂಡೆ ಪಿ.ಕೃಷ್ಣ ಪ್ರೊ.ಆರ್.ಎಂ. ವಾಸಗಮ್, ಪ್ರದೀಪ್ ಚತುರ್ವೇದಿ ಮತ್ತಿತರರು ಉಪಸ್ಥಿತರಿದ್ದರು.

ವಿಜಯ ಕರ್ನಾಟಕ VK ಮಂಗಳವಾರ, 25 ಆಗಸ್ಟ್ 2015

ಟಾಟಾ ಕೃತಿ ಬಿಡುಗಡೆ ಸಮಾರಂಭದಲ್ಲಿ ನ್ಯಾ ಎ ಜೆ ಸದಾಶಿವ ಶ್ಲಾಘನೆ

ದೇಶಕ್ಕೆ ಪಾರ್ಸಿಗಳ ಕೊಡುಗೆ ಅಪಾರ


■ ವಿಕ ಸುದ್ದಿಲೋಕ ಬೆಂಗಳೂರು

ಬೇರಾವುದೋ ದೇಶದಿಂದ ನಮ್ಮ ದೇಶಕ್ಕೆ ಬಂದು ನೆಲೆಸಿದ ಹೆಚ್ಚಿನ ಸಮುದಾಯಗಳೆಲ್ಲ ಬರಿ ಆಕ್ರಮಣದಲ್ಲೇ ಕಾಲ ಕಳೆದವು. ಆದರೆ ಪಾರ್ಸಿಗಳು ಮಾತ್ರ ಭಾರತೀಯರಿಗಿಂತ ಹೆಚ್ಚು ಭಾರತೀಯರಾದರು ಎಂದು ನಿವೃತ್ತ ನ್ಯಾ. ಎ.ಜೆ. ಸದಾಶಿವ ಶ್ಲಾಘಿಸಿದರು.

ಮನ್ನಾರ್ ಎಸ್ ಕೃಷ್ಣರಾವ್ ಅವರ 'ಅಸಮಾನ ಭಾರತೀಯ ಜೆ.ಎನ್. ಟಾಟಾ' ಕೃತಿಯನ್ನು ನಗರದಲ್ಲಿ ಭಾನುವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

''ಪಾರ್ಸಿ ಸಮುದಾಯವು ದೇಶಕ್ಕೆ ಅತ್ಯುತ್ತಮ ನ್ಯಾಯವಾದಿಗಳು, ನ್ಯಾಯಮೂರ್ತಿಗಳು, ಕ್ರೀಡಾಪಟುಗಳು, ಉದ್ಯಮಿಗಳು, ವಿಜ್ಞಾನಿಗಳು ಮತ್ತು ರಾಜಕಾರಣಿಗಳನ್ನು ಕೊಡುಗೆಯಾಗಿ ಕೊಟ್ಟಿದೆ. ವೈಯಕ್ತಿಕ ಲಾಭದ ಅಪೇಕ್ಷೆ ಇಲ್ಲದೆ ದುಡಿದು, ದೇಶಕ್ಕಾಗಿ ಸಂಪತ್ತನ್ನು ಸೃಷ್ಟಿಸಿದವರೆಂದರೆ ಪಾರ್ಸಿಗಳು ಮಾತ್ರ. ಅವರಿಂದ ನಾವೆಲ್ಲರೂ ಕಲಿಯಬೇಕಾದದ್ದು ಬಹಳಷ್ಟಿದೆ,'' ಎಂದು ಅವರು ನುಡಿದರು.

''ನಾವೆಲ್ಲ ಇನ್ನೂ ಮೇಲ್ಜಾತಿ, ಕೆಳಜಾತಿ, ಬಡವ-ಬಲ್ಲಿದ, ನಮ್ಮವರು-ಬೇರೆಯವರು ಎಂಬ



ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಅಸಮಾನ ಭಾರತೀಯ ಜೆ.ಎನ್.ಟಾಟಾ' ಜೀವನ ಚರಿತ್ರೆ ಬಿಡುಗಡೆ ಮಾಡಲಾಯಿತು. ಕೃತಿಕಾರ ಮನ್ನಾರ್ ಎಸ್. ಕೃಷ್ಣರಾವ್, ವೂಡೇ ಪಿ. ಕೃಷ್ಣ, ನಿವೃತ್ತ ನ್ಯಾ. ಎ.ಜೆ.ಸದಾಶಿವ ಮತ್ತು ಡಾ. ಎಸ್. ರಂಗನಾಥ್ ಉಪಸ್ಥಿತರಿದ್ದರು.

ಕಿತ್ತಾಟಗಳಲ್ಲೇ ಮುಳುಗಿದ್ದೇವೆ,'' ಎಂದು ಅವರು ವಿಶ್ಲೇಷಿಸಿದರು.

ಕೃತಿ ಕುರಿತು ಮಾತನಾಡಿದ ಸಂಸ್ಕೃತ ವಿದ್ವಾಂಸ ಡಾ. ಎಸ್. ರಂಗನಾಥ್ ''ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುವುದೇ ಸಂಸ್ಕೃತಿ ಮತ್ತು ಸಾಹಿತ್ಯದ ಕೆಲಸ. ಇಂದು ಇಡೀ ಜಗತ್ತಿನ ರಾಷ್ಟ್ರಗಳು ನಾಗರಿಕತೆಗಾಗಿ ಪಶ್ಚಿಮದ ದೇಶಗಳತ್ತ ನೋಡುತ್ತಿವೆ. ಆದರೆ, ಆ ಪಶ್ಚಿಮದ ಜಗತ್ತು ಸಂಸ್ಕೃತಿಗಾಗಿ ಭಾರತದತ್ತ ನೋಡುತ್ತಿದೆ. ಇದನ್ನು ಕಂಡುಕೊಳ್ಳದ ನಮ್ಮ ನೀತಿ ನಿರೂಪಕರು ಪಾಶ್ಚಾತ್ಯ ಶಿಕ್ಷಣ ಕ್ರಮವನ್ನು ದೇಶದ ಮೇಲೆ ಹೇರಿರುವುದೇ ಸಮಸ್ಯೆಗಳಿಗೆ ಮೂಲ,'' ಎಂದರು.

''ನಮ್ಮಲ್ಲಿ ವಿಶ್ವವೇ ಒಂದು ಕುಟುಂಬ ಎನ್ನುವ ಪ್ರಜ್ಞೆ ಮೊದಲಿನಿಂದಲೂ ಇದೆ. ಋಗ್ವೇದದಲ್ಲಿ ಕೂಡ ನಾವೆಲ್ಲ ಒಂದಾಗಿರೋಣ ಎನ್ನುವ ಸಂದೇಶ ಅಡಗಿದೆ. ಆದರೆ ಇದೆಲ್ಲವನ್ನೂ ಮರೆತು ಅಂಧಾನುಕರಣೆ ಮಾಡುತ್ತಿರುವುದು ದುರಂತ,'' ಎಂದು ಹೇಳಿದರು.

ವೂಡೇ ಪಿ. ಕೃಷ್ಣ ಮಾತನಾಡಿ ''ದೇಶದಲ್ಲಿ ಉದ್ಯಮಶೀಲತೆಗೆ ಒಂದು ಹೊಸ ಚಹರೆ ತಂದುಕೊಟ್ಟವರೆಂದರೆ ಜೆ.ಎನ್. ಟಾಟಾ. ಅವರಿಂದಾಗಿ ಉದ್ಯಮರಂಗಕ್ಕೆ ಹೊಸ ವ್ಯಾಖ್ಯಾನ ಸಿಕ್ಕಿತು,'' ಎಂದು ವಿವರಿಸಿದರು.

ಸಂಯುಕ್ತ ಕರ್ನಾಟಕ ಸೋಮವಾರ 24 ಆಗಸ್ಟ್ 2015

ದೇಶದ ಸಂಸ್ಕೃತಿಗೆ ಪಾರ್ಸಿಗಳ ಕೊಡುಗೆ ಅಪಾರ

ಬೆಂಗಳೂರು

ದೇಶಕ್ಕೆ ವಲಸೆ ಬಂದವರು ಈ ದೇಶವನ್ನು ಕಿತ್ತು ತಿಂದವರೇ ಹೆಚ್ಚು ಹೊರತು ಕೊಡುಗೆ ಕೊಟ್ಟವರು ತೀರಾ ಕಮ್ಮಿ. ಅಂತಹವರಲ್ಲಿ ಪಾರ್ಸಿಗಳು ಬಹುಭಿನ್ನವಾಗಿ ನಿಲ್ಲುತ್ತಾರೆಂದು ನಿವೃತ್ತ ನ್ಯಾ. ಎಜೆ. ಸದಾಶಿವ ಅಭಿಪ್ರಾಯಪಟ್ಟರು.

ಮ.ಸು.ಮನ್ನಾರ್ ಕೃಷ್ಣರಾವ್ ಅವರು ರಚಿತ ಜೆ.ಎನ್.ಟಾಟಾ ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿ, ಟಾಟಾ

> "ಭಾರತದ ಮೇಲೆ ದಂಡೆತ್ತಿ ಬಂದನೇಕರು ದಾಳಿ ಮಾಡಿ ಇಲ್ಲಿನ ಅಪಾರ ಸಂಪತ್ತನ್ನು ದೋಚಿದವರೇ ಹೊರತು, ಕೊಡುಗೆ ಕೊಟ್ಟವರ ಸಂಖ್ಯೆ ತೀರಾ ಕಮ್ಮಿ. ಅಂತವರಲ್ಲಿ ಪಾರ್ಸಿಗಳದ್ದು ಭಿನ್ನವಾದ ನಿಲುವು.
>
> –ನ್ಯಾ. ಎಜೆ ಸದಾಶಿವ

ಹಾಗೂ ಬಿರ್ಲಾ ಭಾರತ ದೇಶದ ಬಗ್ಗೆ ಅಪಾರ ಅಭಿಮಾನ ಹೊಂದಿದವರು. ಮೂಲತಃ ಪಾರ್ಸಿ ಜನಾಂಗದವರು. ಹಾಗಿದ್ದರೂ, ಪಾರ್ಸಿ ಜನಾಂಗವು ಕಲೆ, ಸಂಸ್ಕೃತಿ, ಸಂಗೀತ, ಕೈಗಾರಿಕಾ ರಂಗ ಹೀಗೆ ಎಲ್ಲಾ ಕ್ಷೇತ್ರದಲ್ಲಿಯೂ ತಮ್ಮದೆ ಆದ ಕೊಡುಗೆ ನೀಡಿದ್ದಾರೆ. ಪಾರ್ಸಿ ಜನಾಂಗವು ದೇಶಕ್ಕೆ ಉತ್ತಮ ವಕೀಲರು, ನ್ಯಾಯಾಧೀಶರು, ವಿಜ್ಞಾನಿಗಳು, ರಾಜಕೀಯ ನಾಯಕರು, ಕೈಗಾರಿಕೋದ್ಯಮಿಗಳನ್ನು ನೀಡಿದೆ ಎಂದು ಶ್ಲಾಘಿಸಿದರು.

ಜೆ.ಎನ್. ಟಾಟಾ ತಮ್ಮ ಒಟ್ಟು ಆಸ್ತಿಯ ಅರ್ಧ ಭಾಗವನ್ನು ಈ ದೇಶಕ್ಕೆ ಧಾನವಾಗಿ ನೀಡಿದ್ದಾರೆ. ಅವರು ಈ ದೇಶದ ಇತಿಹಾಸದ ಒಂದು ಭಾಗವಾಗಿ ಗುರುತಿಸಿಕೊಂಡಿದ್ದಾರೆ. ಪಾರ್ಸಿಗಳು ವಲಸಿಗರಾಗಿದ್ದರೂ, ಭಾರತದಲ್ಲಿ ಹಾಲಿನಲ್ಲಿ ಸಕ್ಕರೆಯಂತೆ ಬೆರೆತಿದ್ದಾರೆ. ಯಥೋಚಿತ ನಡವಳಿಕೆ ಮೂಲಕ ಭಾರತೀಯರಿಗೆ ತಿಳಿ ಹೇಳಿದ್ದರೂ, ಇಂದಿಗೂ ಭಾರತೀಯರು ಜಾತಿ, ಮತ, ಧರ್ಮ, ಮೇಲು–ಕೀಳೆಂಬ ಸಂಕುಚಿತ ಭಾವನೆಯಿಂದ ಹೊರಬರಲಾಗುತ್ತಿಲ್ಲ. ಇಂತಹ ವರ್ತನೆಗೆ ನಾವಾಗಿಯೇ ನಾಚಿಕೆ ಪಟ್ಟುಕೊಳ್ಳುವಂತಹ ಪರಿಸ್ಥಿತಿ ಇದೆ ಎಂದು ಹೇಳಿದರು.

ಟಾಟಾ ಬಿರ್ಲಾ ಗೊತ್ತಿತ್ತು

ತಮ್ಮ ಬಾಲ್ಯದ ಸಂಗತಿಗಳನ್ನು ಪ್ರಸ್ತಾಪಿಸಿದ ಅವರು, ಚಿಕ್ಕವನಾಗಿದ್ದಾಗ ಊರಲ್ಲಿ ಒಂದು ರೂ.ಗಳು ತೋರಿಸಿ ಜಂಭ ತೋರಿಸಿದಾಗ ಏನೋ, ನೀನೇನೂ ಟಾಟಾ–ಬಿರ್ಲಾ ಅಂದ್ಕೊಂಡೀಯಾ.. ಎನ್ನುತ್ತಿದ್ದರು. 60 ವರ್ಷಗಳ ಹಿಂದೆಯೇ ದೇಶದ ಹಳ್ಳಿಹಳ್ಳಿಯಲ್ಲೂ ಜನರಿಗೆ ಟಾಟಾ, ಬಿರ್ಲಾ ಗೊತ್ತಾಗಿದ್ದರು. ನಾನೂ ಕೂಡ ಟಾಟಾ, ಬಿರ್ಲಾ ಎಂದರೆ ಬರೀ ದುಡ್ಡು ಇರುವವರು ಎಂದಷ್ಟೇ ತಿಳಿದುಕೊಂಡಿದ್ದೇ. ಅವರ ಬಗೆಗಿನ ಪುಸ್ತಕ ಓದಿದ ನಂತರ ಗೊತ್ತಾಗಿದ್ದು, ಅವರ ಬದುಕಿನ ಕಷ್ಟ ಎಂದರು.

ವ್ಡೋಡೆ ಪಿ. ಕೃಷ್ಣ ಮಾತನಾಡಿ, ಟಾಟಾ ಕೇವಲ ಉದ್ಯಮಿ ಮಾತ್ರವಲ್ಲ. ಮಹಾನ್ ದೇಶ ಭಕ್ತ ಕೂಡ ಹೌದು. ಮೊದಲು ನಾನು ಭಾರತೀಯ ತದನಂತರ ಪಾರ್ಸಿ ಜನಾಂಗದವ ಎಂದು ಹೇಳುತ್ತಿದ್ದರು. ಭಾರತದಲ್ಲಿ ಕೈಗಾರಿಕೋದ್ಯಮದ ಬಗ್ಗೆ ಅರಿವಿಲ್ಲದಂತಹ ಸಂದರ್ಭದಲ್ಲಿ ಕೈಗಾರಿಕಾ ಕ್ರಾಂತಿ ಹುಟ್ಟಿಹಾಕಿದವರು. ಇಂದು ಟಾಟಾ ಸಂಸ್ಥೆ ನೂರಕ್ಕೂ ಹೆಚ್ಚಿನ ಕಂಪೆನಿಗಳನ್ನು ಹೊಂದಿದೆ. ಜಗತ್ತಿನ 80 ರಾಷ್ಟ್ರಗಳಲ್ಲಿ ವಹಿವಾಟು ಹೊಂದಿದೆ. ಟಾಟಾ, ದೇಶ ಮತ್ತು ಜನರ ಸೇವೆಗೆ ತಮ್ಮ ಜೀವನ ಮುಡಿಪಾಗಿಟ್ಟಿದ್ದರು. ಭಾರತೀಯ ಕೈಗಾರಿಕಾ ರಂಗದೊಂದಿಗೆ ಮಾನವೀಯ ಮೌಲ್ಯಗಳಿಗೂ ಜೀವ ತುಂಬಿದ ಖ್ಯಾತಿ ಅವರದು ಎಂದರು.



ಮ.ಸು.ಮನ್ನಾರ್ ಕೃಷ್ಣರಾವ್ ಅವರು ರಚಿತ ಅಸಮಾನ ಭಾರತೀಯ ಜೆ.ಎನ್.ಟಾಟಾ ಕೃತಿಯನ್ನು ಡಾ.ವ್ಡೋಡೆ ಪಿ.ಕೃಷ್ಣ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ನ್ಯಾ.ಎ.ಜೆ.ಸದಾಶಿವ, ಡಾ.ಎಸ್. ರಂಗನಾಥ, ಲೇಖಕ ಮನ್ನಾರ್ ಕೃಷ್ಣರಾವ್ ಉಪಸ್ಥಿತರಿದ್ದರು.

ಆರ್.ವಿ.ಸಂಸ್ಕೃತ ಅಧ್ಯಯನ ಕೇಂದ್ರದ ನಿರ್ದೇಶಕ ಎಸ್. ರಂಗನಾಥ್, ಮನ್ನಾರ್ ಅವರು ಪ್ರಾಧ್ಯಾಪಕ ಲೋಕದಲ್ಲಿ ಮತ್ತು ಸಾಹಿತ್ಯ ಲೋಕದಲ್ಲಿ ಅಚ್ಚಳಿಯದೆ ಉಳಿಯುತ್ತಾರೆ. ಎಲ್ಲಾ ಅಧ್ಯಾಪಕರಿಗೆ ಬರಹ ಇರಲ್ಲ. ಬರಹ ಇರುವವರಿಗೆ ಎಷ್ಟೋ ಮಂದಿಗೆ ಕವಿತ್ವ ಇರಲ್ಲ. ಕವಿತ್ವ ಇರುವವರಿಗೆ ಸಂಶೋಧನೆ ತಿಳಿದಿರುವುದಿಲ್ಲ. ಆದರೆ ಈ ಮೂರು ಕೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಪ್ರಾಧ್ಯಾಪಕ ಹೇಗಿರಬೇಕು ಎಂಬುದಕ್ಕೆ ಇವರು ಸ್ಪಷ್ಟ ಉದಾಹರಣೆಯಾಗಿದ್ದಾರೆ.

ಈ ಪುಸ್ತಕದಲ್ಲಿ ಟಾಟಾ ಅವರ ಜೀವನ ಚರಿತ್ರೆಯ ಮಾಹಿತಿ ಇದೆ. ಟಾಟಾ ಜೀವನ ಕುರಿತು ಇಂಗ್ಲಿಷ್ ನಲ್ಲಿ ಅನೇಕ ಪುಸ್ತಕಗಳು ಬಂದಿವೆ. ಆದರೆ, ಕನ್ನಡದಲ್ಲಿ ಈ ವರೆಗೆ ಯಾವುದೇ ಪುಸ್ತಕ ಬಂದಿರಲಿಲ್ಲ 108 ಟಿಪ್ಪಣಿಗಳೊಂದಿಗೆ ಟಾಟಾ ಅವರು ಭಾರತೀಯ ಕೈಗಾರಿಕಾ ರಂಗದಲ್ಲಿ ಮಾಡಿದ ಕ್ರಾಂತಿ, ಅವರ ಜೀವನ ಸಾಧನೆ, ವಿವೇಕಾನಂದರು ಅವರಿಂದ ಟಾಟಾ ಅವರು ಪಡೆದ ಸ್ಫೂರ್ತಿ, ವಿಶ್ವೇಶ್ವರಯ್ಯ ಅವರೊಂದಿಗಿನ ಒಡನಾಟ ಸೇರಿದಂತೆ ಟಾಟಾ ಅವರು ಸಂಪೂರ್ಣ ಜೀವನ ಚರಿತ್ರೆಯನ್ನು ಈ ಪುಸ್ತಕದಲ್ಲಿ ಸುಲಲಿತವಾಗಿ, ಸ್ವಾರಸ್ಯಕರ ಮತ್ತು ಸರ್ವರಿಗೂ ಅರ್ಥವಾಗುವ ರೀತಿಯಲ್ಲಿ ಪರಿಚಯಿಸಿದ್ದಾರೆಂದರು.

ಉದಯವಾಣಿ ಸೋಮವಾರ | ಆಗಸ್ಟ್ | 24 | 2015

ಶ್ಲಾಘನೆ

'ಟಾಟಾ ಉದ್ಯಮಿ, ಜತೆಗೆ ಮಹಾ ದೇಶಭಕ್ತ'

ನಿವೃತ್ತ ನ್ಯಾಯಮೂರ್ತಿ ಎ.ಜೆ.ಸದಾಶಿವ ಅವರಿಂದ 'ಅಸಮಾನ ಭಾರತೀಯ ಜೆ.ಎನ್.ಟಾಟಾ' ಪುಸ್ತಕ ಬಿಡುಗಡೆ

ಬೆಂಗಳೂರು: ಭಾರತದಲ್ಲಿ ಕೈಗಾರಿಕಾ ಕ್ರಾಂತಿಗೆ ನಾಂದಿ ಹಾಡಿದ ಜೆ.ಎನ್.ಟಾಟಾ ಕೇವಲ ಕೈಗಾರಿಕೋದ್ಯಮಿಯಲ್ಲದೆ ಮಹಾನ್ ದೇಶಭಕ್ತರಾಗಿದ್ದರು ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಶ್ಲಾಘಿಸಿದರು.

ನಗರದ ಬಿ.ಪಿ.ವಾಡಿಯಾ ಸಭಾಂಗಣದಲ್ಲಿ ಭಾನುವಾರ ಪ್ರಾಧ್ಯಾಪಕ ಮ.ಸು.ಮನ್ನಾರ್ ಕೃಷ್ಣರಾವ್ ಅವರು ರಚಿಸಿದ 'ಅಸಮಾನ ಭಾರತೀಯ ಜೆ.ಎನ್.ಟಾಟಾ' ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ನಾನು ಚಿಕ್ಕವನಾಗಿದ್ದಾಗ ನಮ್ಮ ಹಳ್ಳಿಯಲ್ಲಿ ಯಾರಾದರೂ ಒಂದು ರುಪಾಯಿ ತೋರಿಸಿ ಜಂಭಕೊಚ್ಚಿಕೊಂಡರೆ, 'ಏನೋ ನೀನು ಟಾಟಾ -ಬಿರ್ಲಾ ಅಂದ್ಕೊಂಡಿದ್ದೀಯಾ' ಎಂದು ಚುಡಾಯಿಸುತ್ತಿದ್ದೆವು. ಅಂದರೆ 60 ವರ್ಷಗಳ ಹಿಂದೆಯೇ ದೇಶದ ಹಳ್ಳಿ ಹಳ್ಳಿಯಲ್ಲೂ ಟಾಟಾ -ಬಿರ್ಲಾ ಪ್ರಚಲಿತರಾಗಿದ್ದರು. ಟಾಟಾ-ಬಿರ್ಲಾ ಶ್ರೀಮಂತರು ಎಂಬುದಷ್ಟೇ ನನಗೆ ಆಗ ತಿಳಿದಿತ್ತು. ಆದರೆ, ಅವರ ಕುರಿತ ಪುಸ್ತಕಗಳನ್ನು ಓದಿ ಅವರ ಬದುಕು ಹಾಗೂ ದೇಶಕ್ಕೆ ಕೊಟ್ಟ ಕೊಡುಗೆಗಳ ಅಪಾರತೆಯನ್ನು ಅರಿತುಕೊಂಡೆ ಎಂದರು.

ಜೆ.ಎನ್.ಟಾಟಾ ಕೇವಲ ಕೈಗಾರಿಕೋದ್ಯಮಿ ಆಗಿರಲಿಲ್ಲ, ಮಹಾನ್ ದೇಶಭಕ್ತರಾಗಿದ್ದರು. ಸ್ವಾತಂತ್ರ್ಯಪೂರ್ವದಲ್ಲೇ 60 ಲಕ್ಷ ರೂ. ಸಂಪಾದಿಸಿದ್ದರು. ದೇಶದಲ್ಲಿ ವಿಜ್ಞಾನ ಕ್ಷೇತ್ರ ಬೆಳವಣಿಯಾಗಬೇಕು ಎಂಬ ದೃಷ್ಟಿಯಿಂದ ವಿಜ್ಞಾನ ಕಲಿಕಾ ಸಂಸ್ಥೆ ಸ್ಥಾಪಿಸಲು ಅಂದಿನ ಸರ್ಕಾರಕ್ಕೆ 30 ಲಕ್ಷ ರೂ. ದಾನ ಮಾಡಿದ್ದರು. ಭಾರತ ದೇಶದ ಬಗ್ಗೆ ಅಪಾರ ಅಭಿಮಾನ ಹೊಂದಿದ್ದರು ಎಂದರು.




ನಗರದ ಬಿ.ಪಿ.ವಾಡಿಯಾ ಸಭಾಂಗಣದಲ್ಲಿ ಪ್ರಾಧ್ಯಾಪಕ ಮ.ಸು. ಮನ್ನಾರ್ ಕೃಷ್ಣರಾವ್ ಅವರು ರಚಿಸಿದ 'ಅಸಮಾನ ಭಾರತೀಯ ಜೆ.ಎನ್.ಟಾಟಾ' ಕೃತಿಯನ್ನು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸದಾಶಿವ ಲೋಕಾರ್ಪಣೆಗೊಳಿಸಿದರು. ವೊಡೇ ಪಿ. ಕೃಷ್ಣ ಆರ್.ವಿ. ಸಂಸ್ಕೃತ ಅಧ್ಯಯನ ಕೇಂದ್ರದ ನಿರ್ದೇಶಕ ಎಸ್. ರಂಗನಾಥ್, ಲೇಖಕ ಮ.ಸು.ಮನ್ನಾರ್ ಕೃಷ್ಣಮೂರ್ತಿ ಇದ್ದರು.

ವೊಡೇ ಪಿ.ಕೃಷ್ಣ ಮಾತನಾಡಿ, ಭಾರತದಲ್ಲಿ ಸ್ವತಂತ್ರ ಉದ್ಯಮದ ಪರಿಜ್ಞಾನವೇ ಇಲ್ಲದ ಸಂದರ್ಭದಲ್ಲಿ ಟಾಟಾ ಅವರು ದೇಶದಲ್ಲಿ ಕೈಗಾರಿಕಾ ರಂಗ ಮತ್ತು ಉದ್ಯಮಶೀಲತೆ ಬೆಳೆಸಿದರು. ಪ್ರಸ್ತುತ ಟಾಟಾ ಸಂಸ್ಥೆ 100ಕ್ಕೂ ಹೆಚ್ಚು ಕಂಪನಿ ಹೊಂದಿ, ಜಗತ್ತಿನ 80 ರಾಷ್ಟ್ರಗಳಲ್ಲಿ ವಹಿವಾಟು ನಡೆಸುತ್ತಿದೆ. ಅಲ್ಲದೆ, ಟಾಟಾ ದೇಶ ಹಾಗೂ ಜನರ ಸೇವೆ ಮಾಡಿದರು ಹಾಗೂ ಉದ್ಯಮಶೀಲತೆಯೊಂದಿಗೆ ಕಾರ್ಮಿಕರ ಬಗ್ಗೆ ಉದ್ಯಮವು ವಹಿಸಬೇಕಾದ ಮಾನವೀಯತೆ ಬಗ್ಗೆಯೂ ಹೇಳಿಕೊಟ್ಟರು ಎಂದರು.

ಆರ್.ವಿ.ಸಂಸ್ಕೃತ ಅಧ್ಯಯನ ಕೇಂದ್ರದ ನಿರ್ದೇಶಕ ಎಸ್. ರಂಗನಾಥ್, ಅಧ್ಯಾಪಕರಿಗೆ ಉತ್ತಮ ಬರವಣಿಗೆ ಇರುವುದಿಲ್ಲ, ಬರವಣಿಗೆ ಇದ್ದವರಿಗೆಲ್ಲಾ ಕವಿತ್ವ ಇರುವುದಿಲ್ಲ, ಕವಿತ್ವ ಹೊಂದಿರುವವರಿಗೆ ಸಂಶೋಧನೆ ತಿಳಿದಿರುವುದಿಲ್ಲ. ಈ ಮೂರು ಕ್ಷೇತ್ರದಲ್ಲಿ ಹಿಡಿತ ಸಾಧಿಸಿದವರು ಮ.ಸು.ಮನ್ನಾರ್ ಕೃಷ್ಣರಾವ್. ಟಾಟಾ ಅವರ ಜೀವನ ಚರಿತ್ರೆ ಕುರಿತು ಇಂಗ್ಲಿಷ್‌ನಲ್ಲಿ ಅನೇಕ ಪುಸ್ತಕಗಳು ಬಂದಿವೆ. ಆದರೆ, ಕನ್ನಡದಲ್ಲಿ ಬಂದಿರಲಿಲ್ಲ. ಈಗ ಮನ್ನಾರ್ ಅವರು 108 ಟಿಪ್ಪಣಿಗಳೊಂದಿಗೆ ಭಾರತೀಯ ಕೈಗಾರಿಕಾ ರಂಗದಲ್ಲಿ ಟಾಟಾ ಅವರು ಮಾಡಿದ ಕ್ರಾಂತಿ; ಅವರ ಜೀವನ ಸಾಧನೆಯ ಸಾಕಷ್ಟು ಮಾಹಿತಿ ನೀಡಿದ್ದಾರೆ. ಸ್ವಾರಸ್ಯಕರ ಮತ್ತು ಸರ್ವರಿಗೂ ಅರ್ಥವಾಗುವ ರೀತಿಯಲ್ಲಿ ಪರಿಚಯಿಸಿದ್ದಾರೆ. ಯುವಕರು ಈ ಪುಸ್ತಕ ಓದಿದರೆ ಜೀವನದ ಬಗ್ಗೆ ಸ್ಫೂರ್ತಿ ಪಡೆಯಲಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಲೇಖಕ ಮು.ಸು. ಮನ್ನಾರ್ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಸೋಮವಾರ
24 ಆಗಸ್ಟ್ 2015



ನಗರದ ಬಿ.ಪಿ.ವಾಡಿಯಾ ಸಭಾಂಗಣದಲ್ಲಿ ಮ.ಸು. ಮನ್ನಾರ್ ಕೃಷ್ಣ ರಚಿಸಿರುವ 'ಜೆ.ಎನ್.ಟಾಟಾ' ಕೃತಿಯನ್ನು ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಬಿಡುಗಡೆಗೊಳಿಸಿದರು. ಸಂಸ್ಕೃತ ವಿದ್ವಾಂಸ ಎಸ್. ರಂಗನಾಥ್, ಕೃತಿಕಾರ ಮ.ಸು.ಮನ್ನಾರ್ ಕೃಷ್ಣ ಮತ್ತಿತರರು ಹಾಜರಿದ್ದರು.

ಈ ಸಂಜೆ

ಭಾನುವಾರ, 23-08-2015



ವಿದ್ಯಾಶ್ರೀ ಪ್ರಕಾಶನ ಹೊರತಂದಿರುವ ಮ.ಸು.ಮನ್ನಾರ್ ಕೃಷ್ಣರಾವ್ ಅವರ ಅಸಮಾನ ಭಾರತೀಯ ಜೆ.ಎನ್.ಟಾಟಾ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಾಧೀಶ ಎ.ಜೆ.ಸದಾಶಿವ, ಡಾ.ವೂಡೆ.ಪಿ.ಕೃಷ್ಣ ಡಾ.ಎಸ್.ರಂಗನಾಥ್ ಸೇರಿದಂತೆ ಮತ್ತಿತರರಿದ್ದರು.

ಪ್ರಜಾವಾಣಿ ಶುಕ್ರವಾರ • ಜುಲೈ 31, 2015

ಗಾಂಧೀಜಿ ವ್ಯಕ್ತಿತ್ವ ರೂಪಿಸಿದ ಗುರು ಕಸ್ತೂರಬಾ: ಮಲ್ಲೇಪುರಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಸ್ತೂರಬಾ ಅವರಿಲ್ಲದೆ ಗಾಂಧೀಜಿ ಅವರು ಅಪೂರ್ಣ' ಎಂದು ಲೇಖಕ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ಅಭಿಪ್ರಾಯಪಟ್ಟರು.

ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ನಗರದಲ್ಲಿ ಗುರುವಾರ ಏರ್ಪಡಿಸಿದ್ದ ಲೀಲಾ ವಾಸುದೇವ್ ಅವರ 'ಮಕ್ಕಳ ಕಸ್ತೂರಬಾ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗಾಂಧೀಜಿ ಅವರ ಬಗ್ಗೆ ಸಾಕಷ್ಟು ಕೃತಿಗಳು ಬಂದಿವೆ. ಆದರೆ, ಅವರ ಪತ್ನಿ ಕಸ್ತೂರಬಾ ಅವರ ಬಗ್ಗೆ ಅಷ್ಟಾಗಿ ಲೇಖನಗಳು, ಪುಸ್ತಕಗಳು ರಚನೆಯಾಗಿಲ್ಲ. ಕಸ್ತೂರಬಾ ಅವರು ಗಾಂಧೀಜಿ ಅವರ ವ್ಯಕ್ತಿತ್ವವನ್ನು ರೂಪಿಸಿದ ಗುರು ಎಂದರು.

ಕಸ್ತೂರಬಾ ಅವರ ಕುರಿತು ಮಕ್ಕಳಿಗಾಗಿ ಕನ್ನಡದಲ್ಲಿ ಬಂದಿರುವ ಮೊದಲ ಕೃತಿ 'ಮಕ್ಕಳ ಕಸ್ತೂರಬಾ'. ಕಸ್ತೂರ ಬಾ ಅವರ ಆದರ್ಶಗಳು, ವಿಚಾರಗಳನ್ನು ಅತ್ಯಂತ ಸರಳವಾಗಿ ಈ ಕೃತಿ ಮೂಲಕ ಹೇಳಲಾಗಿದೆ ಎಂದು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಹೊ.ಶ್ರೀನಿವಾಸಯ್ಯ ಮಾತನಾಡಿ, 'ಕಸ್ತೂರಬಾ ಮೊದಲ ಸತ್ಯಾಗ್ರಹಿ. ಅವರು ಗಾಂಧೀಜಿ ಅವರಿಗೆ ಸತ್ಯಾಗ್ರಹದ ಪಾಠ ಕಲಿಸಿದವರು. ಮಕ್ಕಳು ಉತ್ತಮ ಮಾರ್ಗದಲ್ಲಿ ನಡೆಯಬೇಕಾದರೆ ಈ ಕೃತಿ ಮಕ್ಕಳಿಗೆ ತಲುಪಬೇಕು' ಎಂದು ಎಂದರು.



ಕಾರ್ಯಕ್ರಮದಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ವೂಡೆ ಪಿ.ಕೃಷ್ಣ ಅವರು 'ಮಕ್ಕಳ ಕಸ್ತೂರಬಾ' ಕೃತಿ ಬಿಡುಗಡೆ ಮಾಡಿ ಪ್ರತಿಯನ್ನು ಕೃತಿಯ ಲೇಖಕಿ ಲೀಲಾ ವಾಸುದೇವ್ ಅವರಿಗೆ ನೀಡಿದರು. ಹೊ.ಶ್ರೀನಿವಾಸಯ್ಯ, ಮಲ್ಲೇಪುರಂ ಜಿ.ವೆಂಕಟೇಶ್ ಅವರು ಚಿತ್ರದಲ್ಲಿದ್ದಾರೆ **ಪ್ರಜಾವಾಣಿ ಚಿತ್ರ**

ಪ್ರಜಾವಾಣಿ
ಶುಕ್ರವಾರ • ಜುಲೈ 31, 2015

ಗಾಂಧೀಜಿ ವ್ಯಕ್ತಿತ್ವ ರೂಪಿಸಿದ ಗುರು ಕಸ್ತೂರಬಾ: ಮಲ್ಲೇಪುರಂ

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ಕಸ್ತೂರಬಾ ಅವರಿಲ್ಲದೆ ಗಾಂಧೀಜಿ ಅವರು ಅಪೂರ್ಣ' ಎಂದು ಲೇಖಕ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ಅಭಿಪ್ರಾಯಪಟ್ಟರು.

ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ನಗರದಲ್ಲಿ ಗುರುವಾರ ಏರ್ಪಡಿಸಿದ್ದ ಲೀಲಾ ವಾಸುದೇವ್ ಅವರ 'ಮಕ್ಕಳ ಕಸ್ತೂರಬಾ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗಾಂಧೀಜಿ ಅವರ ಬಗ್ಗೆ ಸಾಕಷ್ಟು ಕೃತಿಗಳು ಬಂದಿವೆ. ಆದರೆ, ಅವರ ಪತ್ನಿ ಕಸ್ತೂರಬಾ ಅವರ ಬಗ್ಗೆ ಅಷ್ಟಾಗಿ ಲೇಖನಗಳು, ಪುಸ್ತಕಗಳು ರಚನೆಯಾಗಿಲ್ಲ. ಕಸ್ತೂರಬಾ ಅವರು ಗಾಂಧೀಜಿ ಅವರ ವ್ಯಕ್ತಿತ್ವವನ್ನು ರೂಪಿಸಿದ ಗುರು ಎಂದರು.

ಕಸ್ತೂರಬಾ ಅವರ ಕುರಿತು ಮಕ್ಕಳಿಗಾಗಿ ಕನ್ನಡದಲ್ಲಿ ಬಂದಿರುವ ಮೊದಲ ಕೃತಿ 'ಮಕ್ಕಳ ಕಸ್ತೂರಬಾ'. ಕಸ್ತೂರ ಬಾ ಅವರ ಆದರ್ಶಗಳು, ವಿಚಾರಗಳನ್ನು ಅತ್ಯಂತ ಸರಳವಾಗಿ ಈ ಕೃತಿ ಮೂಲಕ ಹೇಳಲಾಗಿದೆ ಎಂದು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಹೊ.ಶ್ರೀನಿವಾಸಯ್ಯ ಮಾತನಾಡಿ, 'ಕಸ್ತೂರಬಾ ಮೊದಲ ಸತ್ಯಾಗ್ರಹಿ. ಅವರು ಗಾಂಧೀಜಿ ಅವರಿಗೆ ಸತ್ಯಾಗ್ರಹದ ಪಾಠ ಕಲಿಸಿದವರು. ಮಕ್ಕಳು ಉತ್ತಮ ಮಾರ್ಗದಲ್ಲಿ ನಡೆಯಬೇಕಾದರೆ ಈ ಕೃತಿ ಮಕ್ಕಳಿಗೆ ತಲುಪಬೇಕು' ಎಂದು ಎಂದರು.



ಕಾರ್ಯಕ್ರಮದಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ವೂಡೆ ಪಿ.ಕೃಷ್ಣ ಅವರು 'ಮಕ್ಕಳ ಕಸ್ತೂರಬಾ' ಕೃತಿ ಬಿಡುಗಡೆ ಮಾಡಿ ಪ್ರತಿಯನ್ನು ಕೃತಿಯ ಲೇಖಕಿ ಲೀಲಾ ವಾಸುದೇವ್ ಅವರಿಗೆ ನೀಡಿದರು. ಹೊ.ಶ್ರೀನಿವಾಸಯ್ಯ, ಮಲ್ಲೇಪುರಂ ಜಿ.ವೆಂಕಟೇಶ್ ಅವರು ಚಿತ್ರದಲ್ಲಿದ್ದಾರೆ **ಪ್ರಜಾವಾಣಿ ಚಿತ್ರ**

ಶುಕ್ರವಾರ - ಜುಲೈ 31, 2015 ಪ್ರಜಾವಾಣಿ



ವಿಚಾರ ಸಂಕಿರಣವನ್ನು ಎಲ್. ಹನುಮಂತಯ್ಯ ಉದ್ಘಾಟಿಸಿದರು. ವೂಡೆ.ಪಿ.ಕೃಷ್ಣ, ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಎಚ್.ವಿ. ಶಿವಕುಮಾರ್ ಚಿತ್ರದಲ್ಲಿದ್ದಾರೆ

ಮಾತೃಭಾಷೆ ಸಾಂವಿಧಾನಿಕ ಹಕ್ಕಾಗಲಿ: ಹನುಮಂತಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾತೃಭಾಷೆ ಸಾಂವಿಧಾನಿಕ ಹಕ್ಕಾಗಬೇಕು. ಕನ್ನಡ ಅನ್ನದ ಭಾಷೆಯಾಗುವ ಮೂಲಕ ಉದ್ಯೋಗದ ಭರವಸೆಯನ್ನು ಮೂಡಿಸುವಂತಾಗಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಲ್.ಹನುಮಂತಯ್ಯ ಅಭಿಪ್ರಾಯಪಟ್ಟರು.

ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಗುರುವಾರ ಆಯೋಜಿಸಿದ್ದ 'ಪ್ರಸ್ತುತ ಕನ್ನಡ ಭಾಷೆ ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು' ಎಂಬ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ದೇಶಿ ಭಾಷೆಗಳನ್ನು ಉಳಿಸುವುದು ಇಂದಿನ ತುರ್ತು ಅಗತ್ಯ. ಹೀಗಾಗಿ, ಕೇಂದ್ರ ಸರ್ಕಾರ ಸಂವಿಧಾನಕ್ಕೆ ತಿದ್ದುಪಡಿ ತಂದು ಪ್ರಾಥಮಿಕ ಶಿಕ್ಷಣ ರಾಷ್ಟ್ರೀಕರಣ ಮಾಡುವ ಜತೆಗೆ, ಎಲ್ಲರಿಗೂ ಅವರವರ ಮಾತೃಭಾಷೆಯಲ್ಲಿಯೇ ಶಿಕ್ಷಣ ನೀಡುವ ವ್ಯವಸ್ಥೆ ಜಾರಿಗೆ ತರಬೇಕು' ಎಂದು ಹೇಳಿದರು.

ಶೇಷಾದ್ರಿಪುರ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೆ ಪಿ. ಕೃಷ್ಣ ಮಾತನಾಡಿ, 'ಸಾಹಿತಿಗಳು, ಶಿಕ್ಷಣ ತಜ್ಞರು, ಮನೋವಿಜ್ಞಾನಿಗಳು ಒಂದೇ ವೇದಿಕೆಯಲ್ಲಿ ತಂದು ಕನ್ನಡಿಗರಲ್ಲಿ ಏಕರೀತಿ ಪ್ರೀತಿ ಯಾವ ರೀತಿ ಹುಟ್ಟುಹಾಕಲು ಸಾಧ್ಯ ಎಂಬುದರ ಬಗ್ಗೆ ಚರ್ಚೆ ನಡೆಸುವ ಅಗತ್ಯವಿದೆ. ಆ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ' ಎಂದು ಅವರು ಅಭಿಪ್ರಾಯಪಟ್ಟರು.

ವಿಜಯ ಕರ್ನಾಟಕ VK
ಶುಕ್ರವಾರ,31 ಜುಲೈ 2015

'ಗಾಂಧೀಜಿ ಮನಸ್ಥಿತಿಯನ್ನು ಅರಿತಿದ್ದ ಕಸ್ತೂರಬಾ'

• ವಿಕ ಸುದ್ದಿಲೋಕ ಬೆಂಗಳೂರು

ದೇಶ ಸೇವೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದ ಗಾಂಧೀಜಿಯವರು, ಕೆಲವೊಮ್ಮೆ ಕಸ್ತೂರಬಾ ಅವರೊಂದಿಗೆ ನಿಷ್ಠುರವಾಗಿ ವರ್ತಿಸುತ್ತಿದ್ದರು. ಆದಾಗ್ಯೂ, ಕಸ್ತೂರಬಾ ಅವರು ಗಾಂಧೀಜಿಯವರ ಕೆಲಸಗಳಲ್ಲಿ ಕೈಜೋಡಿಸುತ್ತಿದ್ದರು ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್ ತಿಳಿಸಿದರು.

ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ನಗರದ ಗಾಂಧಿಭವನದ ಕಸ್ತೂರಬಾ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಲೀಲಾ ವಾಸುದೇವ್ ಅವರ 'ಮಕ್ಕಳ ಕಸ್ತೂರಬಾ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

''ಗಾಂಧೀಜಿಯವರ ಮನಸ್ಥಿತಿಯನ್ನು ಕಸ್ತೂರಬಾ ಅವರು ಚೆನ್ನಾಗಿ ಅರಿತು ಕೊಂಡಿದ್ದರು. ಹಾಗಾಗಿಯೇ, ಪತಿಯ ಆಶಯದಂತೆ ತಮ್ಮನ್ನು ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ತಾನು ಜನಿಸಿರುವುದು ದೇಶ ಸೇವೆ ಮಾಡಲಿಕ್ಕಾಗಿ ಎಂದು ಭಾವಿಸಿದ್ದರು. ಪುರುಷರ ಅಹಂಕಾರವನ್ನು ಮಹಿಳೆಯರಿಂದ ಮಣಿಸಲು ಸಾಧ್ಯ. ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯಿಲ್ಲದಿದ್ದರೆ, ಜೀವನ ನಿರ್ವಹಣೆ ಕಷ್ಟ'' ಎಂದು ಹೇಳಿದರು.

''1960ರವರೆಗೆ ಗಾಂಧೀಜಿಯವರ ತ್ಯಾಗ ಮತ್ತು ಹೋರಾಟಗಳ ಬಗ್ಗೆ ಮಾತ್ರ ಜನರಿಗೆ ಗೊತ್ತಿತ್ತು. ಅವರ ಶಕ್ತಿಯಾಗಿದ್ದ ಕಸ್ತೂರಬಾ ಅವರ ಕುರಿತು ಹೆಚ್ಚಿನ ಮಾಹಿತಿಯೇ ಇರಲಿಲ್ಲ. ಮಹಿಳಾ ಸಬಲೀಕರಣದ ಪ್ರಭಾವಳಿಯಿಂದಾಗಿ ಗಾಂಧೀಜಿಯವರೊಂದಿಗೆ ಸದಾ ಇರುತ್ತಿದ್ದ ಕಸ್ತೂರಬಾ ಅವರ ಸೇವೆ ಮತ್ತು ತ್ಯಾಗವೂ ಬೆಳಕಿಗೆ ಬಂದಿತು,'' ಎಂದು ಮಾಹಿತಿ ನೀಡಿದರು..

ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಹೊ.ಶ್ರೀನಿವಾಸಯ್ಯ ಮಾತನಾಡಿ, ''ಮಕ್ಕಳಿಗೆ ಕಲಿಸಬೇಕಿರುವುದು ವಿದ್ಯಾಭ್ಯಾಸವೇ ಹೊರತು, ಅಕ್ಷರಾಭ್ಯಾಸವಲ್ಲ, ಅಕ್ಷರಾಭ್ಯಾಸದಿಂದ ಜೀವನ ಸಾಗಿಸುವುದು ಕಷ್ಟ, ವಿದ್ಯಾಭ್ಯಾಸ ಮಾಡಿದರೆ, ವಿಶ್ವದ ಯಾವುದೇ ಮೂಲೆಯಲ್ಲಾದರೂ ಬದುಕು ಕಟ್ಟಿಕೊಳ್ಳಬಹುದು,'' ಎಂದು ಹೇಳಿದರು.

''ಗಾಂಧೀಜಿಗಿಂತ ಮೊದಲು ಸತ್ಯಾಗ್ರಹ ಆರಂಭಿಸಿದ್ದವರು ಕಸ್ತೂರಬಾ. ತಮ್ಮದಲ್ಲದ ತಪ್ಪಿಗೆ ಶಿಕ್ಷೆ ಪಡೆಯುವಾಗಲೂ, ಶಾಂತವಾಗಿ ವಿರೋಧಿಸುತ್ತಿದ್ದರು. ಆ ಮುಖೇನ ಸತ್ಯದ ಪರವಾಗಿ ಹೋರಾಟ ನಡೆಸುತ್ತಿದ್ದರು,'' ಎಂದು ತಿಳಿಸಿದರು.

ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಪ್ರೊ. ಜಿ.ಬಿ.ಶಿವರಾಜು, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ ಉಪಸ್ಥಿತರಿದ್ದರು.




ನಗರದ ಗಾಂಧಿಭವನದ ಕಸ್ತೂರಬಾ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣ ಅವರು ಲೀಲಾ ವಾಸುದೇವ್ ಅವರ 'ಮಕ್ಕಳ ಕಸ್ತೂರಬಾ' ಪುಸ್ತಕ ಬಿಡುಗಡೆ ಮಾಡಿದರು. ಕರ್ನಾಟಕ ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್, ಡಾ. ಹೊ.ಶ್ರೀನಿವಾಸಯ್ಯ ಮತ್ತಿತರರು ಉಪಸ್ಥಿತರಿದ್ದರು.

ಬೆಂಗಳೂರು
ಗುರುವಾರ, 30 ಜುಲೈ 2015
ಹೊಸ ದಿಗಂತ

ವಿಟಿಯು ಕುಲಪತಿ ಡಾ.ಎಚ್.ಮಹೇಶಪ್ಪ ಅಭಿಮತ

ಡಿಜಿಟಲ್ ಇಂಡಿಯಾದಿಂದ ಉತ್ಪಾದನಾ ಕ್ಷೇತ್ರಕ್ಕೆ ಉತ್ತೇಜನ



ಬೆಂಗಳೂರು: ದೇಶದ ಹಳ್ಳಿ-ನಗರ ಪ್ರದೇಶಗಳು ಡಿಜಿಟಲ್ ಇಂಡಿಯಾ ಮೂಲಕ ತಂತ್ರಜ್ಞಾನ ಸ್ನೇಹಿಯಾಗಲಿವೆ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕುಲಪತಿ ಡಾ.ಎಚ್. ಮಹೇಶಪ್ಪ ಅಭಿಪ್ರಾಯಪಟ್ಟರು.

ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ ಸೇರಿದಂತೆ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ನಿಮ್ಹಾನ್ಸ್ ಸಭಾಂಗಣದಲ್ಲಿ ಎರಡು ದಿನ ಹಮ್ಮಿಕೊಂಡಿರುವ 3ನೇ ಭಾರತೀಯ ತಂತ್ರಜ್ಞಾನ ಸಮಾವೇಶದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಮೇಕ್ ಇನ್ ಇಂಡಿಯಾಹಾಗೂಡಿಜಿಟಲ್ ಇಂಡಿಯಾಯೋಜನೆಗಳಿಂದ ಉತ್ಪಾದನಾ ಕ್ಷೇತ್ರಕ್ಕೆ ಸಾಕಷ್ಟು ಉತ್ತೇಜನ ದೊರಕುತ್ತಿದೆ. ಈ ಯೋಜನೆಗಳು ಜಾಗತಿಕ ಹೂಡಿಕೆಗೆ ಭಾರತೀಯ ಉದ್ಯಮಗಳನ್ನು ಆಕರ್ಷಿಸುತ್ತವೆ. ಡಿಜಿಟಲ್ ಇಂಡಿಯಾ ರಾಷ್ಟ್ರದಲ್ಲಿರುವ ಎಲ್ಲಾ ಹಳ್ಳಿ, ನಗರ ಪ್ರದೇಶಗಳನ್ನು ತಂತ್ರ ಜ್ಞಾನಸ್ನೇಹಿಯಾಗುವಂತೆ ಮಾಡುತ್ತದೆ. ಆದರೆ, ಇವುಗಳ ಪ್ರಯೋಜನ ದೊರೆಯಲು ಸಂಶೋಧನ ಮಟ್ಟ ಹಾಗೂ ಕೌಶಲ್ಯ ಅಭಿವೃದ್ಧಿಗೊಳ್ಳಬೇಕು. ಆಯಾ ಕ್ಷೇತ್ರಗಳಲ್ಲಿ ಅನುಭವವಿರುವವರ ಮೂಲಕ ತಂತ್ರಜ್ಞಾನ ರೂಪಿಸಿದರೆ ಅದರಿಂದ ಹೆಚ್ಚಿನ ಪರಿಣಾಮ ದೊರಕಲಿದೆ ಎಂದರು.

ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಅಧ್ಯಕ್ಷ ಡಾ.ಎಲ್.ವಿ. ಮುರಳಿಕೃಷ್ಣರೆಡ್ಡಿ ಮಾತನಾಡಿ, ಭಾರತದಲ್ಲಿ ಸಂಶೋಧನೆಗೆ ಕೈಗಾರಿಕೆಗಳು ಹೆಚ್ಚು ಉತ್ತೇಜನ ನೀಡಬೇಕು. ವಿದ್ಯಾರ್ಥಿ ಮತ್ತು ಉದ್ಯಮಿಗಳನ್ನು ಪ್ರೋತ್ಸಾಹಿಸುವ ದಿಸೆಯಲ್ಲಿ ಕಾರ್ಯಕ್ರಮಗಳು ಆಗಬೇಕು. ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳು ಉತ್ತೇಜನ ನೀಡಬೇಕು. ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ಸಾಕಷ್ಟು ಸಾಧಿಸಿದೆ. ಆದರೆ ಜಾಗತಿಕ ಮಟ್ಟದಲ್ಲಿ ಈ ಸಾಧನೆಯನ್ನು ಗುರುತಿಸುವ ಅವಶ್ಯಕತೆಯಿದೆ ಎಂದು ಅಭಿಪ್ರಾಯಪಟ್ಟರು.

ಇಂಜಿನಿಯರಿಂಗ್ ಸಂಸ್ಥೆಗಳ ವಿಶ್ವ ಒಕ್ಕೂಟದ ಪ್ರೆಸಿಡೆಂಟ್ ಎಲೆಕ್ ಜಾರ್ಜ್ ಸ್ಟಿಟಾಲ್ಸಿಕ್ ಮಾತನಾಡಿ, ಸ್ಥಳೀಯ ಸಂಸ್ಕೃತಿಗೆ ಹೆಚ್ಚು ಒತ್ತು ನೀಡಿ, ಸಾಂಸ್ಕೃತಿಕ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡು ಸಂಶೋಧನೆ ನಡೆದರೆ ಒಳ್ಳೆಯದು. ಜ್ಞಾನ, ಬುದ್ಧಿಶಕ್ತಿ ಹೆಚ್ಚಿಸಿಕೊಳ್ಳುವುದರತ್ತ ಜನರ ಆಸಕ್ತಿ ಈ ಹಿಂದಿಗಿಂತ ಹೆಚ್ಚಾಗಿದೆ. ಉದ್ಯಮಶೀಲ ವಾತಾವರಣ ಹಾಗೂ ಸಾಮರ್ಥ್ಯವೃದ್ಧಿಸುವ ಮೂಲಕ ಉದ್ಯಮ ಕ್ಷೇತ್ರದ ಬೆಳವಣಿಗೆ ಸಾಧ್ಯ ಎಂದರು.

ತಂತ್ರಜ್ಞಾನ ಕ್ಷೇತ್ರದಲ್ಲಿ **ಸಾಧನೆ ಮಾಡಿದವರನ್ನು** ಗೌರವಿಸಲಾಯಿತು. ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಹಿರಿಯ ಸದಸ್ಯರ ಸಂಸ್ಥೆಯ ವೆಬ್‌ಸೈಟ್ ಡಿಡಿಡಿ.ಜಿಬಿ ಜಿಬ್ಬ್ಯುಇಜಿ.ಟ್ಲಜಯನ್ನು ಲೋಕಾರ್ಪಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸಮಾವೇಶದ ಸಂಘಟನಾ ಸಮಿತಿ ಅಧ್ಯಕ್ಷ ಪದ್ಮಶ್ರೀ ಪ್ರೊ. ಆರ್.ಎಂ. ವಾಸಗಂ, ಭಾರತೀಯ ಉತ್ಪಾದನಾ ಇಂಜಿಯರ್‌ಗಳ ಸಂಸ್ಥೆಯ ಅಧ್ಯಕ್ಷ ಡಾ. ವುಡೇ ಪಿ. ಕೃಷ್ಣಮೂರ್ತಿಯವರು ಉಪಸ್ಥಿತರಿದ್ದರು.

ಮೇಕ್ ಇನ್ ಇಂಡಿಯಾದಿಂದ ಉತ್ಪಾದನಾ ಕ್ಷೇತ್ರಕ್ಕೆ ಬಲ

▪ ವಿಟಿಯು ಕುಲಪತಿ ಮಹೇಶ್ವರಪ್ಪ ಅಭಿಪ್ರಾಯ ▪ ಎರಡು ದಿನಗಳ ಭಾರತೀಯ ತಂತ್ರಜ್ಞಾನ ಸಮಾವೇಶಕ್ಕೆ ಚಾಲನೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷಿ ಯೋಜನೆಗಳಾದ ಮೇಕ್ ಇನ್ ಇಂಡಿಯಾ ಹಾಗೂ ಡಿಜಿಟಲ್ ಇಂಡಿಯಾದಿಂದ ಉತ್ಪಾದನಾ ಕ್ಷೇತ್ರಕ್ಕೆ ಸಾಕಷ್ಟು ಉತ್ತೇಜನ ದೊರಕುತ್ತಿದೆ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕುಲಪತಿ ಡಾ. ಎಚ್. ಮಹೇಶಪ್ಪ ಹೇಳಿದ್ದಾರೆ.

ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಎನ್‌ಡಿಆರ್ ಎಫ್ ಸೇರಿ ವಿವಿಧ ಸಂಸ್ಥೆಗಳ ಸಹಭಾಗಿತ್ವದಲ್ಲಿ ನಿಮ್ಹಾನ್ಸ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಎರಡು ದಿನಗಳ 3ನೇ ಭಾರತೀಯ ತಂತ್ರಜ್ಞಾನ ಸಮಾವೇಶದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತದ ಉದ್ದಿಮೆಗಳಲ್ಲಿ ಜಾಗತಿಕ ಮಟ್ಟದಿಂದ ಹೂಡಿಕೆ ಆಕರ್ಷಿಸಲು ಈ ಯೋಜನೆಗಳು ಸಹಕರಿಸಿವೆ. ಡಿಜಿಟಲ್ ಇಂಡಿಯಾ ಮೂಲಕ ದೇಶದ ಹಳ್ಳಿ, ನಗರ ಪ್ರದೇಶಗಳು ತಂತ್ರಜ್ಞಾನ ಸ್ನೇಹಿಯಾಗಲಿವೆ. ಇವುಗಳ ಸಂಪೂರ್ಣ ಲಾಭವನ್ನು ಪಡೆಯಲು ಹೊಸ ಆವಿಷ್ಕಾರಗಳು ಹಾಗೂ ಕೌಶಲ ಅಭಿವೃದ್ಧಿಯಾಗಬೇಕು. ತರಬೇತಿ ಪಡೆದ ಹಾಗೂ ಆಯಾ ಕ್ಷೇತ್ರಗಳಲ್ಲಿ ಅನುಭವವಿರುವವರ ಮೂಲಕ ತಂತ್ರಜ್ಞಾನಗಳನ್ನು ಜಾರಿಗೊಳಿಸಿದರೆ ಹೆಚ್ಚಿನ ಪರಿಣಾಮ ದೊರಕುತ್ತದೆ ಎಂದರು.



ನಿಮ್ಹಾನ್ಸ್ ಸಭಾಂಗಣದಲ್ಲಿ ಬುಧವಾರ ಆರಂಭವಾದ 3ನೇ ಭಾರತೀಯ ತಂತ್ರಜ್ಞಾನ ಸಮಾವೇಶದಲ್ಲಿ ಸಾಧಕರನ್ನು ಗೌರವಿಸಲಾಯಿತು. ವಿಟಿಯು ಕುಲಪತಿ ಡಾ. ಎಚ್. ಮಹೇಶಪ್ಪ ಮತ್ತಿತರರಿದ್ದರು.

> ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ಸಾಕಷ್ಟು ಸಾಧಿಸಿದೆ. ಆದರೆ ಜಾಗತಿಕ ಮಟ್ಟದಲ್ಲಿ ಈ ಸಾಧನೆ ಗುರುತಿಸುವ ಅವಶ್ಯಕತೆಯಿದೆ. ಸಂಶೋಧನೆಗೆ ಕೈಗಾರಿಕೆಗಳು ಹೆಚ್ಚು ಉತ್ತೇಜನ ನೀಡಬೇಕು. ಉದ್ಯಮಿಗಳು ಹಾಗೂ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ವಿವಿಧ ಸಂಸ್ಥೆಗಳು ಸಹಯೋಗದಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು.
>
> । ಡಾ. ಎಲ್.ವಿ. ಮುರಳಿಕೃಷ್ಣರೆಡ್ಡಿ
> ಅಧ್ಯಕ್ಷ, ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್

ಇಂಜಿನಿಯರಿಂಗ್ ಸಂಸ್ಥೆಗಳ ವಿಶ್ವ ಒಕ್ಕೂಟದ ಅಧ್ಯಕ್ಷ ಎಲಿಕ್ ಜಾರ್ಜ್ ಸ್ಪಿಟಾಲ್ನಿಕ್ ಮಾತನಾಡಿ, ಆಯಾ ಪ್ರದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಆಧಾರವಾಗಿಸಿಕೊಂಡು ಸಂಶೋಧನೆಗಳು ನಡೆಯಬೇಕು. ಜ್ಞಾನ, ಬುದ್ಧಿಶಕ್ತಿ ಹೆಚ್ಚಿಸಿಕೊಳ್ಳುವುದರತ್ತ ಜನರ ಆಸಕ್ತಿ ಈ ಹಿಂದಿಗಿಂತ ಹೆಚ್ಚಾಗಿದೆ. ಉದ್ಯಮಶೀಲ ವಾತಾವರಣ ಹಾಗೂ ಸಾಮರ್ಥ್ಯ ವೃದ್ಧಿಸುವ ಮೂಲಕ ಉದ್ಯಮ ಕ್ಷೇತ್ರದ ಬೆಳವಣಿಗೆ ಸಾಧ್ಯ ಎಂದರು.

ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಗೌರವಿಸಲಾಯಿತು. ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಹಿರಿಯ ಸದಸ್ಯರ ಸಂಸ್ಥೆಯ ವೆಬ್‌ಸೈಟ್ www.icialumni.org ಯನ್ನು ಲೋಕಾರ್ಪಣೆ ಮಾಡಲಾಯಿತು.

ಸಮಾವೇಶದ ಸಂಘಟನಾ ಸಮಿತಿ ಅಧ್ಯಕ್ಷ ಪದ್ಮಶ್ರೀ ಪ್ರೊ. ಆರ್.ಎಂ. ವಾಸಗಂ, ಭಾರತೀಯ ಉತ್ಪಾದನಾ ಇಂಜಿಯರ್ ಗಳ ಸಂಸ್ಥೆಯ ಅಧ್ಯಕ್ಷ ಡಾ. ವುಡೇ ಪಿ. ಕೃಷ್ಣ, ಭಾರತೀಯ ನಭಿಕೀಯ ವಿದ್ಯುತ್ ನಿಗಮ್ ಲಿ. ಸಿಎಂಡಿ ಡಾ. ಪಿ. ಚೆಲ್ಲಪಾಂಡಿ, ಎನ್‌ಡಿಆರ್‌ಎಫ್ ಅಧ್ಯಕ್ಷ ಡಾ. ಬಿ.ವಿ.ಎ ರಾವ್, ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಮಂಡಳಿ ಸದಸ್ಯ ಡಾ. ಕೆ. ಗೋಪಾಲಕೃಷ್ಣ ಮತ್ತಿತರರಿದ್ದರು.

ಸಂಯುಕ್ತ ಕರ್ನಾಟಕ ಗುರುವಾರ 30 ಜುಲೈ 2015


ಉತ್ಪಾದನಾ ಕ್ಷೇತ್ರಕ್ಕೆ ಕೇಂದ್ರ ಯೋಜನೆ ಉತ್ತೇಜನ

ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷಿ ಮೇಕ್ ಇನ್ ಇಂಡಿಯಾ ಯೋಜನೆ ಹಾಗೂ ಡಿಜಿಟಲ್ ಇಂಡಿಯಾ ಯೋಜನೆಗಳಿಂದ ಉತ್ಪಾದನಾ ಕ್ಷೇತ್ರಕ್ಕೆ ಸಾಕಷ್ಟು ಉತ್ತೇಜನ ದೊರಕುತ್ತಿದೆ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕುಲಪತಿ ಡಾ.ಎಚ್.ಮಹೇಶಪ್ಪ ಅಭಿಪ್ರಾಯಪಟ್ಟರು.

ನಗರದ ನಿಮ್ಹಾನ್ಸ್ ಸಭಾಂಗಣದಲ್ಲಿ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಎನ್‌ಡಿಆರ್‌ಎಫ್ ಸೇರಿದಂತೆ ವಿವಿಧ ಸಂಸ್ಥೆಗಳ ಸಹಭಾಗಿತ್ವದಲ್ಲಿ ಆಯೋಜಿಸಲಾಗಿದ್ದ ಎರಡು ದಿನಗಳ '3ನೇ ಭಾರತೀಯ ತಂತ್ರಜ್ಞಾನ ಸಮಾವೇಶ'ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತದ ಉದ್ದಿಮೆಗಳಲ್ಲಿ ಜಾಗತಿಕ ಮಟ್ಟದಿಂದ ಹೂಡಿಕೆಯನ್ನು ಆಕರ್ಷಿಸಲು ಈ ಯೋಜನೆಗಳು ಸಹಕರಿಸಿವೆ ಎಂದರು.



ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯರನ್ನು ಸನ್ಮಾನಿಸಿದ ಡಾ.ಎಚ್.ಮಹೇಶಪ್ಪ, ಪ್ರೊ.ಆರ್.ಎಂ.ವಾಸಗಂ, ಡಾ.ವೂಡೇ ಪಿ.ಕೃಷ್ಣ, ಡಾ.ಬಿ.ವಿ.ಎ.ರಾವ್, ಡಾ.ಕೆ.ಗೋಪಾಲಕೃಷ್ಣ ಮತ್ತಿತರರು.


ಜಾಗತಿಕ ಮಟ್ಟದಲ್ಲಿ ತಾಂತ್ರಿಕ ಕ್ಷೇತ್ರದ ಸಾಧನೆಯನ್ನು ಗುರುತಿಸುವ ಅವಶ್ಯಕತೆಯಿದೆ. ಸಂಶೋಧನೆಗೆ ಕೈಗಾರಿಕೆಗಳು ಹೆಚ್ಚು ಉತ್ತೇಜನ ನೀಡಬೇಕು. ಉದ್ಯಮಿಗಳು ಹಾಗೂ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ವಿವಿಧ ಸಂಸ್ಥೆಗಳು ಸಹಯೋಗದಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಅಧ್ಯಕ್ಷ ಡಾ. ಎಲ್.ವಿ. ಮುರಳಿಕೃಷ್ಣರೆಡ್ಡಿ ಹೇಳಿದರು.

ಸಮಾವೇಶದ ಸಂಘಟನಾ ಸಮಿತಿ ಅಧ್ಯಕ್ಷ ಪದ್ಮಶ್ರೀ ಪ್ರೊ. ಆರ್.ಎಂ. ವಾಸಗಂ, ಭಾರತೀಯ ಉತ್ಪಾದನಾ ಇಂಜಿನಿಯರ್‌ಗಳ ಸಂಸ್ಥೆಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಎನ್‌ಡಿಆರ್‌ಎಫ್ ಅಧ್ಯಕ್ಷ ಡಾ.ಬಿ.ವಿ.ಎ.ರಾವ್, ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಮಂಡಳಿ ಸದಸ್ಯ ಡಾ.ಕೆ. ಗೋಪಾಲಕೃಷ್ಣ ಮತ್ತಿತರರು ಭಾಗವಹಿಸಿದ್ದರು.

. 1 ಕನ್ನಡ ದಿನಪತ್ರಿಕೆ
ಉದಯವಾಣಿ

ಗುರುವಾರ
30 ಜುಲೈ 2015

ಪುಸ್ತಕ ಲೋಕಾರ್ಪಣೆ: ಗಾಂಧೀ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧೀ ಸ್ಮಾರಕ ನಿಧಿಯಿಂದ ಲೀಲಾ ವಾಸುದೇವ್ ಅವರ ಮಕ್ಕಳ ಕಸ್ತೂರಬಾ ಪುಸ್ತಕ ಲೋಕಾರ್ಪಣೆ. ಉದ್ಘಾಟನೆ: ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್. ಅಧ್ಯಕ್ಷತೆ: ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಎಸ್.ಜಿ. ಸುಶೀಲಮ್ಮ. ಪುಸ್ತಕ ಲೋಕಾರ್ಪಣೆ: ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ. ಪುಸ್ತಕದ ಕುರಿತು: ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಪ್ರೊ. ಜಿ.ಬಿ. ಶಿವರಾಜು. ಗೌರವಾರ್ಪಣೆ: ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ. ಹೊ. ಶ್ರೀನಿವಾಸಯ್ಯ. ಸ್ಥಳ: ಗಾಂಧೀ ಭವನದ ಹಿಂಭಾಗ, ಕುಮಾರಪಾರ್ಕ್ ಪೂರ್ವ. ಸಂಜೆ 4.30ಕ್ಕೆ.




ಕನ್ನಡಪ್ರಭ

ಬೆಂಗಳೂರು | ಗುರುವಾರ, 30 ಜುಲೈ 2015

ಗಾಂಧೀ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧೀ ಸ್ಮಾರಕ ನಿಧಿ: ಲೀಲಾ ವಾಸುದೇವ್ ರಚಿಸಿರುವಮಕ್ಕಳಕಸ್ತೂರಬಾಪುಸ್ತಕಬಿಡುಗಡೆ, ಉದ್ಘಾಟನೆ- ಕರ್ನಾಟಕ ಸಂಸ್ಕೃತ ವಿವಿ ಮಾಜಿ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಅಧ್ಯಕ್ಷತೆ- ಸುಮಂಗಲಿ ಸೇವಾಶ್ರಮ ಅಧ್ಯಕ್ಷೆ ಎಸ್.ಜಿ. ಸುಶೀಲಮ್ಮ, ಪುಸ್ತಕ ಲೋಕಾರ್ಪಣೆ- ಗಾಂಧೀಶಾಂತಿಪ್ರತಿಷ್ಠಾನಅಧ್ಯಕ್ಷಡಾ. ವೂಡೇ. ಪಿ.ಕೃಷ್ಣ ಕಸ್ತೂರಬಾಸಭಾಂಗಣ, ಗಾಂಧೀಭವನ ಹಿಂಭಾಗ, ಕುಮಾರ ಪಾರ್ಕ್ ಪೂರ್ವ. ಸಂ. 4.30.

ಪ್ರಜಾವಾಣಿ


ಗುರುವಾರ • ಜುಲೈ 30, 2015



'ಮಕ್ಕಳ ಕಸ್ತೂರಬಾ' ಪುಸ್ತಕ ಬಿಡುಗಡೆ: ಲೇಖಕರು– ಲೀಲಾ ವಾಸುದೇವ್, ಉದ್ಘಾಟನೆ– ಮಲ್ಲೇಪುರಂ ಜಿ. ವೆಂಕಟೇಶ, ಅಧ್ಯಕ್ಷತೆ– ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಎಸ್.ಜಿ.ಸುಶೀಲಮ್ಮ, ಪುಸ್ತಕ ಲೋಕಾರ್ಪಣೆ– ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ವುಡೇ ಪಿ. ಕೃಷ್ಣ, ಗೌರವಾರ್ಪಣೆ– ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ.ಹೊ. ಶ್ರೀನಿವಾಸಯ್ಯ. ಸ್ಥಳ– ಕಸ್ತೂರಬಾ ಸಭಾಂಗಣ, ಗಾಂಧೀ ಭವನದ ಹಿಂಭಾಗ, ಕುಮಾರ ಪಾರ್ಕ್ ಪೂರ್ವ. ಸಂಜೆ 4.30.

ವಿಜಯ ಕರ್ನಾಟಕ

ಗುರುವಾರ,30 ಜುಲೈ 2015



ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಲೀಲಾ ವಾಸುದೇವ್ ಅವರು ರಚಿಸಿರುವ 'ಮಕ್ಕಳ ಕಸ್ತೂರಬಾ' ಪುಸ್ತಕ ಬಿಡುಗಡೆ ಸಮಾರಂಭ. ಉದ್ಘಾಟನೆ: ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್. ಪುಸ್ತಕ ಬಿಡುಗಡೆ: ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ, ಅಧ್ಯಕ್ಷತೆ: ಸುಮಂಗಲಿ ಸೇವಾಶ್ರಮದ ಅಧ್ಯಕ್ಷ ಎಸ್.ಜಿ. ಸುಶೀಲಮ್ಮ, ಸ್ಥಳ: ಕಸ್ತೂರಬಾ ಸಭಾಂಗಣ, ಗಾಂಧಿ ಭವನದ ಹಿಂಭಾಗ, ಕುಮಾರ ಪಾರ್ಕ್ ಪೂರ್ವ. 4.30

ಸುವರ್ಣ ಪ್ರಗತಿ ಕನ್ನಡ ದಿನಪತ್ರಿಕೆ ದಿನಾಂಕ: 16-7-2015 ಗುರುವಾರ

ಕಳ್ಳರ ಕೈಯಲ್ಲಿ ಪ್ರಜಾಧಿಕಾರ: ಹುಚ್ಚಯ್ಯ ವಿಷಾಧ



ತುಮಕೂರು: ಸತ್ಯ, ಅಹಿಂಸೆ, ಧರ್ಮ, ಸಹಕಾರ ಮೊದಲಾದ ಗಾಂಧಿ ತತ್ವಗಳನ್ನು ಗಾಳಿಗೆ ತೂರುತ್ತಿರುವ ಅಧಿಕಾರ ದಾಹಿಗಳಾದ ಭ್ರಷ್ಟರು, ವಂಚಕರು, ಕಳ್ಳರ ಕೈಯಲ್ಲಿ ಪ್ರಜಾಧಿಕಾರ ಸಿಲುಕಿ ನಲುಗುತ್ತಿದೆ ಎಂದು ಜಿಲ್ಲಾ ಪಂಚಾಯಿತಿ ಅಧ್ಯಕ್ಷ ವೈ.ಹೆಚ್.ಹುಚ್ಚಯ್ಯ ವಿಷಾಧ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ, ಬಾಪೂಜಿ ಶಿಕ್ಷಣ ಸಂಸ್ಥೆ, ಪ್ರೊ.ಜಿ. ಕೃಷ್ಣಭಟ್ ಟ್ರಸ್ಟ್, ವಾರ್ತಾ ಇಲಾಖೆ ತುಮಕೂರು, ರಾಷ್ಟ್ರೀಯ ಸೇವಾ ಯೋಜನೆ ತುಮಕೂರು ವಿಶ್ವವಿದ್ಯಾಲಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಗರದ ಬಾಪೂಜಿ ಕಾಲೇಜಿನಲ್ಲಿ ಆಯೋಜಿಸಿದ್ದ "ತುಮಕೂರಿನಲ್ಲಿ ಗಾಂಧೀ ನೆನಪಿನಂಗಳದಲ್ಲಿ" ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇಶ ವಾಸಿಗಳು ಗಾಂಧಿ ತತ್ವಗಳನ್ನು ಅಳವಡಿಸಿಕೊಳ್ಳುವ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು,ಗಾಂಧಿ ತತ್ವವಿಲ್ಲದ ಭಾರತದ ಅಭಿವೃದ್ಧಿ ಸಾಧ್ಯವಿಲ್ಲ ಎಂದರು.

ಗಾಂಧಿಜೀಯವರು ಪ್ರತಿಪಾದಿಸಿದ ತತ್ವಗಳು ಸರ್ವಕಾಲಿಕವಾದವು. ದೇಶದಲ್ಲಿ ಎಲ್ಲರೂ ಪ್ರಜೆಗಳಲ್ಲ, ಎಲ್ಲರೂ ಪ್ರಭುಗಳಲ್ಲ. ಕೇವಲ ಜನಸಂಖ್ಯಾ ಪಟ್ಟಿಯಲ್ಲಿ ಮಾತ್ರ ಪ್ರಜೆಗಳ ಪಟ್ಟಿಯಿದೆ. ನಮ್ಮದು ಶ್ರೀಮಂತ ದೇಶವಲ್ಲ, ಶ್ರೀಮಂತರಿರುವ ದೇಶ. ನಮ್ಮ ನಡೆ-ನುಡಿಗೆ ತಾಳೆಯೇ ಆಗುತ್ತಿಲ್ಲ.ಆದರೆ ಗಾಂಧಿಜೀ ತಮ್ಮ ಜೀವನದಲ್ಲಿ ನಡೆ ಮತ್ತು ನುಡಿಗೆ ತಳೆಯಾಗುವಂತೆ ನಡೆದುಕೊಂಡವರು, ಅಂತಹ ಮಹಾನ್ ನಾಯಕರ ನರಳಲ್ಲಿ ಸ್ವತಂತ್ರ ಪಡೆದ ನಮ್ಮ ದೇಶದ ನಾಗರೀಕರು ಅವರ ತತ್ವ, ಆದರ್ಶ, ಮಾರ್ಗಗಳನ್ನು ಅನುಸರಿಸಬೇಕಿದೆ ಎಂದು ಹುಚ್ಚಯ್ಯ ಅಭಿಪ್ರಾಯಪಟ್ಟರು.

ಯೋಗ್ಯತೆ ಇಲ್ಲದವರು ಎಷ್ಟೇ ವಿದ್ಯಾಭ್ಯಾಸ ಮಾಡಿದರೂ ಪ್ರಯೋಜನವಿಲ್ಲ. ಕೇವಲ ವಿದ್ಯೆ ಇದ್ದರೆ ಸಾಲದು ಯೋಗ್ಯತೆಯೂ ಇರಬೇಕು. ದೇಶದಲ್ಲಿ ಹಿಂಸೆಯನ್ನು ನಿರ್ಮೂಲನೆ ಮಾಡಬೇಕಾದರೆ ಗಾಂಧಿ ಮಾರ್ಗದಲ್ಲಿ ನಡೆಯಬೇಕು.ದೇಶದ ಪ್ರತಿಯೊಬ್ಬ ನಾಗರಿಕನೂ ಸತ್ಯ, ಅಹಿಂಸೆ, ಧರ್ಮ, ನ್ಯಾಯ, ಮೊದಲಾದ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಗಾಂಧಿ ಅಧ್ಯಯನ ಕೇಂದ್ರದ ಉದ್ಘಾಟನೆ ಮಾಡಿ ಮಾತನಾಡಿದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಪ್ರೊ.ಹೊ.ಶ್ರೀನಿವಾಸಯ್ಯ, ಬದುಕುವುದನ್ನು ಕಲಿತವರೇ ನಿಜವಾದ ವಿದ್ಯಾವಂತರು. ಅಕ್ಷರಾಭ್ಯಾಸದೊಂದಿಗೆ ವಿದ್ಯಾಭ್ಯಾಸವೂ ಆಗಬೇಕು ಎಂಬುದು ಗಾಂಧಿ ಆಶಯ. ಹಣ, ಅಧಿಕಾರ, ಅಂತಸ್ತಿನ ಹಿಂದೆ ಬಿದ್ದಿರುವ ಆಧುನಿಕ ಭಾರತ ಮಂದಿಗೆ ಕೇವಲ ಅಕ್ಷರ ಜ್ಞಾನವಿದೆ.ಆದರೆ ಬದುಕುವುದೇ ಗೊತ್ತಿಲ್ಲ.ಯಾವ ಶಿಕ್ಷಣ ಸಂಸ್ಥೆಗಳಲ್ಲಿಯೂ ಇಂದು ಬದುಕುವ ದಾರಿ

(2ನೇ ಪುಟಕ್ಕೆ)

ಕಳ್ಳರ ಕೈಯಲ್ಲಿ ಪ್ರಜಾಧಿಕಾರ: ಹುಚ್ಚಯ್ಯ ವಿಷಾಧ

>>>1ನೇ ಪುಟದಿಂದ

ಯನ್ನು ಹೇಳಿಕೊಡುತ್ತಿಲ್ಲ. ನಮ್ಮ ಇತಿಹಾಸವನ್ನು ಹೇಳುತ್ತಿಲ್ಲ. ಬದುಕುವ ದಾರಿಯನ್ನು ಅರಿಯಬೇಕಾದರೆ ಗಾಂಧಿ ಮಾರ್ಗ ಅನುಸರಿಸಿ ಎಂದರು.

ಸರಳ ಸಜ್ಜನಿಕೆಯ ಜೀವನ ನಡೆಸಿದ ಗಾಂಧಿ ದೇಶದ ಸಮಸ್ಯೆಯನ್ನು ಮನಗಂಡು ತಂಡು ಬಟ್ಟೆ ಧರಿಸಿ ಹೋರಾಟ ನಡೆಸಿದರು.

ದ್ವೇಷ, ಅಸೂಯೆ ಬಿಟ್ಟು ಅಹಿಂಸಾ ಮಾರ್ಗ ಅನುಸರಿಸಿ, ಗುರು-ಹಿರಿಯರು, ಶಿಕ್ಷಕರೆಂದರೆ ಮಕ್ಕಳಲ್ಲಿ ಗೌರ ಭಾವನ ಬರಬೇಕು. ಸಂಸ್ಕೃತ ಕೇವಲ ಪೂಜೆ ಭಾಷೆಯಲ್ಲ.

ವಿಧಿ ವಿಧಾನವಲ್ಲ, ವಿಶ್ವ ಭಾಷೆಗಳ ಮೂಲ ಎಂಬುದನ್ನು ಅರಿತು ಎಲ್ಲರೂ ಸಂಸ್ಕೃತ-ಕಲಿಯಿರಿ ಎಂಮ ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ರಂಗಸ್ವಾಮಯ್ಯ, ಕಾರ್ಯದರ್ಶಿ ಚಂದ್ರವಳ್ಳೇಶ್ವರಸ್ವಾಮಿ, ಜಿ.ಪಂ. ಸಿಇಒ ಡಾ. ಬಿ.ಆರ್.ಮಮತ, ಬೆಂಗಳೂರು ವಿವಿ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ನಟರಾಜ್, ಹುಳಿಯಾರ್, ಕಲ್ಪತರು ವಿದ್ಯಾಸಂಸ್ಥೆಯ ಕಾರ್ಯದರ್ಶಿ ವಿಶ್ವನಾಥ್, ಬಾಪೂಜಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಎಂ.ಬಸವಯ್ಯ ಮೊದಲಾದವರು ಉಪಸ್ಥಿತರಿದ್ದರು.

ಗಾಂಧಿ ತತ್ವಗಳನ್ನು ಸರ್ವಕಾಲಕ್ಕೂ ಜೀವಂತವಾಗಿಟ್ಟಾಗ ಮಾತ್ರ ಸ್ವಾಸ್ಥ್ಯ ಸಮಾಜ ಸೃಷ್ಟಿ ಸಾಧ್ಯ

ತುಮಕೂರು, ಜು.14 – ಗಾಂಧೀತತ್ವ ಮತ್ತು ವಿಚಾರಧಾರೆಗಳನ್ನು ಸರ್ವಕಾಲಕ್ಕೂ ಜೀವಂತವಾಗಿಟ್ಟಾಗ ಮಾತ್ರ ಸ್ವಾಸ್ಥ್ಯ ಸಮಾಜದ ನಿರ್ಮಾಣ ಸಾಧ್ಯವೆಂದು ಜಿಲ್ಲಾ ಪಂಚಾಯತಿ ಅಧ್ಯಕ್ಷ ವೈ.ಹೆಚ್. ಹುಚ್ಚಯ್ಯ ತಿಳಿಸಿದರು.

ಅವರು ಇಂದು ನಗರದ ಬಾಪೂಜಿ ಪ್ರಥಮದರ್ಜೆ ಕಾಲೇಜಿನ ಆವರಣದಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ, ಬಾಪೂಜಿ ಶಿಕ್ಷಣ ಸಂಸ್ಥೆ ಹಾಗೂ ವಾರ್ತಾ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ತುಮಕೂರಿನಲ್ಲಿ ಗಾಂಧೀ ನೆನಪಿನಂಗಳದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಈ ದೇಶದ ಸಂಪತ್ತು ಕೆಲವೇ ವ್ಯಕ್ತಿಗಳ ಕಪಿಮುಷ್ಠಿಯಲ್ಲಿರುವ ಕೆಟ್ಟ ಪರಿಸ್ಥಿತಿಯಲ್ಲಿ ಗಾಂಧೀ ವಿಚಾರ ಧಾರೆಗಳನ್ನು ಯುವಪೀಳಿಗೆಗೆ ಪರಿಚಯಿಸುವುದು ಅತ್ಯಂತ ಅರ್ಥಪೂರ್ಣವೆಂದು ಹೇಳಿದ ಅವರು, ಶ್ರೀಮಂತಿಕೆ ಇದ್ದರೆ ಸಾಲದು. ಸತ್ಯ-ಅಹಿಂಸೆ ಮತ್ತು ಮಾನವೀಯತೆಯನ್ನು ಮೈಗೂಡಿಸಿಕೊಂಡಾಗ ಮಾತ್ರ ಗಾಂಧೀ ವಿಚಾರಧಾರೆಗಳನ್ನು ಗೌರವಿಸಿದಂತಾಗುತ್ತದೆ ಎಂದು ಹೇಳಿದರು.

ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ॥ ಹೋ. ಶ್ರೀನಿವಾಸಯ್ಯ ಅವರು ಮಾತನಾಡಿ, ಸಮಾಜದಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆಯಿಂದ ಬದುಕಲು ಗಾಂಧೀ ವಿಚಾರಧಾರೆಗಳು ಅತ್ಯವಶ್ಯವೆಂದು ಹೇಳಿದ ಅವರು ಜೀವನದಲ್ಲಿ ಗಾಂಧೀತತ್ವಗಳನ್ನು ಅಳವಡಿಸಿಕೊಂಡರೆ ಆತ್ಮಹತ್ಯೆಯಂತ ಕೃತ್ಯಕ್ಕೆ ಕೈಹಾಕದೆ ಸಮಾಜದಲ್ಲಿ ಧೈರ್ಯವಾಗಿ ಹಾಗೂ ಆತ್ಮವಿಶ್ವಾಸದಿಂದ ಬದುಕುವ ದಾರಿ ಕಂಡುಕೊಳ್ಳಲು ಸಾಧ್ಯವಾಗುವುದೆಂದು ಹೇಳಿದರು ಯಾರನ್ನೂ ದ್ವೇಷಿಸದೆ ಪ್ರೀತಿ, ವಿಶ್ವಾಸದಿಂದ ಬದುಕಿದಾಗ ಮಾತ್ರ ಗಾಂಧಿ ತತ್ವಗಳನ್ನು ಪಾಲಿಸಿದಂತಾಗುತ್ತದೆ ಎಂದರು.



ಗಾಂಧೀ ಪ್ರತಿಷ್ಠಾನ ಅಧ್ಯಕ್ಷ ಡಾ॥ ವೂಡೇ.ಪಿ.ಕೃಷ್ಣ ಅವರು ಮಾತನಾಡಿ, ಗಾಂಧೀಜಿಯವರ ವಿಚಾರಧಾರೆಗಳ ಪ್ರಭಾವದಿಂದಾಗಿ ಇಡೀ ವಿಶ್ವವೇ ಭಾರತದ ಕಡೆ ನೋಡುವಂತಾಗಿದೆ ಎಂದು ಅಭಿಪ್ರಾಯಪಟ್ಟ ಅವರು, ಪ್ರತಿಯೊಬ್ಬರು ಗಾಂಧಿಯನ್ನು ಹೃದಯದಲ್ಲಿಟ್ಟು ಆರಾಧಿಸುವಂತಾಗಬೇಕೆಂದರಲ್ಲದೆ, ಸ್ವಚ್ಛ ಪರಿಸರದಲ್ಲಿ ಸರಳವಾಗಿ ಬದುಕುವುದನ್ನು ಗಾಂಧಿ ತೋರಿಸಿಕೊಟ್ಟಿದ್ದಾರೆ ಇದನ್ನು ಪ್ರತಿಯೊಬ್ಬರೂ ಪಾಲ್ಗಿಸಬೇಕೆಂದರು.

ಗಾಂಧೀ ಅಧ್ಯಯನ ಕೇಂದ್ರದ ಅಧ್ಯಕ್ಷ ಡಾ: ನಟರಾಜ್ ಹುಳಿಯಾರ್ ಅವರು ಮಾತನಾಡಿ, ಅಸ್ಪೃಶ್ಯತೆ ಮತ್ತು ಶೋಷಣೆ ಮುಕ್ತ ಸಮಾಜ ನಿರ್ಮಾಣವಾದಾಗ ಮಾತ್ರ ಗಾಂಧೀ ತತ್ವಗಳನ್ನು ಜೀವಂತವಾಗಿಡಲು ಸಾಧ್ಯವೆಂದು ಹೇಳಿದ ಅವರು, ಗಾಂಧೀ ವಿಚಾರಧಾರೆಗಳನ್ನು ವ್ಯಾಪಕವಾಗಿ ಪ್ರಚಾರ ಮಾಡುವ ಮೂಲಕ ಅಧೀರತೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಡೆಯಲು ಸಾಧ್ಯವೆಂದರು.

ಗಾಂಧೀ ಮಾಹಿತಿ ಪುಸ್ತಕ ಬಿಡುಗಡೆಮಾಡಿದ ಜಿಲ್ಲಾ ಪಂಚಾಯತಿ ಸಿ.ಇ.ಓ. ಡಾ॥ ಬಿ.ಆರ್. ಮಮತ ಅವರು ಮಾತನಾಡಿ, ಸತ್ಯಮಾರ್ಗದಲ್ಲಿ ನಡೆದಾಗ ಧೈರ್ಯ, ಸ್ಥೈರ್ಯ, ಆತ್ಮವಿಶ್ವಾಸ ಬೆಳೆಯಲಿದೆ ಎಂಬುದನ್ನು ಗಾಂಧೀ ವಿಚಾರಧಾರೆಗಳಿಂದ ತಿಳಿಯಬಹುದೆಂದು ಹೇಳಿದ ಅವರು, ಗಾಂಧೀ ಜೀವನ ಮತ್ತು ಬದುಕಿನ ಮಾರ್ಗ (ಪುಟ 2ಕ್ಕೆ)

ಗಾಂಧಿ ತತ್ವಗಳನ್ನು ಸರ್ವಕಾಲಕ್ಕೂ ಜೀವಂತವಾಗಿಟ್ಟಾಗ ಮಾತ್ರ ಸ್ವಾಸ್ಥ್ಯ ಸಮಾಜ ಸೃಷ್ಟಿ ಸಾಧ್ಯ

ಗಳನ್ನು ವಿದೇಶಿಯರು ಗೌರವದಿಂದ ಸ್ಮರಿಸುತ್ತಾರೆ ಎಂಬುದನ್ನು ಸಚಿತ್ರ ಘಟನೆಯೊಂದಿಗೆ ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಾಪೂಜಿ ವಿದ್ಯಾಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿ ಎಂ. ಬಸವಯ್ಯ ಅವರು ಮಾತನಾಡಿ, ಗಾಂಧೀ ದೇವರಲ್ಲ, ಪವಾಡ ಪುರುಷನಲ್ಲ ಹಾಗೂ ರಾಜಕೀಯ ತಜ್ಞನೂ ಅಲ್ಲ. ಅವರೊಬ್ಬ ಸತ್ಯಶೋಧಕ, ಸಾಧಕ ಎಂದು ಬಣ್ಣಿಸಿದರಲ್ಲದೆ, ಸ್ವಾರ್ಥ, ಅಹಿಂಸೆಗಳೇ ಎಲ್ಲೆಡೆ ತುಂಬಿರುವ ಸಂದರ್ಭದಲ್ಲಿ ಗಾಂಧೀ ವಿಚಾರಧಾರೆಗಳನ್ನು ಸಮಾಜಕ್ಕೆ ಮುಟ್ಟಿಸುವ ಕೆಲಸಗಳಾಗಬೇಕೆಂದು ಆಶಿಸಿದರು.

ಗಾಂಧೀಭವನದ ಗೌರವ ಕಾರ್ಯದರ್ಶಿ ಪ್ರೊ. ಜಿ.ಬಿ. ಶಿವರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ರವೀಂದ್ರ ಕಲಾನಿಕೇತನ ಪ್ರಾಚಾರ್ಯ-ಬಾಬುರಾವ್ ಸ್ವಾಗತಿಸಿದರು. ಇದಕ್ಕೂ ಮುನ್ನ ವೇಮಗಲ್ ಸೋಮಶೇಖರ್ ಅವರ ಗಾಂಧೀ ಉಡುಗೆಯೊಂದಿಗೆ ನಡೆದ ಪಾದಯಾತ್ರೆಯಲ್ಲಿ ಹಲವಾರು ಗಣ್ಯರು, ಶಾಲಾ ಮಕ್ಕಳು ಪಾಲ್ಗೊಂಡಿದ್ದರು.

ಕೋಲಾರ ತುಮಕೂರು ಚಿಕ್ಕಬಳ್ಳಾಪುರ ಬೆಂಗಳೂರು (ನ) (ಗ್ರಾ) ರಾಮನಗರ ಜಿಲ್ಲೆಗಳ ಸಮಗ್ರ 'ವಾಣಿ'
15-07-2015

ಗಾಂಧೀತತ್ವ, ವಿಚಾರಧಾರೆಗಳಿಂದ ಮಾತ್ರ ಸ್ವಾಸ್ಥ್ಯ ಸಮಾಜದ ನಿರ್ಮಾಣ: ಹುಚ್ಚಯ್ಯ

ತುಮಕೂರು

ಗಾಂಧೀತತ್ವ ಮತ್ತು ವಿಚಾರಧಾರೆಗಳನ್ನು ಸರ್ವಕಾಲಕ್ಕೂ ಜೀವಂತವಾಗಿಟ್ಟಾಗ ಮಾತ್ರ ಸ್ವಾಸ್ಥ್ಯ ಸಮಾಜದ ನಿರ್ಮಾಣ ಸಾಧ್ಯವೆಂದು ಜಿಲ್ಲಾ ಪಂಚಾಯತಿ ಅಧ್ಯಕ್ಷ ವೈಹೆಚ್. ಹುಚ್ಚಯ್ಯ ತಿಳಿಸಿದರು.

ನಗರದ ಬಾಪೂಜಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ, ಬಾಪೂಜಿ ಶಿಕ್ಷಣ ಸಂಸ್ಥೆ ಹಾಗೂ ವಾರ್ತಾ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ತುಮಕೂರಿನಲ್ಲಿ ಗಾಂಧೀ ನೆನಪಿನಂಗಳದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಈ ದೇಶದ ಸಂಪತ್ತು ಕೆಲವೇ ವ್ಯಕ್ತಿಗಳ ಕಪಿಮುಷ್ಟಿಯಲ್ಲಿರುವ ಕೆಟ್ಟ ಪರಿಸ್ಥಿತಿಯಲ್ಲಿ ಗಾಂಧೀ ವಿಚಾರಧಾರೆಗಳನ್ನು ಯುವಪೀಳಿಗೆಗೆ ಪರಿಚಯಿಸುವುದು ಅತ್ಯಂತ ಅರ್ಥಪೂರ್ಣವೆಂದು ಹೇಳಿದ ಅವರು, ಶ್ರೀಮಂತಿಕೆ ಇದ್ದರೆ ಸಾಲದು. ಸತ್ಯ-ಅಹಿಂಸೆ ಮತ್ತು ಮಾನವೀಯತೆಯನ್ನು ಮೈಗೂಡಿಸಿಕೊಂಡಾಗ ಮಾತ್ರ ಗಾಂಧೀ ವಿಚಾರಧಾರೆಗಳನ್ನು ಗೌರವಿಸಿದಂತಾಗುತ್ತದೆ ಎಂದು ಹೇಳಿದರು.

ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ|| ಹೋ.ಶ್ರೀನಿವಾಸಯ್ಯ ಮಾತನಾಡಿ, ಸಮಾಜದಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆಯಿಂದ ಬದುಕಲು ಗಾಂಧೀ ವಿಚಾರಧಾರೆಗಳು ಅತ್ಯವಶ್ಯವೆಂದು ಹೇಳಿದ



ಅವರು ಜೀವನದಲ್ಲಿ ಗಾಂಧೀತತ್ವಗಳನ್ನು ಅಳವಡಿಸಿಕೊಂಡರೆ ಆತ್ಮಹತ್ಯೆಯಂತ ಕೃತ್ಯಕ್ಕೆ ಕೈಹಾಕದೆ ಸಮಾಜದಲ್ಲಿ ಧೈರ್ಯವಾಗಿ ಹಾಗೂ ಆತ್ಮವಿಶ್ವಾಸದಿಂದ ಬದುಕುವ ದಾರಿ ಕಂಡುಕೊಳ್ಳಲು ಸಾಧ್ಯವಾಗುವುದೆಂದು ಹೇಳಿದರು. ಯಾರನ್ನೂ ದ್ವೇಷಿಸದೆ ಪ್ರೀತಿ, ವಿಶ್ವಾಸದಿಂದ ಬದುಕಿದಾಗ ಮಾತ್ರ ಗಾಂಧಿ ತತ್ವಗಳನ್ನು ಪಾಲಿಸಿದಂತಾಗುತ್ತದೆ ಎಂದರು.

ಗಾಂಧೀ ಪ್ರತಿಷ್ಠಾನ ಅಧ್ಯಕ್ಷ ಡಾ|| ವೂಡೇ.ಪಿ.ಕೃಷ್ಣ ಮಾತನಾಡಿ, ಗಾಂಧೀಜಿಯವರ ವಿಚಾರಧಾರೆಗಳ ಪ್ರಭಾವದಿಂದಾಗಿ ಇಡೀ ವಿಶ್ವವೇ ಭಾರತದ ಕಡೆ ನೋಡುವಂತಾಗಿದೆ ಎಂದು ಅಭಿಪ್ರಾಯಪಟ್ಟ ಅವರು, ಪ್ರತಿಯೊಬ್ಬರು ಗಾಂಧಿಯನ್ನು ಹೃದಯದಲ್ಲಿಟ್ಟು ಆರಾಧಿಸುವಂತಾಗಬೇಕೆಂದರಲ್ಲದೆ, ಸ್ವಚ್ಛ ಪರಿಸರದಲ್ಲಿ ಸರಳವಾಗಿ ಬದುಕುವುದನ್ನು ಗಾಂಧಿ ತೋರಿಸಿಕೊಟ್ಟಿದ್ದಾರೆ ಇದನ್ನು ಪ್ರತಿಯೊಬ್ಬರೂ ಪಾಲಿಸಬೇಕೆಂದರು.

ಗಾಂಧೀ ಅಧ್ಯಯನ ಕೇಂದ್ರದ ಅಧ್ಯಕ್ಷ ಡಾ|| ನಟರಾಜ್ ಹುಳಿಯಾರ್ ಮಾತನಾಡಿ, ಅಸ್ಪೃಶ್ಯತೆ ಮತ್ತು ಶೋಷಣೆ ಮುಕ್ತ ಸಮಾಜ ನಿರ್ಮಾಣವಾದಾಗ ಮಾತ್ರ ಗಾಂಧೀ ತತ್ವಗಳನ್ನು ಜೀವಂತವಾಗಿಡಲು ಸಾಧ್ಯವೆಂದು ಹೇಳಿದ ಅವರು, ಗಾಂಧೀ ವಿಚಾರಧಾರೆಗಳನ್ನು ವ್ಯಾಪಕವಾಗಿ ಪ್ರಚಾರ ಮಾಡುವ ಮೂಲಕ ಅಧೀರತೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಡೆಯಲು ಸಾಧ್ಯವೆಂದರು. ಗಾಂಧೀ ಮಾಹಿತಿ ಪುಸ್ತಕ ಬಿಡುಗಡೆಮಾಡಿದ ಜಿಲ್ಲಾ ಪಂಚಾಯತಿ ಸಿ.ಇ.ಓ. ಡಾ|| ಬಿ.ಆರ್. ಮಮತ ಮಾತನಾಡಿ, ಸತ್ಯಮಾರ್ಗದಲ್ಲಿ ನಡೆದಾಗ ಧೈರ್ಯ, ಸ್ಥೈರ್ಯ, ಆತ್ಮವಿಶ್ವಾಸ ಬೆಳೆಯಲಿದೆ ಎಂಬುದನ್ನು ಗಾಂಧೀ ವಿಚಾರಧಾರೆಗಳಿಂದ ತಿಳಿಯಬಹುದೆಂದು ಹೇಳಿದ ಅವರು, ಗಾಂಧೀ ಜೀವನ ಮತ್ತು ಬದುಕಿನ ಮಾರ್ಗಗಳನ್ನು ವಿದೇಶಿಯರು ಗೌರವದಿಂದ ಸ್ಮರಿಸುತ್ತಾರೆ ಎಂಬುದನ್ನು ಸಚಿತ್ರ ಘಟನೆಯೊಂದಿಗೆ ವಿವರಿಸಿದರು.

ಬಾಪೂಜಿ ವಿದ್ಯಾಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿ ಎಂ. ಬಸವಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಗಾಂಧೀ ದೇವರಲ್ಲ, ಪವಾಡ ಪುರುಷನಲ್ಲ ಹಾಗೂ ರಾಜಕೀಯ ತಜ್ಞನೂ ಅಲ್ಲ. ಅವರೊಬ್ಬ ಸತ್ಯಶೋಧಕ, ಸಾಧಕ ಎಂದು ಬಣ್ಣಿಸಿದರಲ್ಲದೆ, ಸ್ವಾರ್ಥ, ಅಹಿಂಸೆಗಳೇ ಎಲ್ಲೆಡೆ ತುಂಬಿರುವ ಸಂದರ್ಭದಲ್ಲಿ ಗಾಂಧೀ ವಿಚಾರಧಾರೆಗಳನ್ನು ಸಮಾಜಕ್ಕೆ ಮುಟ್ಟಿಸುವ ಕೆಲಸಗಳಾಗಬೇಕೆಂದು ಆಶಿಸಿದರು.

ಗಾಂಧೀಭವನದ ಗೌರವ ಕಾರ್ಯದರ್ಶಿ ಪ್ರೊ.ಜಿ.ಬಿ.ಶಿವರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ರವೀಂದ್ರ ಕಲಾನಿಕೇತನ ಪ್ರಾಚಾರ್ಯ ಬಾಬುರಾವ್ ಸ್ವಾಗತಿಸಿದರು. ಇದಕ್ಕೂ ಮುನ್ನ ವೇಮಗಲ್ ಸೋಮಶೇಖರ್ ಅವರ ಗಾಂಧೀ ಉಡುಗೆಯೊಂದಿಗೆ ನಡೆದ ಪಾದಯಾತ್ರೆಯಲ್ಲಿ ಹಲವಾರು ಗಣ್ಯರು, ಶಾಲಾ ಮಕ್ಕಳು ಪಾಲ್ಗೊಂಡಿದ್ದರು.

ಪಾಪಿ ಪಾಪವನ್ನು ತಿರಸ್ಕರಿಸು, ಪಾಪಿಯನ್ನಲ್ಲ. -ಟಿ.ಪಿ.ಕೈಲಾಸಂ

ಗಾಂಧೀಜಿ ಭಾರತದ ಮಹಾನ್ ಚೇತನ

ಗಾಂಧಿ ತತ್ವ ಜೀವಂತವಾಗಿಟ್ಟಾಗ ಮಾತ್ರ ಸ್ವಾಸ್ಥ್ಯ ಸಮಾಜ ನಿರ್ಮಾಣ ಸಾಧ್ಯ



ತುಮಕೂರು: ಗಾಂಧಿತತ್ವ ಮತ್ತು ವಿಚಾರಧಾರೆಗಳನ್ನು ಸರ್ವಕಾಲಕ್ಕೂ ಜೀವಂತವಾಗಿಟ್ಟಾಗ ಮಾತ್ರ ಸ್ವಾಸ್ಥ್ಯ ಸಮಾಜದ ನಿರ್ಮಾಣ ಸಾಧ್ಯವೆಂದು ಜಿಲ್ಲಾ ಪಂಚಾಯತಿ ಅಧ್ಯಕ್ಷ ವೈ.ಹೆಚ್. ಹುಚ್ಚಯ್ಯ ತಿಳಿಸಿದರು.

ನಗರದ ಬಾಪೂಜಿ ಪ್ರಥಮದರ್ಜೆ ಕಾಲೇಜಿನ ಆವರಣದಲ್ಲಿ ಮಂಗಳವಾರ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ, ಬಾಪೂಜಿ ಶಿಕ್ಷಣ ಸಂಸ್ಥೆ ಹಾಗೂ ವಾರ್ತಾ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ತುಮಕೂರಿನಲ್ಲಿ ಗಾಂಧೀ ನೆನಪಿನಂಗಳದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಈ ದೇಶದ ಸಂಪತ್ತು ಕೆಲವೇ ವ್ಯಕ್ತಿಗಳ ಕಪಿಮುಷ್ಠಿಯಲ್ಲಿರುವ ಕೆಟ್ಟ ಪರಿಸ್ಥಿತಿಯಲ್ಲಿ ಗಾಂಧೀ ವಿಚಾರಧಾರೆಗಳನ್ನು ಯುವಪೀಳಿಗೆಗೆ ಪರಿಚಯಿಸುವುದು ಅತ್ಯಂತ ಅರ್ಥಪೂರ್ಣವೆಂದು ಹೇಳಿದ ಅವರು, ಶ್ರೀಮಂತಿಕೆ ಇದ್ದರೆ ಸಾಲದು. ಸತ್ಯ-ಅಹಿಂಸೆ ಮತ್ತು ಮಾನವೀಯತೆಯನ್ನು ಮೈಗೂಡಿಸಿಕೊಂಡಾಗ ಮಾತ್ರ ಗಾಂಧೀ ವಿಚಾರಧಾರೆಗಳನ್ನು ಗೌರವಿಸಿದಂತಾಗುತ್ತದೆ ಎಂದು ಹೇಳಿದರು.

ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ: ಹೋ. ಶ್ರೀನಿವಾಸಯ್ಯ ಅವರು ಮಾತನಾಡಿ, ಸಮಾಜದಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆಯಿಂದ ಬದುಕಲು ಗಾಂಧೀ ವಿಚಾರಧಾರೆಗಳು ಅತ್ಯವಶ್ಯವೆಂದು ಹೇಳಿದ ಅವರು ಜೀವನದಲ್ಲಿ ಗಾಂಧೀತತ್ವಗಳನ್ನು ಅಳವಡಿಸಿಕೊಂಡರೆ ಆತ್ಮಹತ್ಯೆಯಂತ ಕೃತ್ಯಕ್ಕೆ ಕೈಹಾಕದೆ ಸಮಾಜದಲ್ಲಿ ಧೈರ್ಯವಾಗಿ ಹಾಗೂ ಆತ್ಮವಿಶ್ವಾಸದಿಂದ ಬದುಕುವ ದಾರಿ ಕಂಡುಕೊಳ್ಳಲು ಸಾಧ್ಯವಾಗುವುದೆಂದು ಹೇಳಿದರು ಯಾರನ್ನೂ ದ್ವೇಷಿಸದೆ ಪ್ರೀತಿ, ವಿಶ್ವಾಸದಿಂದ ಬದುಕಿದಾಗ ಮಾತ್ರ ಗಾಂಧಿ ತತ್ವಗಳನ್ನು ಪಾಲಿಸಿದಂತಾಗುತ್ತದೆ ಎಂದರು.

ಗಾಂಧೀ ಪ್ರತಿಷ್ಠಾನ ಅಧ್ಯಕ್ಷ ಡಾ. ವೂಡೇ.ಪಿ.ಕೃಷ್ಣ ಅವರು ಮಾತನಾಡಿ, ಗಾಂಧೀಜಿಯವರ ವಿಚಾರಧಾರೆಗಳ ಪ್ರಭಾವದಿಂದಾಗಿ ಇಡೀ ವಿಶ್ವವೇ ಭಾರತದ ಕಡೆ ನೋಡುವಂತಾಗಿದೆ ಎಂದು ಅಭಿಪ್ರಾಯಪಟ್ಟ ಅವರು, ಪ್ರತಿಯೊಬ್ಬರು ಗಾಂಧಿಯನ್ನು ಹೃದಯದಲ್ಲಿಟ್ಟು ಆರಾಧಿಸುವಂತಾಗಬೇಕೆಂದರಲ್ಲದೆ, ಸ್ವಚ್ಛ ಪರಿಸರದಲ್ಲಿ ಸರಳವಾಗಿ ಬದುಕುವುದನ್ನು ಗಾಂಧಿ ತೋರಿಸಿಕೊಟ್ಟಿದ್ದಾರೆ ಇದನ್ನು ಪ್ರತಿಯೊಬ್ಬರೂ ಪಾಲಿಸಬೇಕೆಂದರು.

ಗಾಂಧೀ ಅಧ್ಯಯನ ಕೇಂದ್ರದ ಅಧ್ಯಕ್ಷ ಡಾ: ನಟರಾಜ್ ಹುಳಿಯಾರ್ ಅವರು ಮಾತನಾಡಿ, ಅಸ್ಪೃಶ್ಯತೆ ಮತ್ತು ಶೋಷಣೆ ಮುಕ್ತ ಸಮಾಜ ನಿರ್ಮಾಣವಾದಾಗ ಮಾತ್ರ ಗಾಂಧೀ ತತ್ವಗಳನ್ನು ಜೀವಂತವಾಗಿಡಲು ಸಾಧ್ಯವೆಂದು ಹೇಳಿದ ಅವರು, ಗಾಂಧೀ ವಿಚಾರಧಾರೆಗಳನ್ನು ವ್ಯಾಪಕವಾಗಿ ಪ್ರಚಾರ ಮಾಡುವ ಮೂಲಕ ಅಧೀರತೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಡೆಯಲು ಸಾಧ್ಯವೆಂದರು.

ಗಾಂಧೀ ಮಾಹಿತಿ ಪುಸ್ತಕ ಬಿಡುಗಡೆಮಾಡಿದ ಜಿಲ್ಲಾ ಪಂಚಾಯತಿ ಸಿಇಓ ಡಾ.ಬಿ.ಆರ್. ಮಮತ ಮಾತನಾಡಿ, ಸತ್ಯ ಮಾರ್ಗದಲ್ಲಿ ನಡೆದಾಗ ಧೈರ್ಯ, ಸ್ಥೈರ್ಯ, ಆತ್ಮವಿಶ್ವಾಸ ಬೆಳೆಯಲಿದೆ ಎಂಬುದನ್ನು ಗಾಂಧೀ ವಿಚಾರಧಾರೆಗಳಿಂದ ತಿಳಿಯಬಹುದೆಂದು ಹೇಳಿದ ಅವರು, ಗಾಂಧೀ ಜೀವನ ಮತ್ತು ಬದುಕಿನ ಮಾರ್ಗಗಳನ್ನು ವಿದೇಶಿಯರು ಗೌರವದಿಂದ ಸ್ಮರಿಸುತ್ತಾರೆ ಎಂಬುದನ್ನು ಸಚಿತ್ರ ಘಟನೆಯೊಂದಿಗೆ ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಾಪೂಜಿ ವಿದ್ಯಾಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿ ಎಂ. ಬಸವಯ್ಯ ಅವರು ಮಾತನಾಡಿ, ಗಾಂಧೀ ದೇವರಲ್ಲ, ಪವಾಡ ಪುರುಷನಲ್ಲ ಹಾಗೂ ರಾಜಕೀಯ ತಜ್ಞನೂ ಅಲ್ಲ, ಅವರೊಬ್ಬ ಸತ್ಯಶೋಧಕ, ಸಾಧಕ ಎಂದು ಬಣ್ಣಿಸಿದರಲ್ಲದೆ, ಸ್ವಾರ್ಥ, ಅಹಿಂಸೆಗಳೇ ಎಲ್ಲೆಡೆ ತುಂಬಿರುವ ಸಂದರ್ಭದಲ್ಲಿ ಗಾಂಧೀ ವಿಚಾರಧಾರೆಗಳನ್ನು ಸಮಾಜಕ್ಕೆ ಮುಟ್ಟಿಸುವ ಕೆಲಸಗಳಾಗಬೇಕೆಂದು ಆಶಿಸಿದರು.

ಗಾಂಧೀಭವನದ ಗೌರವ ಕಾರ್ಯದರ್ಶಿ ಪ್ರೊ. ಜಿ.ಬಿ. ಶಿವರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. -ರವೀಂದ್ರ ಕಲಾನಿಕೇತನ ಪ್ರಾಚಾರ್ಯ ಬಾಬುರಾವ್ ಸ್ವಾಗತಿಸಿದರು. ಇದಕ್ಕೂ ಮುನ್ನ ವೇಮಗಲ್ ಸೋಮಶೇಖರ್ ಅವರ ಗಾಂಧೀ ಉಡುಗೆಯೊಂದಿಗೆ ನಡೆದ ಪಾದಯಾತ್ರೆಯಲ್ಲಿ ಹಲವಾರು ಗಣ್ಯರು, ಶಾಲಾ ಮಕ್ಕಳು ಪಾಲ್ಗೊಂಡಿದ್ದರು.

ವಿಜಯ ಕರ್ನಾಟಕ
ಬುಧವಾರ, 15 ಜುಲೈ 2015

ತುಮಕೂರಿನಲ್ಲಿ ಗಾಂಧಿ ನೆನಪಿನಂಗಳ ಕಾರ್ಯಕ್ರಮದಲ್ಲಿ ಜಿಪಂ ಅಧ್ಯಕ್ಷ ವೈ.ಎಚ್.ಹುಚ್ಚಯ್ಯ ಕಳವಳ

ಗಾಂಧಿ ತತ್ತ್ವ ರೂಢಿಸಿಕೊಳ್ಳದಿದ್ದರೆ ದೇಶಕ್ಕೆ ಕಂಟಕ

ವಿಕ ಸುದ್ದಿಲೋಕ ತುಮಕೂರು

ಭಾರತೀಯ ಪ್ರಜೆಗಳು ಗಾಂಧಿ ತತ್ತ್ವವನ್ನು ರೂಢಿಸಿಕೊಳ್ಳದಿದ್ದರೆ ದೇಶಕ್ಕೆ ಕಂಟಕವಾಗಲಿದೆ ಎಂದು ಜಿ.ಪಂ ಅಧ್ಯಕ್ಷ ವೈ.ಎಚ್.ಹುಚ್ಚಯ್ಯ ಕಳವಳ ವ್ಯಕ್ತಪಡಿಸಿದರು.

ನಗರದ ಬಾಪೂಜಿ ಪ್ರಥಮದರ್ಜೆ ಕಾಲೇಜಿನ ಆವರಣದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ, ಬಾಪೂಜಿ ಶಿಕ್ಷಣ ಸಂಸ್ಥೆ ಹಾಗೂ ವಾರ್ತಾ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ತುಮಕೂರಿನಲ್ಲಿ ಗಾಂಧಿ ನೆನಪಿನಂಗಳದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಗಾಂಧಿ ತತ್ತ್ವ ಮತ್ತು ವಿಚಾರಧಾರೆಗಳನ್ನು ಪ್ರತಿಯೊಬ್ಬರು ಅನುಸರಿಸುತ್ತಾ ಸರ್ವಕಾಲಕ್ಕೂ ಜೀವಂತವಾಗಿಟ್ಟಾಗ ಮಾತ್ರ ಸ್ವಾಸ್ಥ್ಯ ಸಮಾಜದ ನಿರ್ಮಾಣ ಸಾಧ್ಯ ಎಂದರು.

ಭಾರತ ಶ್ರೀಮಂತ ರಾಷ್ಟ್ರವಿಲ್ಲ. ಶ್ರೀಮಂತರ ಪ್ರಭಾವಲಯದಲ್ಲಿ ಸಿಲುಕಿಕೊಂಡಿರುವ ರಾಷ್ಟ್ರ. ಈ ದೇಶದ ಸಂಪತ್ತು ಕೆಲವೇ ವ್ಯಕ್ತಿಗಳ ಕಪಿಮುಷ್ಠಿಯಲ್ಲಿದ್ದು, ಸರ್ವಜನರ ಉದ್ಧಾರ ಬಯಸಿದ ಗಾಂಧಿ ಅವರ ಚಿಂತನೆಗೆ ವಿರುದ್ಧವೆನಿಸಿದೆ. ಸತ್ಯ-ಅಹಿಂಸೆ ಮತ್ತು ಮಾನವೀಯತೆಯನ್ನು ಮೈಗೂಡಿಸಿಕೊಂಡಾಗ ಮಾತ್ರ ಗಾಂಧಿ ವಿಚಾರಧಾರೆಗಳನ್ನು ಗೌರವಿಸಿದಂತಾಗುತ್ತದೆ ಎಂದು ನುಡಿದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ಹೋ. ಶ್ರೀನಿವಾಸಯ್ಯ ಗಾಂಧಿ ಅಧ್ಯಯನ ಕೇಂದ್ರ ಉದ್ಘಾಟಿಸಿ ಮಾತನಾಡಿ, ಸಮಾಜದಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆಯಿಂದ ಬದುಕಲು ಗಾಂಧಿ ವಿಚಾರಧಾರೆಗಳು ಅವಶ್ಯ. ಸರಳ ಜೀವನ, ಬದುಕನ್ನು ಧೈರ್ಯದಿಂದ ಎದುರಿಸುವ ಗುಣಗಳನ್ನು ಯುವಜನತೆ ಬೆಳೆಸಿಕೊಳ್ಳಬೇಕು ಎಂದರು.

ವಿಕ ಚಿತ್ರಲೋಕ



ತುಮಕೂರಿನಲ್ಲಿ ಆಯೋಜಿಸಿದ್ದ ಗಾಂಧಿ ನೆನಪಿಂಗಳದಲ್ಲಿ ಕಾರ್ಯಕ್ರಮಕ್ಕೂ ಮುನ್ನ ಗಾಂಧಿ ವೇಷಧಾರಿ ವೇಮಗಲ್ ಸೋಮಶೇಖರ್ ನೇತೃತ್ವದಲ್ಲಿ ನಡೆದ ಪಾದಯಾತ್ರೆಯಲ್ಲಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಓ.ಆರ್.ಶ್ರೀನಿವಾಸಯ್ಯ, ಜಿ.ಪಂ ಅಧ್ಯಕ್ಷ ವೈ.ಎಚ್.ಹುಚ್ಚಯ್ಯ, ಎಂ.ಬಸವಯ್ಯ, ಜಿ.ಬಿ.ಶಿವರಾಜು, ಆರ್.ರಂಗಸ್ವಾಮಯ್ಯ, ಜಿ.ಪಂ ಸಿಇಒ ಡಾ.ಬಿ.ಆರ್.ಮಮತಾ ಪಾಲ್ಗೊಂಡಿದ್ದರು.

ಹೃದಯದಲ್ಲಿ ಗಾಂಧಿ ನೆಲೆಸಲಿ: ಗಾಂಧಿ ಪ್ರತಿಷ್ಠಾನ ಅಧ್ಯಕ್ಷ ಡಾ. ವೂಡೇ.ಪಿ.ಕೃಷ್ಣ ಮಾತನಾಡಿ, ಗಾಂಧೀಜಿಯವರ ವಿಚಾರಧಾರೆಗಳ ಪ್ರಭಾವದಿಂದಾಗಿ ಇಡೀ ವಿಶ್ವವೇ ಭಾರತದ ಕಡೆ ನೋಡುವಂತಾಗಿದೆ. ರಸ್ತೆ, ಸರ್ಕಲ್‌ಗಳಲ್ಲಿ, ನೋಟುಗಳಲ್ಲಿ ಗಾಂಧಿಯನ್ನು ಬಂಧಿಸಿಡುವುದಕ್ಕಿಂತ ಪ್ರತಿಯೊಬ್ಬರ ಮನದಲ್ಲಿ ಗಾಂಧಿ ಆರಾಧಿಸುವಂತಾಗಬೇಕಿದೆ ಎಂದರು.

ಗಾಂಧಿ ತತ್ವ ಜೀವಂತ : ಗಾಂಧಿ ಅಧ್ಯಯನ ಕೇಂದ್ರದ ಅಧ್ಯಕ್ಷ ಡಾ ನಟರಾಜ್ ಹುಳಿಯಾರ್ ಮಾತನಾಡಿ, ಅಸ್ಪೃಶ್ಯತೆ ಮತ್ತು ಶೋಷಣೆ ಮುಕ್ತ ಸಮಾಜ ನಿರ್ಮಾಣವಾದಾಗ ಮಾತ್ರ ಗಾಂಧಿ ತತ್ವಗಳನ್ನು ಜೀವಂತವಾಗಿಡಲು ಸಾಧ್ಯ ಎಂದರು.

ಕೃತಿ ಅನಾವರಣ: ಬಾಪೂಜಿ ಪ್ರಥಮದರ್ಜೆ ಕಾಲೇಜಿನ ಸಿದ್ಧಗಂಗಯ್ಯ ಹೊಲತಾಳ್ ಸಂಪಾದಕತ್ವದ ತುಮಕೂರಿನಲ್ಲಿ ಗಾಂಧೀಜಿ ಕೃತಿ ಬಿಡುಗಡೆಗೊಳಿಸಿ ಜಿ.ಪಂ. ಸಿಇಒ ಡಾ. ಬಿ.ಆರ್.ಮಮತಾ ಮಾತನಾಡಿ, ಗಾಂಧೀಜಿಯವರ ಸತ್ಯಮಾರ್ಗದಲ್ಲಿ ನಡೆದಾಗ ಧೈರ್ಯ, ಸ್ಥೈರ್ಯ, ಆತ್ಮವಿಶ್ವಾಸ ಬೆಳೆಯಲಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಬಾಪೂಜಿ ವಿದ್ಯಾಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿ ಎಂ. ಬಸವಯ್ಯ ಮಾತನಾಡಿ, ಗಾಂಧಿ ದೇವರಲ್ಲ, ಪವಾಡ ಪುರುಷನಲ್ಲ ಹಾಗೂ ರಾಜಕೀಯ ತಜ್ಞನೂ ಅಲ್ಲ, ಅವರೊಬ್ಬ ಸತ್ಯಶೋಧಕ, ಸಾಧಕ. ಸ್ವಾರ್ಥ, ಅಹಿಂಸೆಗಳೇ ಎಲ್ಲೆಡೆ ತುಂಬಿರುವ ಸಂದರ್ಭದಲ್ಲಿ ಗಾಂಧಿ ವಿಚಾರಧಾರೆಗಳನ್ನು ಸಮಾಜಕ್ಕೆ ಮುಟ್ಟಿಸುವ ಕೆಲಸಗಳಾಗಬೇಕು ಎಂದು ಆಶಿಸಿದರು.

ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ರಂಗಸ್ವಾಮಯ್ಯ, ಕಾರ್ಯದರ್ಶಿ ಚಂದ್ರಮೌಳೀಶ್ವರ ಸ್ವಾಮಿ ವೇದಿಕೆಯಲ್ಲಿ ನಂತರ ವಿಚಾರ ಸಂಕಿರಣ ನಡೆಯಿತು. ಗಾಂಧೀಭವನದ ಗೌರವ ಕಾರ್ಯದರ್ಶಿ ಪ್ರೊ. ಜಿ.ಬಿ. ಶಿವರಾಜು ಮಾತನಾಡಿದರು. ರವೀಂದ್ರ ಕಲಾನಿಕೇತನ ಪ್ರಿನ್ಸಿಪಾಲ್ ಬಾಬುರಾವ್ ಸ್ವಾಗತಿಸಿದರು. ಇದಕ್ಕೂ ಮುನ್ನ ಗಾಂಧಿ ವೇಷಧಾರಿ ವೇಮಗಲ್ ಸೋಮಶೇಖರ್ ಅವರ ನೇತೃತ್ವದಲ್ಲಿ ನೂರಾರು ಮಕ್ಕಳು, ಗಣ್ಯರು ಬಿಳಿಟೋಪಿ ಧರಿಸಿ ಗಾಂಧಿ ವಿಚಾರಧಾರೆಗಳ ಭಿತ್ತಿಪತ್ರ ಹಿಡಿದು ನಗರದಲ್ಲಿ ಮೆರವಣಿಗೆ ನಡೆಸಿದರು.

ಜುಲೈ 15, 2015, ಬುಧವಾರ

ಸೊಗಡು

ಜನರ ವಿಶ್ವಾಸಾರ್ಹ ದೈನಿಕ
ಸಂಪಾದಕರು: ಎಸ್. ಶಿವಣ್ಣ

ಗಾಂಧಿ ತತ್ವಗಳು ಸರ್ವಕಾಲಕ್ಕೂ ಜೀವಂತ

ತುಮಕೂರು ಜು.14: ಗಾಂಧೀತತ್ವ ಮತ್ತು ವಿಚಾರಧಾರೆಗಳನ್ನು ಸರ್ವಕಾಲಕ್ಕೂ ಜೀವಂತವಾಗಿಟ್ಟಾಗ ಮಾತ್ರ ಸ್ವಾಸ್ಥ್ಯ ಸಮಾಜದ ನಿರ್ಮಾಣ ಸಾಧ್ಯವೆಂದು ಜಿಲ್ಲಾ ಪಂಚಾಯತಿ ಅಧ್ಯಕ್ಷ ವೈ.ಹೆಚ್. ಹುಚ್ಚಯ್ಯ ತಿಳಿಸಿದರು.



ಅವರು ಇಂದು ನಗರದ ಬಾಪೂಜಿ ಪ್ರಥಮದರ್ಜೆ ಕಾಲೇಜಿನ ಆವರಣದಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ, ಬಾಪೂಜಿ ಶಿಕ್ಷಣ ಸಂಸ್ಥೆ ಹಾಗೂ ವಾರ್ತಾ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ತುಮಕೂರಿನಲ್ಲಿ ಗಾಂಧೀ ನೆನಪಿನಂಗಳದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಈ ದೇಶದ ಸಂಪತ್ತು ಕೆಲವೇ ವ್ಯಕ್ತಿಗಳ ಕಪಿಮುಷ್ಠಿಯಲ್ಲಿರುವ ಕೆಟ್ಟ ಪರಿಸ್ಥಿತಿಯಲ್ಲಿ ಗಾಂಧೀ ವಿಚಾರಧಾರೆಗಳನ್ನು ಯುವಪೀಳಿಗೆಗೆ ಪರಿಚಯಿಸುವುದು ಅತ್ಯಂತ ಅರ್ಥಪೂರ್ಣವೆಂದು ಹೇಳಿದ ಅವರು, ಶ್ರೀಮಂತಿಕೆ ಇದ್ದರೆ ಸಾಲದು. ಸತ್ಯ-ಅಹಿಂಸೆ ಮತ್ತು ಮಾನವೀಯತೆಯನ್ನು ಮೈಗೂಡಿಸಿಕೊಂಡಾಗ ಮಾತ್ರ ಗಾಂಧೀ ವಿಚಾರಧಾರೆಗಳನ್ನು ಗೌರವಿಸಿದಂತಾಗುತ್ತದೆ ಎಂದು ಹೇಳಿದರು.

ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ: ಹೋ. ಶ್ರೀನಿವಾಸಯ್ಯ ಅವರು ಮಾತನಾಡಿ, ಸಮಾಜದಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆಯಿಂದ ಬದುಕಲು ಗಾಂಧೀ ವಿಚಾರಧಾರೆಗಳು ಅತ್ಯವಶ್ಯವೆಂದು ಹೇಳಿದ ಅವರು ಜೀವನದಲ್ಲಿ ಗಾಂಧೀತತ್ವಗಳನ್ನು ಅಳವಡಿಸಿಕೊಂಡರೆ ಆತ್ಮಹತ್ಯೆಯಂತ ಕೃತ್ಯಕ್ಕೆ ಕೈಹಾಕದೇ ಸಮಾಜದಲ್ಲಿ ಧೈರ್ಯವಾಗಿ ಹಾಗೂ ಆತ್ಮವಿಶ್ವಾಸದಿಂದ ಬದುಕುವ ದಾರಿ ಕಂಡುಕೊಳ್ಳಲು ಸಾಧ್ಯವಾಗುವುದೆಂದು ಹೇಳಿದರು ಯಾರನ್ನೂ ದ್ವೇಷಿಸದೆ ಪ್ರೀತಿ, ವಿಶ್ವಾಸದಿಂದ ಬದುಕಿದಾಗ ಮಾತ್ರ ಗಾಂಧಿ ತತ್ವಗಳನ್ನು ಪಾಲಿಸಿದಂತಾಗುತ್ತದೆ ಎಂದರು.

ಗಾಂಧೀ ಪ್ರತಿಷ್ಠಾನ ಅಧ್ಯಕ್ಷ ಡಾ: ವೂಡೇ.ಪಿ.ಕೃಷ್ಣ ಅವರು ಮಾತನಾಡಿ, ಗಾಂಧೀಜಿಯವರ ವಿಚಾರಧಾರೆಗಳ ಪ್ರಭಾವದಿಂದಾಗಿ ಇಡೀ ವಿಶ್ವವೇ ಭಾರತದ ಕಡೆ ನೋಡುವಂತಾಗಿದೆ ಎಂದು ಅಭಿಪ್ರಾಯಪಟ್ಟ ಅವರು, ಪ್ರತಿಯೊಬ್ಬರು ಗಾಂಧಿಯನ್ನು ಹೃದಯದಲ್ಲಿಟ್ಟು ಆರಾಧಿಸುವಂತಾಗಬೇಕೆಂದರಲ್ಲದೆ, ಸ್ವಚ್ಛ ಪರಿಸರದಲ್ಲಿ (4ನೇ ಪುಟಕ್ಕೆ)

ಗಾಂಧಿ ತತ್ವಗಳು ಸರ್ವಕಾಲಕ್ಕೂ ಜೀವಂತ

(1ನೇ ಪುಟದಿಂದ)

ಸರಳವಾಗಿ ಬದುಕುವುದನ್ನು ಗಾಂಧಿ ತೋರಿಸಿಕೊಟ್ಟಿದ್ದಾರೆ ಇದನ್ನು ಪ್ರತಿಯೊಬ್ಬರೂ ಪಾಲಿಸಬೇಕೆಂದರು.

ಗಾಂಧೀ ಅಧ್ಯಯನ ಕೇಂದ್ರದ ಅಧ್ಯಕ್ಷ ಡಾ: ನಟರಾಜ್ ಹುಳಿಯಾರ್ ಅವರು ಮಾತನಾಡಿ, ಅಸ್ಪೃಶ್ಯತೆ ಮತ್ತು ಶೋಷಣೆ ಮುಕ್ತ ಸಮಾಜ ನಿರ್ಮಾಣವಾದಾಗ ಮಾತ್ರ ಗಾಂಧೀ ತತ್ವಗಳನ್ನು ಜೀವಂತವಾಗಿಡಲು ಸಾಧ್ಯವೆಂದು ಹೇಳಿದ ಅವರು, ಗಾಂಧೀ ವಿಚಾರಧಾರೆಗಳನ್ನು ವ್ಯಾಪಕವಾಗಿ ಪ್ರಚಾರ ಮಾಡುವ ಮೂಲಕ ಅಧೀರತೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಡೆಯಲು ಸಾಧ್ಯವೆಂದರು.

ಗಾಂಧೀ ಮಾಹಿತಿ ಪುಸ್ತಕ ಬಿಡುಗಡೆ ಮಾಡಿದ ಜಿಲ್ಲಾ ಪಂಚಾಯತಿ ಸಿ.ಇ.ಓ. ಡಾ: ಬಿ.ಆರ್. ಮಮತ ಅವರು ಮಾತನಾಡಿ, ಸತ್ಯಮಾರ್ಗದಲ್ಲಿ ನಡೆದಾಗ ಧೈರ್ಯ, ಸ್ಥೈರ್ಯ, ಆತ್ಮವಿಶ್ವಾಸ ಬೆಳೆಯಲಿದೆ ಎಂಬುದನ್ನು ಗಾಂಧೀ ವಿಚಾರಧಾರೆಗಳಿಂದ ತಿಳಿಯಬಹುದೆಂದು ಹೇಳಿದ ಅವರು, ಗಾಂಧೀ ಜೀವನ ಮತ್ತು ಬದುಕಿನ ಮಾರ್ಗಗಳನ್ನು ವಿದೇಶಿಯರು ಗೌರವದಿಂದ ಸ್ಮರಿಸುತ್ತಾರೆ ಎಂಬುದನ್ನು ಸಚಿತ್ರ ಘಟನೆಯೊಂದಿಗೆ ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಾಪೂಜಿ ವಿದ್ಯಾಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿ ಎಂ. ಬಸವಯ್ಯ ಅವರು ಮಾತನಾಡಿ, ಗಾಂಧೀ ದೇವರಲ್ಲ, ಪವಾಡ ಪುರುಷನಲ್ಲ ಹಾಗೂ ರಾಜಕೀಯ ತಜ್ಞನೂ ಅಲ್ಲ. ಅವರೊಬ್ಬ ಸತ್ಯಶೋಧಕ, ಸಾಧಕ ಎಂದು ಬಣ್ಣಿಸಿದರಲ್ಲದೆ, ಸ್ವಾರ್ಥ, ಅಹಿಂಸೆಗಳೇ ಎಲ್ಲೆಡೆ ತುಂಬಿರುವ ಸಂದರ್ಭದಲ್ಲಿ ಗಾಂಧೀ ವಿಚಾರಧಾರೆಗಳನ್ನು ಸಮಾಜಕ್ಕೆ ಮುಟ್ಟಿಸುವ ಕೆಲಸಗಳಾಗಬೇಕೆಂದು ಆಶಿಸಿದರು.

ಗಾಂಧೀಭವನದ ಗೌರವ ಕಾರ್ಯದರ್ಶಿ ಪ್ರೊ. ಜಿ.ಬಿ. ಶಿವರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ರವೀಂದ್ರ ಕಲಾನಿಕೇತನ ಪ್ರಾಚಾರ್ಯ ಬಾಬುರಾವ್ ಸ್ವಾಗತಿಸಿದರು. ಇದಕ್ಕೂ ಮುನ್ನ ವೇಮಗಲ್ ಸೋಮಶೇಖರ್ ಅವರ ಗಾಂಧೀ ಉಡುಗೆಯೊಂದಿಗೆ ನಡೆದ ಪಾದಯಾತ್ರೆಯಲ್ಲಿ ಹಲವಾರು ಗಣ್ಯರು, ಶಾಲಾ ಮಕ್ಕಳು ಪಾಲ್ಗೊಂಡಿದ್ದರು.

ಅಮೃತವಾಣಿ ತುಮಕೂರು ಕನ್ನಡ ಸಂಜೆ ದಿನಪತ್ರಿಕೆ 15-07-2015

ಗಾಂಧಿ ತತ್ವಗಳನ್ನು ಸರ್ವಕಾಲಕ್ಕೂ ಜೀವಂತವಾಗಿಟ್ಟಾಗ ಮಾತ್ರ ಸ್ವಾಸ್ಥ್ಯ ಸಮಾಜ ಸೃಷ್ಟಿ ಸಾಧ್ಯ - ವೈ.ಹೆಚ್.ಹುಚ್ಚಯ್ಯ



ತುಮಕೂರು ಜು.15- ಗಾಂಧೀತತ್ವ ಮತ್ತು ವಿಚಾರಧಾರೆಗಳನ್ನು ಸರ್ವಕಾಲಕ್ಕೂ ಜೀವಂತವಾಗಿಟ್ಟಾಗ ಮಾತ್ರ ಸ್ವಾಸ್ಥ್ಯ ಸಮಾಜದ ನಿರ್ಮಾಣ ಸಾಧ್ಯವೆಂದು ಜಿಲ್ಲಾ ಪಂಚಾಯತಿ ಅಧ್ಯಕ್ಷ ವೈ.ಹೆಚ್. ಹುಚ್ಚಯ್ಯ ತಿಳಿಸಿದರು.

ಅವರು ಇಂದು ನಗರದ ಬಾಪೂಜಿ ಪ್ರಥಮದರ್ಜೆ ಕಾಲೇಜಿನ ಆವರಣದಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ, ಬಾಪೂಜಿ ಶಿಕ್ಷಣ ಸಂಸ್ಥೆ ಹಾಗೂ ವಾರ್ತಾ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ತುಮಕೂರಿನಲ್ಲಿ ಗಾಂಧೀ ನೆನಪಿನಂಗಳದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಈ ದೇಶದ ಸಂಪತ್ತು ಕೆಲವೇ ವ್ಯಕ್ತಿಗಳ ಕಪಿಮುಷ್ಟಿಯಲ್ಲಿರುವ ಕೆಟ್ಟ ಪರಿಸ್ಥಿತಿಯಲ್ಲಿ ಗಾಂಧೀ ವಿಚಾರಧಾರೆಗಳನ್ನು ಯುವಪೀಳಿಗೆಗೆ ಪರಿಚಯಿಸುವುದು ಅತ್ಯಂತ ಅರ್ಥಪೂರ್ಣವೆಂದು ಹೇಳಿದ ಅವರು, ಶ್ರೀಮಂತಿಕೆ ಇದ್ದರೆ ಸಾಲದು. ಸತ್ಯ-ಅಹಿಂಸೆ ಮತ್ತು ಮಾನವೀಯತೆಯನ್ನು ಮೈಗೂಡಿಸಿಕೊಂಡಾಗ ಮಾತ್ರ ಗಾಂಧೀ ವಿಚಾರಧಾರೆಗಳನ್ನು ಗೌರವಿಸಿದಂತಾಗುತ್ತದೆ ಎಂದು ಹೇಳಿದರು.

ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ|| ಹೋ. ಶ್ರೀನಿವಾಸಯ್ಯ ಅವರು ಮಾತನಾಡಿ, ಸಮಾಜದಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆಯಿಂದ ಬದುಕಲು ಗಾಂಧೀ ವಿಚಾರಧಾರೆಗಳು ಅತ್ಯವಶ್ಯವೆಂದು ಹೇಳಿದ ಅವರು ಜೀವನದಲ್ಲಿ ಗಾಂಧೀತತ್ವಗಳನ್ನು ಅಳವಡಿಸಿಕೊಂಡರೆ ಆತ್ಮಹತ್ಯೆಯಂತ ಕೃತ್ಯಕ್ಕೆ ಕೈಹಾಕದೆ ಸಮಾಜದಲ್ಲಿ ಧೈರ್ಯವಾಗಿ ಹಾಗೂ ಆತ್ಮವಿಶ್ವಾಸದಿಂದ ಬದುಕುವ ದಾರಿ ಕಂಡುಕೊಳ್ಳಲು ಸಾಧ್ಯವಾಗುವುದೆಂದು ಹೇಳಿದರು. ಯಾರನ್ನೂ ದ್ವೇಷಿಸದೆ ಪ್ರೀತಿ, ವಿಶ್ವಾಸದಿಂದ ಬದುಕಿದಾಗ ಮಾತ್ರ ಗಾಂಧಿ ತತ್ವಗಳನ್ನು ಪಾಲಿಸಿದಂತಾಗುತ್ತದೆ ಎಂದರು.

ಗಾಂಧೀ ಪ್ರತಿಷ್ಠಾನ ಅಧ್ಯಕ್ಷ ಡಾ|| ವೂಡೇ.ಪಿ.ಕೃಷ್ಣ ಅವರು ಮಾತನಾಡಿ, ಗಾಂಧೀಜಿಯವರ ವಿಚಾರಧಾರೆಗಳ ಪ್ರಭಾವದಿಂದಾಗಿ ಇಡೀ ವಿಶ್ವವೇ ಭಾರತದ ಕಡೆ ನೋಡುವಂತಾಗಿದೆ ಎಂದು ಅಭಿಪ್ರಾಯಪಟ್ಟ ಅವರು, ಪ್ರತಿಯೊಬ್ಬರು ಗಾಂಧಿಯನ್ನು ಹೃದಯದಲ್ಲಿಟ್ಟು ಆರಾಧಿಸುವಂತಾಗಬೇಕೆಂದರಲ್ಲದೆ, ಸ್ವಚ್ಛ ಪರಿಸರದಲ್ಲಿ ಸರಳವಾಗಿ ಬದುಕುವುದನ್ನು ಗಾಂಧಿ ತೋರಿಸಿಕೊಟ್ಟಿದ್ದಾರೆ ಇದನ್ನು ಪ್ರತಿಯೊಬ್ಬರೂ ಪಾಲಿಸಬೇಕೆಂದರು.

ಗಾಂಧೀ ಅಧ್ಯಯನ ಕೇಂದ್ರದ ಅಧ್ಯಕ್ಷ ಡಾ|| ನಟರಾಜ್ ಹುಳಿಯಾರ್ ಅವರು ಮಾತನಾಡಿ, ಅಸ್ಪೃಶ್ಯತೆ ಮತ್ತು ಶೋಷಣೆ ಮುಕ್ತ ಸಮಾಜ ನಿರ್ಮಾಣವಾದಾಗ ಮಾತ್ರ ಗಾಂಧೀ ತತ್ವಗಳನ್ನು ಜೀವಂತವಾಗಿಡಲು ಸಾಧ್ಯವೆಂದು ಹೇಳಿದ ಅವರು, ಗಾಂಧೀ ವಿಚಾರಧಾರೆಗಳನ್ನು ವ್ಯಾಪಕವಾಗಿ ಪ್ರಚಾರ ಮಾಡುವ ಮೂಲಕ ಅಧೀರತೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಡೆಯಲು ಸಾಧ್ಯವೆಂದರು.

ಗಾಂಧೀ ಮಾಹಿತಿ ಪುಸ್ತಕ ಬಿಡುಗಡೆ ಮಾಡಿದ ಜಿಲ್ಲಾ ಪಂಚಾಯತಿ ಸಿ.ಇ.ಓ. ಡಾ|| ಬಿ.ಆರ್.ಮಮತ ಅವರು ಮಾತನಾಡಿ, ಸತ್ಯಮಾರ್ಗದಲ್ಲಿ ನಡೆದಾಗ ಧೈರ್ಯ, ಸ್ಥೈರ್ಯ, ಆತ್ಮವಿಶ್ವಾಸ ಬೆಳೆಯಲಿದೆ ಎಂಬುದನ್ನು ಗಾಂಧೀ ವಿಚಾರಧಾರೆಗಳಿಂದ ತಿಳಿಯಬಹುದೆಂದು ಹೇಳಿದ ಅವರು, ಗಾಂಧೀ ಜೀವನ ಮತ್ತು ಬದುಕಿನ ಮಾರ್ಗಗಳನ್ನು ವಿದೇಶಿಯರು ಗೌರವದಿಂದ ಸ್ಮರಿಸುತ್ತಾರೆ ಎಂಬುದನ್ನು ಸಚಿತ್ರ ಘಟನೆಯೊಂದಿಗೆ ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಾಪೂಜಿ ವಿದ್ಯಾಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿ ಎಂ. ಬಸವಯ್ಯ ಅವರು ಮಾತನಾಡಿ, ಗಾಂಧೀ ದೇವರಲ್ಲ, ಪವಾಡ ಪುರುಷನಲ್ಲ ಹಾಗೂ ರಾಜಕೀಯ ತಜ್ಞನೂ ಅಲ್ಲ. ಅವರೊಬ್ಬ ಸತ್ಯಶೋಧಕ, ಸಾಧಕ ಎಂದು ಬಣ್ಣಿಸಿದರಲ್ಲದೆ, ಸ್ವಾರ್ಥ, ಅಹಿಂಸೆಗಳೇ ಎಲ್ಲೆಡೆ ತುಂಬಿರುವ ಸಂದರ್ಭದಲ್ಲಿ (2ನೇ ಪುಟಕ್ಕೆ)

ಸ್ವಾಸ್ಥ್ಯ ಸಮಾಜ ಸೃಷ್ಟಿ ಸಾಧ್ಯ

ಗಾಂಧೀ ವಿಚಾರಧಾರೆಗಳನ್ನು ಸಮಾಜಕ್ಕೆ ಮುಟ್ಟಿಸುವ ಕೆಲಸಗಳಾಗಬೇಕೆಂದು ಆಶಿಸಿದರು.

ಗಾಂಧೀಭವನದ ಗೌರವ ಕಾರ್ಯದರ್ಶಿ ಪ್ರೊ. ಜಿ.ಬಿ. ಶಿವರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ರವೀಂದ್ರ ಕಲಾನಿಕೇತನ ಪ್ರಾಚಾರ್ಯ ಬಾಬುರಾವ್ ಸ್ವಾಗತಿಸಿದರು. ಇದಕ್ಕೂ ಮುನ್ನ, ವೇಮಗಲ್ ಸೋಮಶೇಖರ್ ಅವರ ಗಾಂಧೀ ಉಡುಗೆಯೊಂದಿಗೆ ನಡೆದ ಪಾದಯಾತ್ರೆಯಲ್ಲಿ ಹಲವಾರು ಗಣ್ಯರು, ಶಾಲಾ ಮಕ್ಕಳು ಪಾಲ್ಗೊಂಡಿದ್ದರು.

ತುಮಕೂರು

ಬೆಂಗಳೂರು
ಬುಧವಾರ, 15 ಜುಲೈ 2015

ಹೊಸ ದಿಗಂತ

ತುಮಕೂರಿನಲ್ಲಿ ಗಾಂಧಿ ನೆನಪು ಕಾರ್ಯಕ್ರಮದಲ್ಲಿ ಜಿಪಂ ಅಧ್ಯಕ್ಷ ವೈ.ಎಚ್.ಹುಚ್ಚಯ್ಯ ವ್ಯಾಖ್ಯೆ

ಎಲ್ಲ ಕಾಲಕ್ಕೂ ಗಾಂಧಿ ತತ್ವ ಪ್ರಸ್ತುತ

ತುಮಕೂರು: ಗಾಂಧಿತತ್ವ ಮತ್ತು ವಿಚಾರಧಾರೆ ಸರ್ವಕಾಲಕ್ಕೂ ಜೀವಂತವಾಗಿಟ್ಟಾಗ ಮಾತ್ರ ಆರೋಗ್ಯ ಸಮಾಜದ ನಿರ್ಮಾಣ ಸಾಧ್ಯವೆಂದು ಜಿಲ್ಲಾ ಪಂಚಾಯತಿ ಅಧ್ಯಕ್ಷ ವೈ.ಹೆಚ್. ಹುಚ್ಚಯ್ಯ ತಿಳಿಸಿದರು.

ನಗರದ ಬಾಪೂಜಿ ಪ್ರಥಮದರ್ಜೆ ಕಾಲೇಜಿನ ಆವರಣದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ, ಬಾಪೂಜಿ ಶಿಕ್ಷಣ ಸಂಸ್ಥೆ ಹಾಗೂ ವಾರ್ತಾ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ತುಮಕೂರಿನಲ್ಲಿ ಗಾಂಧಿ ನೆನಪಿನಂಗಳದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಈ ದೇಶದ ಸಂಪತ್ತು ಕೆಲವೇ ವ್ಯಕ್ತಿಗಳ ಕಪಿಮುಷ್ಠಿಯಲ್ಲಿರುವ ಕೆಟ್ಟ ಪರಿಸ್ಥಿತಿಯಲ್ಲಿ ಗಾಂಧಿ ವಿಚಾರಧಾರೆಯನ್ನು ಯುವಪೀಳಿಗೆಗೆ ಪರಿಚಯಿಸುವುದು ಅತ್ಯಂತ ಅರ್ಥಪೂರ್ಣವೆಂದು ಎಂದರು.

ಸಹಬಾಳ್ವೆ ಗಾಂಧಿ ತತ್ವದ ಸಂಕೇತ

ಸಮಾಜದಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆಯಿಂದ ಬದುಕಲು ಗಾಂಧಿ ವಿಚಾರಧಾರೆಗಳು ಅತ್ಯವಶ್ಯವೆಂದು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ಹೋ. ಶ್ರೀನಿವಾಸಯ್ಯ ಹೇಳಿದರು. ಜೀವನದಲ್ಲಿ ಗಾಂಧಿ ತತ್ವವನ್ನು ಅಳವಡಿಸಿಕೊಂಡರೆ ಆತ್ಮಹತ್ಯೆಯಂತ ಕೃತ್ಯಕ್ಕೆ ಕೈಹಾಕದೆ ಸಮಾಜದಲ್ಲಿ ಧೈರ್ಯವಾಗಿ ಹಾಗೂ ಆತ್ಮವಿಶ್ವಾಸದಿಂದ ಬದುಕುವ



ದಾರಿ ಕಂಡುಕೊಳ್ಳಲು ಸಾಧ್ಯವಾಗುವುದೆಂದು ಹೇಳಿದರು

ಗಾಂಧಿ ಪ್ರತಿಷ್ಠಾನ ಅಧ್ಯಕ್ಷ ಡಾ. ವೂಡೇ.ಪಿ.ಕೃಷ್ಣ ಅವರು ಮಾತನಾಡಿ, ಗಾಂಧೀಜಿ ವಿಚಾರಧಾರೆಗಳ ಪ್ರಭಾವದಿಂದಾಗಿ ಇಡೀ ವಿಶ್ವವೇ ಭಾರತದ ಕಡೆ ನೋಡುವಂತಾಗಿದೆ . ಪ್ರತಿಯೊಬ್ಬರು ಗಾಂಧಿಯನ್ನು ಹೃದಯದಲ್ಲಿಟ್ಟು ಆರಾಧಿಸುವಂತಾಗಬೇಕು ಎಂದರು. ಗಾಂಧಿ ಅಧ್ಯಯನ ಕೇಂದ್ರದ ಅಧ್ಯಕ್ಷ ಡಾ. ನಟರಾಜ್ ಹುಳಿಯಾರ್ ಮಾತನಾಡಿ, ಗಾಂಧಿ ವಿಚಾರಧಾರೆಗಳನ್ನು ವ್ಯಾಪಕವಾಗಿ ಪ್ರಚಾರ ಮಾಡುವ ಮೂಲಕ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಡೆಯಲು ಸಾಧ್ಯವೆಂದರು.

ಜಿ ಪಂ ಸಿಇಓ ಡಾ. ಬಿ.ಆರ್. ಮಮತ ಮಾತನಾಡಿ, ಸತ್ಯಮಾರ್ಗದಲ್ಲಿ ನಡೆದಾಗ ಆತ್ಮವಿಶ್ವಾಸ ಬೆಳೆಯಲಿದೆ ಎಂದು ಹೇಳಿದರು. ಸಮಾರಂಭದ ಅಧ್ಯಕ್ಷತೆಯನ್ನು ಬಾಪೂಜಿ ವಿದ್ಯಾಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿ ಎಂ. ಬಸವಯ್ಯ ವಹಿಸಿದ್ದರು. ಪ್ರೊ. ಶಿವರಾಜು ,ರವೀಂದ್ರ ಬಾಬುರಾವ್ ಸ್ವಾಗತಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI BENGALURU
ತುಮಕೂರು ಲೋಕಲ್ ಎಕ್ಸ್‌ಪ್ರೆಸ್
2B ಬುಧವಾರ 15 ಜುಲೈ 2015
15 JULY 2015

▫ ರಾಜಕಾರಣಿಗಳು ಪಕ್ಷಭೇದ ಮರೆಯಲಿ ▫ ವಿಮರ್ಶಕ ನಟರಾಜ್ ಹುಳಿಯಾರ್

ಅಧಿವೇಶನ ನಿಲ್ಲಿಸಿ, ರೈತರ ಮನೆಗೆ ಬನ್ನಿ

ತುಮಕೂರು: ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದು 2 ದಿನದ ಮಟ್ಟಿಗೆ ವಿಧಾನ ಮಂಡಲದ ಅಧಿವೇಶವನ್ನು ನಿಲ್ಲಿಸಿ ಪಕ್ಷಭೇದ ಮರೆತು ರೈತರ ಮನೆ ಬಾಗಿಲಿಗೆ ಬನ್ನಿ ಎಂದು ಬೆಂಗಳೂರು ವಿವಿ ಗಾಂಧಿ ಅಧ್ಯಯನ ಕೇಂದ್ರ ನಿರ್ದೇಶಕ, ವಿಮರ್ಶಕ ಡಾ.ನಟರಾಜ್ ಹುಳಿಯಾರ್ ಆಗ್ರಹಿಸಿದರು.

ಬಾಪೂಜಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಮದ್ಯಪಾನ ಸಂಯಮ ಮಂಡಳಿ, ಬಾಪೂಜಿ ಶಿಕ್ಷಣ ಸಂಸ್ಥೆ ಹಾಗೂ ವಾರ್ತಾ ಇಲಾಖೆ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ತುಮಕೂರಲ್ಲಿ ಗಾಂಧಿ ನೆನಪಿನಂಗಳ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸತ್ಯ, ಅಹಿಂಸೆ ಹಾಗೂ ಮಾನವೀಯತೆಯನ್ನು ಮೈಗೂಡಿಸಿಕೊಂಡಾಗ ಮಾತ್ರ ಗಾಂಧಿ ವಿಚಾರಧಾರೆಗಳನ್ನು ಗೌರವಿಸಿದಂತಾಗುತ್ತದೆ ಎಂದು ಜಿಪಂ ಅಧ್ಯಕ್ಷ ವೈ.ಎಚ್.ಹುಚ್ಚಯ್ಯ ಹೇಳಿದರು.

ಜೀವನದಲ್ಲಿ ಗಾಂಧಿ ತತ್ವ ಅಳವಡಿಸಿಕೊಂಡರೆ ಆತ್ಮಹತ್ಯೆಗೆ ಯತ್ನಿಸದೆ ಸಮಾಜದಲ್ಲಿ ಧೈರ್ಯವಾಗಿ ಹಾಗೂ ಆತ್ಮವಿಶ್ವಾಸದಿಂದ ಬದುಕುವ ದಾರಿ ಕಂಡುಕೊಳ್ಳಬಹುದು ಎಂದು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಹೊ.ಶ್ರೀನಿವಾಸಯ್ಯ ತಿಳಿಸಿದರು.

ಜಿಪಂ ಸಿಇಒ ಡಾ.ಬಿ.ಆರ್. ಮಮತಾ ಗಾಂಧಿ ಮಾಹಿತಿ ಪುಸ್ತಕ ಬಿಡುಗಡೆಮಾಡಿದರು. ಗಾಂಧಿ ಪ್ರತಿಷ್ಠಾನ ಅಧ್ಯಕ್ಷ ಡಾ. ವೂಡೇ.ಪಿ.ಕೃಷ್ಣ ಆಶಯ ಮಾತುಗಳನ್ನಾಡಿದರು. ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಎಂ.ಆರ್.ರಂಗಸ್ವಾಮಯ್ಯ, ಬಿ.ಆರ್. ವಿಶ್ವನಾಥ್, ಡಾ.ನಾಗಣ್ಣ ಇದ್ದರು.



ತುಮಕೂರಲ್ಲಿ ಗಾಂಧಿ ನೆನಪಿನಂಗಳ ಕಾರ್ಯಕ್ರಮದಲ್ಲಿ ಜಿಪಂ ಸಿಇಒ ಡಾ.ಬಿ.ಆರ್. ಮಮತಾ ಗಾಂಧಿ ಮಾಹಿತಿ ಪುಸ್ತಕ ಬಿಡುಗಡೆಮಾಡಿದರು. ಜಿಪಂ ಅಧ್ಯಕ್ಷ ವೈ.ಎಚ್.ಹುಚ್ಚಯ್ಯ. ಡಾ.ಹೊ.ಶ್ರೀನಿವಾಸಯ್ಯ, ಡಬ್ಲ್ಯು.ಪಿ.ಕೃಷ್ಣ ಇದ್ದರು.

ಗಾಂಧಿ ಭವನದ ಗೌರವ ಕಾರ್ಯದರ್ಶಿ ಪ್ರೊ.ಜಿ.ಬಿ. ಶಿವರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ರವೀಂದ್ರ ಕಲಾನಿಕೇತನ ಪ್ರಾಚಾರ್ಯ ಬಾಬುರಾವ್ ಸ್ವಾಗತಿಸಿದರು. ಸಿದ್ದಗಂಗಯ್ಯ ಹೊಲತಾಳ್ ಕಾರ್ಯಕ್ರಮ ನಿರೂಪಿಸಿದರು.

ಪಾದಯಾತ್ರೆ: ಇದಕ್ಕೂ ಮುನ್ನ ಗಾಂಧಿ ಉಡುಗೆ ತೊಟ್ಟಿದ್ದ ವೇಮಗಲ್ ಸೋಮಶೇಖರ್ ಅವರ ಜತೆ ಟೌನ್‌ಹಾಲ್‌ನಿಂದ ಬಾಪೂಜಿ ವಿದ್ಯಾಸಂಸ್ಥೆವರೆಗೆ ಹಮ್ಮಿಕೊಂಡಿದ್ದ ಪಾದಯಾತ್ರೆಯಲ್ಲಿ ಗಣ್ಯರು, ಶಾಲಾ ಮಕ್ಕಳು ಪಾಲ್ಗೊಂಡಿದ್ದರು.

> ಗಾಂಧೀಜಿಯನ್ನು ಗ್ರಹಿಸದ ಈ ದೇಶದ ಪ್ರಧಾನಿ ಜನರ ಕೈಗೆ ಪೊರಕೆ ಕೊಟ್ಟಿರುವುದು ಎಷ್ಟು ಸರಿ. ಗಾಂಧಿ ಕೊಂದ ಗೋಡ್ಸೆಗೆ ದೇವಸ್ಥಾನ ಕಟ್ಟುವಂಥ ಈ ದೇಶದಲ್ಲಿ ಎಂತಹ ದಾರಿದ್ರ್ಯ ಬಂದಿದೆ. ಅಹಿಂಸಾ ತತ್ವವನ್ನು ದುರ್ಬಲರಿಗೆ ಹೇಳಬೇಕಾದ್ದಲ್ಲ. ಪೊಲೀಸರಿಗೆ, ಜಮೀನ್ದಾರರಿಗೆ ಹೇಳಬೇಕಿದೆ. ಆಧ್ಯಾತ್ಮಿಕ ಭಾರತಕ್ಕಿಂತ ಭಿನ್ನವಾದ ಶ್ರಮಿಕ ಭಾರತವನ್ನು ಕೊಟ್ಟವರು ಗಾಂಧೀಜಿ.
>
> । ಡಾ.ನಟರಾಜ್ ಹುಳಿಯಾರ್ ಲೇಖಕ, ವಿಮರ್ಶಕ

ಪ್ರಜಾವಾಣಿ ಬುಧವಾರ • ಜುಲೈ 15, 2015 ತುಮಕೂರು

ಆತ್ಮಹತ್ಯೆ ತಡೆಗೆ 'ಗಾಂಧಿ ಮಾರ್ಗ'

ಪ್ರಜಾವಾಣಿ ವಾರ್ತೆ

ತುಮಕೂರು: ವಿದ್ಯಾರ್ಥಿಗಳು ಅಕ್ಷರಾಭ್ಯಾಸಕ್ಕೆ ಸೀಮಿತವಾಗಿದ್ದು, ನೈತಿಕ ಶಿಕ್ಷಣದ ಕೊರತೆಯಿಂದಾಗಿ ಸಣ್ಣ ಪುಟ್ಟ ವಿಚಾರಗಳಿಗೂ ಆತ್ಮಹತ್ಯೆಯ ಹಾದಿ ತುಳಿಯುತ್ತಿದ್ದಾರೆ ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಶ್ರೀನಿವಾಸಯ್ಯ ಹೇಳಿದರು.

ಕರ್ನಾಟಕಕ್ಕೆ ಗಾಂಧಿ ಪ್ರಥಮ ಭೇಟಿ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಮಂಗಳವಾರ ನಗರದ ರವೀಂದ್ರ ಕಲಾನಿಕೇತನದಲ್ಲಿ ಆಯೋಜಿಸಿದ್ದ 'ತುಮಕೂರಿನಲ್ಲಿ ಗಾಂಧಿ ನೆನಪಿನಂಗಳದಲ್ಲಿ' ಕಾರ್ಯಕ್ರಮದಲ್ಲಿ ಗಾಂಧಿ ಅಧ್ಯಯನ ಕೇಂದ್ರ ಉದ್ಘಾಟಿಸಿ ಮಾತನಾಡಿದರು.

ಯುವಜನರಲ್ಲಿ ಸಂಸ್ಕಾರ, ಸನ್ನಡತೆ ಕಣ್ಮರೆಯಾಗುತ್ತಿದೆ. ವಿದ್ಯೆ, ವಿನಯ, ಸದ್ಗುಣಗಳನ್ನು ಕಲಿಸುವ ವಿದ್ಯಾಭ್ಯಾಸ ಸಿಗುತ್ತಿಲ್ಲ. ಹಾಗಾಗಿ ಕ್ಷುಲ್ಲಕ ವಿಚಾರಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುವ ಪ್ರವೃತ್ತಿ ಬೆಳೆಯುತ್ತಿದೆ. ಇದು ನಿಲ್ಲಬೇಕಾದರೆ ಗಾಂಧಿ ತತ್ವ, ಆದರ್ಶಗಳು ದಾರಿ ದೀಪವಾಗಬೇಕು ಎಂದು ತಿಳಿಸಿದರು.

ಧೈರ್ಯವಾಗಿ ಬದುಕುವುದನ್ನು ವಿದ್ಯಾರ್ಥಿಗಳು ಕಲಿಯಬೇಕು. ಸತ್ಯ, ಅಹಿಂಸೆಯ ಗಾಂಧಿ ಮಾರ್ಗದಲ್ಲಿ ನ[illegible] ಉತ್ತಮ ಜೀವನ ರೂಪಿಸಿಕೊ[illegible]ಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಪಂಚಾಯಿತಿ ಅಧ್ಯಕ್ಷ ವೈ.ಎಚ್.ಹುಚ್ಚಯ್ಯ ಮಾತನಾಡಿ, ಗಾಂಧಿ ತತ್ವ ಪಾಲಿಸದಿದ್ದರೆ ದೇಶ ವಿನಾಶ ಹೊಂದಲಿದೆ. ಎಲ್ಲೆಡೆ ಮಾತು, ನಡವಳಿಕೆ ಭಿನ್ನವಾಗಿರುವ ಜನರ ಮಧ್ಯೆ ಕಾಲ ಕಳೆಯುತ್ತಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಪ್ರಜೆಗಳಾಗಿಲ್ಲ. ಉಳ್ಳವರಿಗೆ ಮಾತ್ರ ಪ್ರಜಾಪ್ರಭುತ್ವ ಇದೆ. ರಾಷ್ಟ್ರ ನಿರ್ಮಾಣದಲ್ಲಿ ಬಡವರ ಪಾಲೂ ಇದೆ ಎಂಬುದು ಮರೆತೇ ಹೋಗಿದೆ ಎಂದು ವಿಷಾದಿಸಿದರು.

ದೇಶದ ಸಂಪತ್ತು ಶ್ರೀಮಂತರಿಗೆ ಸೇರಿದೆ. ಬಹಳಷ್ಟು ಕಳ್ಳರು ದೇಶ, ರಾಜ್ಯವಾಳಿದ್ದಾರೆ. ಈಗಲೂ ಆಳ್ವಿಕೆ ನಡೆಸುತ್ತಿದ್ದಾರೆ. ಗಾಂಧಿ ತತ್ವ ಅನುಸರಿಸುವುದರಿಂದ ಮಾತ್ರ ತಾರತಮ್ಯ ದೂರವಾಗಬಹುದು ಎಂದರು.

ಜಿ.ಪಂ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ಬಿ.ಆರ್.ಮಮತಾ 'ತುಮಕೂರಿನಲ್ಲಿ ಗಾಂಧಿ ಮಾಹಿತಿ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

ದೂರದ ದೇಶಗಳಲ್ಲಿ ಗಾಂಧಿ ಬಗ್ಗೆ ಅಭಿಮಾನವಿದೆ. ಆದರೆ ನಮ್ಮ ನೆಲದಲ್ಲಿ ಗಾಂಧಿಯನ್ನು ಕೇವಲ ಓದುವುದಕ್ಕೆ ಸೀಮಿತ ಮಾಡಿಕೊಂಡಿದ್ದೇವೆ. ಅವರು ಬಿಟ್ಟು ಹೋದ ತತ್ವ, ಆದರ್ಶಗಳನ್ನು ಪಾಲಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಎಂ.ಆರ್.ರಂಗಶಾಮಯ್ಯ, ಗಾಂಧಿ ತತ್ವ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಬೆಂಗಳೂರು ವಿಶ್ವವಿದ್ಯಾಲಯ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ನಟರಾಜ್ ಹುಳಿಯಾರ್, ಬಾಪೂಜಿ ವಿದ್ಯಾ ಸಂಸ್ಥೆ ಕಾರ್ಯದರ್ಶಿ ಎಂ.ಬಸವಯ್ಯ, ಚಂದ್ರಮೌಳೇಶ್ವರಸ್ವಾಮಿ, ಸ್ವಾತಂತ್ರ್ಯ ಹೋರಾಟಗಾರ ನರಸಿಂಹಯ್ಯ, ಜಿ.ಬಿ.ಶಿವರಾಜ್ ಉಪಸ್ಥಿತರಿದ್ದರು.



ತುಮಕೂರಿನಲ್ಲಿ ಮಂಗಳವಾರ ಗಾಂಧಿ ನೆನಪಿನಂಗಳದಲ್ಲಿ ಕಾರ್ಯಕ್ರಮದ ಅಂಗವಾಗಿ ಸಾಹಿತಿ ವೇಮಗಲ್ ಸೋಮಶೇಖರ್ ನೇತೃತ್ವದಲ್ಲಿ ಪಾದಯಾತ್ರೆ ನಡೆಯಿತು. ಸ್ವಾತಂತ್ರ್ಯ ಹೋರಾಟಗಾರ ಟಿ.ಆರ್.ರೇವಣ್ಣ, ಜಿ.ಪಂ. ಅಧ್ಯಕ್ಷ ವೈ.ಎಚ್.ಹುಚ್ಚಯ್ಯ, ಡಾ.ಹೊ.ಶ್ರೀನಿವಾಸಯ್ಯ, ಎಂ.ಆರ್.ರಂಗಶಾಮಯ್ಯ, ಜಿ.ಪಂ. ಸಿಇಒ ಡಾ. ಬಿ.ಆರ್.ಮಮತಾ, ಎಂ.ಬಸವಯ್ಯ ಭಾಗವಹಿಸಿದ್ದರು.

ಮುಖ್ಯಾಂಶಗಳು

- ಗಮನ ಸೆಳೆದ ಗಾಂಧಿ ವೇಷಧಾರಿ
- ಗಾಂಧಿ ವಿಚಾರ ಆಲಿಸಲು ವಿದ್ಯಾರ್ಥಿಗಳ ದಂಡು
- ಸ್ವಾತಂತ್ರ್ಯ ಹೋರಾಟಗಾರರ ಸಮಾಗಮ

ಗಾಂಧಿ ನೆನಪಿನ ಅಂಗಳ

ಗಾಂಧಿ ಹುಟ್ಟಿದ ನೆಲದಲ್ಲಿ ಸುಳ್ಳುಹೇಳುವುದಿಲ್ಲ ಎಂದು ನೈಜೀರಿಯಾ ಪ್ರಜೆ ಹೇಳಿದ ಮಾತು ನನ್ನ ಬದುಕಿನ ದಿಕ್ಕು ಬದಲಿಸಿತು.

ಡಾ.ಬಿ.ಆರ್.ಮಮತಾ
ಜಿ.ಪಂ. ಸಿಇಒ

ಗಾಂಧಿ ಪ್ರತಿರೂಪ

ವೇದಿಕೆ ಮೇಲೆ ಕುಳಿತಿದ್ದ ಮಹಾತ್ಮ ಗಾಂಧಿ ಹೋಲುವ ಸಾಹಿತಿ ವೇಮಗಲ್ ಸೋಮಶೇಖರ್ ಎಲ್ಲರ ಕೇಂದ್ರಬಿಂದುವಾಗಿದ್ದರು.

ಮೈಮೇಲೆ ತುಂಡುಬಟ್ಟೆ, ಕಚ್ಚೆ ಧರಿಸಿದ್ದ ಸೋಮಶೇಖರ್ ಅವರು ಗಾಂಧಿ ಪ್ರತಿಮೆ ಪಕ್ಕದಲ್ಲಿ ವಿರಾಜಮಾನರಾಗಿದ್ದರು. ಇದಕ್ಕೂ ಮುನ್ನ ನಗರದ ಟೌನ್‌ಹಾಲ್‌ನಿಂದ ಬಾಪೂಜಿ ಕಾಲೇಜುವರೆಗೆ ಮಕ್ಕಳೊಂದಿಗೆ ಪಾದಯಾತ್ರೆ ನಡೆಸಿದರು.

ಊರುಗೋಲು ಹಿಡಿದು ಹೆಜ್ಜೆ ಹಾಕುತ್ತಿದ್ದಾಗ ಸಾರ್ವಜನಿಕರು ಕುತೂಹಲದಿಂದ ವೀಕ್ಷಿಸಿದರು.

ಸ್ವಸ್ಥ ಸಮಾಜಕ್ಕೆ ಗಾಂಧಿ ತತ್ವ ಅತ್ಯಗತ್ಯ

ತುಮಕೂರಿನಲ್ಲಿ ಗಾಂಧಿ ನೆನಪಿನಂಗಳ ಕಾರ್ಯಕ್ರಮದಲ್ಲಿ ಜಿ.ಪಂ.ಅಧ್ಯಕ್ಷ ಹುಚ್ಚಯ್ಯ ಅಭಿಮತ

ಕನ್ನಡಪ್ರಭ ವಾರ್ತೆ, ತುಮಕೂರು

ಗಾಂಧಿತತ್ವ ಮತ್ತು ವಿಚಾರಧಾರೆಗಳನ್ನು ಸರ್ವಕಾಲಕ್ಕೂ ಜೀವಂತವಾಗಿಟ್ಟಾಗ ಮಾತ್ರ ಸ್ವಾಸ್ಥ್ಯ ಸಮಾಜದ ನಿರ್ಮಾಣ ಸಾಧ್ಯವೆಂದು ಜಿಲ್ಲಾ ಪಂಚಾಯಿತಿ ಅಧ್ಯಕ್ಷ ವೈ.ಎಚ್. ಹುಚ್ಚಯ್ಯ ತಿಳಿಸಿದರು.

ಅವರು ಮಂಗಳವಾರ ನಗರದ ಬಾಪೂಜಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ, ಬಾಪೂಜಿ ಶಿಕ್ಷಣಸಂಸ್ಥೆಹಾಗೂವಾರ್ತಾ ಇಲಾಖೆಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ತುಮಕೂರಿನಲ್ಲಿ ಗಾಂಧಿ ನೆನಪಿನಂಗಳದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿಚಾರ ಧಾರೆ: ಈ ದೇಶದ ಸಂಪತ್ತು ಕೆಲವೇ ವ್ಯಕ್ತಿಗಳ ಕಪಿಮುಷ್ಟಿಯಲ್ಲಿರುವ ಕೆಟ್ಟ ಪರಿಸ್ಥಿತಿಯಲ್ಲಿ ಗಾಂಧಿ ವಿಚಾರಧಾರೆಗಳನ್ನು ಯುವಪೀಳಿಗೆಗೆ ಪರಿಚಯಿಸುವುದು ಅತ್ಯಂತ ಅರ್ಥಪೂರ್ಣ. ಶ್ರೀಮಂತಿಕೆ ಇದ್ದರೆ ಸಾಲದು. ಸತ್ಯ-ಅಹಿಂಸೆ ಮತ್ತು ಮಾನವೀಯತೆಯನ್ನು ಮೈಗೂಡಿಸಿಕೊಂಡಾಗ ಮಾತ್ರ ಗಾಂಧಿ ವಿಚಾರಧಾರೆಗಳನ್ನು ಗೌರವಿಸಿದಂತಾಗುತ್ತದೆ ಎಂದು ಹೇಳಿದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ಹೋ. ಶ್ರೀನಿವಾಸಯ್ಯ ಮಾತನಾಡಿ, ಸಮಾಜದಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆಯಿಂದ ಬದುಕಲು ಗಾಂಧೀ ವಿಚಾರಧಾರೆಗಳು ಅತ್ಯವಶ್ಯ. ಜೀವನದಲ್ಲಿ ಗಾಂಧೀತತ್ವಗಳನ್ನು ಅಳವಡಿಸಿಕೊಂಡರೆ ಆತ್ಮಹತ್ಯೆಯಂತಹ ಕೃತ್ಯಕ್ಕೆ ಕೈಹಾಕದೆ ಸಮಾಜದಲ್ಲಿ ಧೈರ್ಯವಾಗಿ ಹಾಗೂ ಆತ್ಮವಿಶ್ವಾಸದಿಂದ ಬದುಕುವ ದಾರಿ ಕಂಡುಕೊಳ್ಳಲು ಸಾಧ್ಯವಾಗುವುದು. ಯಾರನ್ನೂ ದ್ವೇಷಿಸದೆ ಪ್ರೀತಿ, ವಿಶ್ವಾಸದಿಂದ ಬದುಕಿದಾಗ ಮಾತ್ರ ಗಾಂಧಿ ತತ್ವಗಳನ್ನು ಪಾಲಿಸಿದಂತಾಗುತ್ತದೆ ಎಂದರು.

ಗಾಂಧೀ ಮಾಹಿತಿ ಪುಸ್ತಕ ಬಿಡುಗಡೆ ಮಾಡಿದ ಜಿಲ್ಲಾ ಪಂಚಾಯಿತಿ ಸಿಇಒ ಡಾ. ಬಿ.ಆರ್. ಮಮತ ಮಾತನಾಡಿ, ಸತ್ಯಮಾರ್ಗದಲ್ಲಿ ನಡೆದಾಗ ಧೈರ್ಯ, ಸ್ಥೈರ್ಯ, ಆತ್ಮವಿಶ್ವಾಸ ಬೆಳೆಯಲಿದೆ ಎಂಬುದನ್ನು ಗಾಂಧಿ ವಿಚಾರಧಾರೆಗಳಿಂದ ತಿಳಿಯಬಹುದು. ಗಾಂಧಿ ಜೀವನ ಮತ್ತು ಬದುಕಿನ ಮಾರ್ಗಗಳನ್ನು ವಿದೇಶಿಯರು ಗೌರವದಿಂದ ಸ್ಮರಿಸುತ್ತಾರೆ ಎಂಬುದನ್ನು ಸಚಿತ್ರ ಘಟನೆಯೊಂದಿಗೆ ವಿವರಿಸಿದರು.

ಗಾಂಧಿಭವನದ ಗೌರವ ಕಾರ್ಯದರ್ಶಿ ಪ್ರೊ. ಜಿ.ಬಿ. ಶಿವರಾಜು, ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷ ಎಂ.ಆರ್. ರಂಗಸ್ವಾಮಯ್ಯ, ಕಾರ್ಯದರ್ಶಿ ಚಂದ್ರಮೌಳೇಶ್ವರ ಸ್ವಾಮಿ ಉಪಸ್ಥಿತರಿದ್ದರು.




ತುಮಕೂರಿನಲ್ಲಿ ನಡೆದ ನೆನಪಿನಂಗಳದಲ್ಲಿ ಗಾಂಧಿ ಕಾರ್ಯಕ್ರಮದ ಅಂಗವಾಗಿ ಪಾದಯಾತ್ರೆ ನಡೆಸಿದ ಗಣ್ಯರು.

> ಗಾಂಧೀಜಿಯವರ ವಿಚಾರಧಾರೆಗಳ ಪ್ರಭಾವದಿಂದಾಗಿ ಇಡೀ ವಿಶ್ವವೇ ಭಾರತದ ಕಡೆ [illegible] ನೋಡುವಂತಾಗಿದೆ. ಪ್ರತಿಯೊಬ್ಬರು ಗಾಂಧಿಯನ್ನು ಹೃದಯದಲ್ಲಿಟ್ಟು ಆರಾಧಿಸುವಂತಾಗಬೇಕು. ಸ್ವಚ್ಛ ಪರಿಸರದಲ್ಲಿ ಸರಳವಾಗಿ ಬದುಕುವುದನ್ನು ಗಾಂಧಿ ತೋರಿಸಿಕೊಟ್ಟಿದ್ದಾರೆ. [illegible] ಇದನ್ನು ಪ್ರತಿಯೊಬ್ಬರೂ ಪಾಲಿಸಬೇಕು.
>
> ಡಾ: ವೂಡೇ.ಪಿ.ಕೃಷ್ಣ
>
> ಗಾಂಧೀ ಪ್ರತಿಷ್ಠಾನ ಅಧ್ಯಕ್ಷ [illegible]

ಉದಯವಾಣಿ

ಭಾನುವಾರ | ಜೂನ್ | 28 | 2015



ಬಿಡುಗಡೆ...

ನಗರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ 'ಕನ್ನಡ ವಿಮರ್ಶಾ ಕಥನ' ಗ್ರಂಥವನ್ನು ಡಾ. ವಿಜಯಾ ಬಿಡುಗಡೆ ಮಾಡಿದರು. ಡಾ.ಸಿ.ಎಸ್. ಶರ್ಮಾ, ಬೈರಮಂಗಲ ರಾಮೇಗೌಡ, ವುಡೇ ಪಿ. ಕೃಷ್ಣ ಇತರರು ಇದ್ದರು.

ವಿಜಯ ಕರ್ನಾಟಕ 28 ಜೂನ್ 2015, ಬೆಂಗಳೂರು



ಅನಿಕೇತನ ಕನ್ನಡ ಬಳಗವು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ 'ಕನ್ನಡ ವಿಮರ್ಶಾ ಕಥನ' ಗ್ರಂಥವನ್ನು ಲೇಖಕಿ ಡಾ. ವಿಜಯಾ ಮತ್ತಿತರರು ಲೋಕಾರ್ಪಣೆ ಮಾಡಿದರು.

ಈ ಸಂಜೆ

28-6-2015



ಬೆಂಗಳೂರಿನ ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪದವಿ ಪೂರ್ವ ತರಗತಿಗಳನ್ನು ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಪ್ರೊ.ಎಂ.ಆರ್.ಎನ್.ಮೂರ್ತಿ ಉದ್ಘಾಟಿಸಿದರು. ಹಿಮಾಂಶು ಜ್ಯೋತಿ ಕಲಾಪೀಠದ ಅಧ್ಯಕ್ಷ ಬಿ.ವಿ.ಎ.ರಾವ್, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಕಾರ್ಯದರ್ಶಿ ವೂಡೆ ಪಿ.ಕೃಷ್ಣ, ಧರ್ಮದರ್ಶಿ ಅನಂತ್‌ರಾಮ್ ಮತ್ತಿತರರಿದ್ದರು.

ಕೃತಿ ಲೋಕಾರ್ಪಣೆ...



ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಮ್ಮಿಕೊಂಡಿದ್ದ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅವರ ಕನ್ನಡ ವಿಮರ್ಶಾ ಕಥನ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಲೇಖಕಿ ಡಾ.ವಿಜಯಾ, ವಿಮರ್ಶಕ ಪ್ರೊ.ಬೈರಮಂಗಲ ರಾಮೇಗೌಡ, ಡಾ.ಎಸ್.ಪಿ. ಶರ್ಮಾ ಮತ್ತಿತರರು ಪಾಲ್ಗೊಂಡಿದ್ದರು.

ಬದುಕನ್ನು ಪ್ರೀತಿಸಲು ರಾಮಾಯಣ ಕಾರಣ

ಬೆಂಗಳೂರು: ರಾಮಾಯಣವು ಬದುಕನ್ನು ಪ್ರೀತಿಸುವುದನ್ನು ಕಲಿಸುತ್ತದೆ ಎಂದು ಸಾಹಿತಿ ಪ್ರೊ.ಮಲ್ಲೇಪುರ ಜಿ.ವೆಂಕಟೇಶ್ ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅನಿಕೇತನ ಕನ್ನಡ ಬಳಗ, ಸಿವಿಜಿ ಬುಕ್ಸ್ ಹಾಗೂ ಕಲಬುರ್ಗಿಯ ಪ್ರೊ.ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅವರದ್ದೇ (ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್) ಕನ್ನಡ ವಿಮರ್ಶಾ ಕಥನ ಕೃತಿ ಲೋಕಾರ್ಪಣೆಯಲ್ಲಿ ಭಾಗವಹಿಸಿ ಮಾತನಾಡಿದರು.

ರಾಮಾಯಣ ಬದುಕಿನ ಪಾಠಗಳನ್ನು ಹೇಳಿಕೊಡುತ್ತದೆ. ಬದುಕನ್ನು ಹೇಗೆ ಪ್ರೀತಿಸುವುದು ಎಂಬುದನ್ನು ತಿಳಿಸುತ್ತದೆ. ಮನೆಯಲ್ಲಿನ ನಡವಳಿಕೆ, ಗುರು-ಶಿಷ್ಯನೊಂದಿಗಿನ ನಡವಳಿಕೆ, ಸಹೋದರ ಸಹೋದರಿಯೊಂದಿಗೆ ನಡವಳಿಕೆ ಹೀಗೆ ಪ್ರತಿಯೊಂದು ರಾಮಾಯಣದ ನೀತಿ ಪಾಠಗಳು ಕೂಡ ಬದುಕಿನ ಪಾಠಗಳನ್ನು ಹೇಳಿಕೊಡುತ್ತದೆ. ಪ್ರೀತಿಯ ಆರ್ದ್ರತೆಯನ್ನು ತಿಳಿಸುತ್ತದೆ ಎಂದು ಪ್ರತಿಪಾದಿಸಿದರು.

ವಿಮರ್ಶಕ ಪ್ರೊ.ಬೈರಮಂಗಲ ರಾಮೇಗೌಡ ಮಾತನಾಡಿ, ವಿಮರ್ಶೆಯಲ್ಲಿ ಕೂಡ ಅತ್ಯಂತ ಎಚ್ಚರಿಕೆಯಿಂದ ವಿಮರ್ಶಾ ವಿಧಾನ ಅಳವಡಿಸಿಕೊಂಡಿದ್ದಾರೆ. ಪೌರ್ವಾತ್ಯ ಕಾವ್ಯ ಮೀಮಾಂಸೆ ಮತ್ತು ಪಾಶ್ಚಿಮಾತ್ಯ ಕಾವ್ಯ ಮೀಮಾಂಸೆ ಎಂಬ ಎರಡು ಪ್ರಕಾರಗಳಿವೆ. ಆದರೆ ಇವೆರಡರ ಹೊರತಾಗಿ ನಮ್ಮದೆ ಆದ ಕಾವ್ಯ ಮೀಮಾಂಸೆಯ ಅಗತ್ಯವಿದೆ ಎಂದು ಈ ಕೃತಿಯಲ್ಲಿನ ಲೇಖನಗಳು ತಿಳಿಸುತ್ತವೆ. ಕೃತಿಯನ್ನು ಸಾಹಿತ್ಯ ಮಾನದಂಡದಿಂದ ವಿಮರ್ಶಿಸಬೇಕೆ ಅಥವಾ ಸಾಂಸ್ಕೃತಿಕ ಹಿನ್ನೆಯಲ್ಲಿ ವಿಮರ್ಶಿಸಬೇಕೆ ಎಂಬುದನ್ನು ಕನ್ನಡ ವಿಮರ್ಶಾ ಕಥನ ಕೃತಿ ತಿಳಿಸುತ್ತದೆ ಎಂದು ಹೇಳಿದರು. ಕನ್ನಡಕ್ಕೆ ತನ್ನದೇ ಆದ ವಿಮರ್ಶಾ ವಿಧಾನ ಬೇಕೆಂದು ಈ ಕೃತಿ ಪ್ರತಿಪಾದಿಸುತ್ತದೆ. ಈ ಕೃತಿಯ ಮೂಲಕ ತಮ್ಮದೇ ಒಂದು ವಿಮರ್ಶಾ ವಿಧಾನವನ್ನು ಗುರುತಿಸಬಹುದು. ಈ ಕೃತಿಯಲ್ಲಿ ಪಂಪನ ಆದಿ ಪುರಾಣದಿಂದ ಮೂಡ್ನಾಕೂಡು ಚಿನ್ನಸ್ವಾಮಿ, ಎಚ್.ಎಸ್.ಶಿವಪ್ರಕಾಶ್ ಅವರ ಕಾವ್ಯಗಳವರೆಗೂ ವಿಮರ್ಶೆ ಮಾಡಿದ್ದಾರೆ ಎಂದು ನುಡಿದರು.

ಲೇಖಕಿ ಡಾ.ವಿಜಯಾ ಮಾತನಾಡಿ, ಪ್ರೊ.ಮಲ್ಲೇಪುರ ಜಿ.ವೆಂಕಟೇಶ್ ಅವರಲ್ಲಿರುವ ವಿನಯವಂತಿಕೆಯೇ ಅವರನ್ನು ಈ ಮಟ್ಟಕ್ಕೆ ಬೆಳೆಸಿದೆ. ಅವರ ವಿಮರ್ಶಾ ಶೈಲಿ ವಿಶೇಷವಾಗಿದೆ. ರೂಪಕಗಳ ಮೂಲಕ ವಿಮರ್ಶೆ ಮಾಡುವ ಅವರ ಗುಣ ವಿಶಿಷ್ಟವಾಗಿದೆ. ಇದರ ಮೂಲಕ ಹಲವು ವಿಶೇಷತೆಗಳನ್ನು ತಿಳಿಸುತ್ತಾರೆ ಎಂದು ಹೇಳಿದರು.

ಡಾ.ಎಸ್.ಪಿ. ಶರ್ಮಾ, ಶೇಷಾದ್ರಿಪುರ ಶಿಕ್ಷಣ ದತ್ತಿ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಶುಕ್ರವಾರ
26 ಜೂನ್ 2015



ಶೇಷಾದ್ರಿಪುರಂ ಪಿಯು ಕಾಲೇಜಿನ ಪ್ರಥಮ ಪಿಯುಸಿ ತರಗತಿಗಳ ಉದ್ಘಾಟನಾ ಸಮಾರಂಭದಲ್ಲಿ ಐಐಎಸ್‌ಸಿ ಪ್ರಾಧ್ಯಾಪಕ ಡಾ. ಎಂ.ಆರ್.ಎನ್. ಮೂರ್ತಿ, ಹಿಮಾಂಶು ಜ್ಯೋತಿ ಕಲಾಪೀಠದ ಅಧ್ಯಕ್ಷ ಡಾ. ಬಿ.ವಿ.ಎ. ರಾವ್, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಎನ್. ಆರ್. ಪಂಡಿತಾರಾಧ್ಯ, ಡಾ. ವೂಡೇ ಪಿ. ಕೃಷ್ಣ, ಬಿ.ಎ. ಅನಂತರಾಮ್, ಕೃಷ್ಣಸ್ವಾಮಿ, ಡಾ. ಎಂ. ಪ್ರಕಾಶ್, ಸುರೇಶ್ ಅಂತೋನಿ, ಪ್ರೊ. ಜಿ.ಕೆ. ಮಂಜುನಾಥ್ ಇತರರಿದ್ದರು.

ಪ್ರಜಾವಾಣಿ ಸೋಮವಾರ © ಜೂನ್ 22, 2015

ಪರಂಪರೆ ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ: ಪಿ. ಕೃಷ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಪರಂಪರೆಯನ್ನು ಉಳಿಸಿಕೊಂಡು, ಅದನ್ನು ಭವಿಷ್ಯದ ಪೀಳಿಗೆಗೆ ಕೊಂಡೊಯ್ಯುವುದು ನಮ್ಮ ಜವಾಬ್ದಾರಿ' ಎಂದು ಶೇಷಾದ್ರಿಪುರ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಾ.ವೂಡೆ ಪಿ. ಕೃಷ್ಣ ಹೇಳಿದರು.

ಪೂರ್ಣಚಂದ್ರ ತೇಜಸ್ವಿ ಪ್ರಕಾಶನ ಭಾನುವಾರ ನಗರದಲ್ಲಿ ಆಯೋಜಿಸಿದ್ದ ಡಾ.ಎನ್.ನಂದೀಶ್ವರ ಅವರ 'ಕುಂಚಿಟಿಗ ಶೆಟ್ಟೇನವರ ಮನೆದೇವರುಗಳು' ಹಾಗೂ 'ಇತಿಹಾಸದ ಜೊತೆಜೊತೆಗೆ' ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಬದಲಾದ ಕಾಲಘಟ್ಟದಲ್ಲಿ ಜನ ತಮ್ಮ ಪರಂಪರೆಯನ್ನು ಮರೆಯುತ್ತಿದ್ದಾರೆ. ಇದು ಹೀಗೆ ಮುಂದುವರಿದರೆ, ಮುಂದೊಂದು ದಿನ ನಮ್ಮ ಮಕ್ಕಳಿಗೆ ಅವರು ಕುಂಚಿಟಿಗ ಸಮುದಾಯವರು ಎಂಬುದು ಮಾತ್ರ ತಿಳಿದಿರುತ್ತದೆ. ಸಮುದಾಯದ ಪರಂಪರೆ ತಿಳಿದಿರುವುದಿಲ್ಲ. ಹೀಗಾಗಿ ನಮ್ಮ ಮಕ್ಕಳಿಗೆ ನಮ್ಮ ಪರಂಪರೆಯ ಕುರಿತು ನಿಖರವಾದ ಮಾಹಿತಿ ರವಾನಿಸಬೇಕು' ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಸಿ.ಚಿಕ್ಕಣ್ಣ ಮಾತನಾಡಿ, 'ಇತ್ತೀಚಿನ ದಿನಗಳಲ್ಲಿ ರೈತರು ಬೆಳೆಯುತ್ತಿರುವ ಬೆಳೆಗಳ ಪ್ರಮಾಣ ಕಡಿಮೆಯಾಗುತ್ತಿದ್ದು, ಇದು ಹೀಗೆ ಮುಂದುವರಿದರೆ, ಮುಂದೊಂದು ದಿನ ರೈತರಿಗೆ ಊಟಕ್ಕಿಲ್ಲದ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಆಗ ಸರ್ಕಾರ ಯಾವುದೇ ಅನ್ನಭಾಗ್ಯವನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರ ರೈತರ ನೆರವಿಗೆ ಮುಂದಾಗಬೇಕು' ಎಂದು ಹೇಳಿದರು.

'ಕುಂಚಿಟಿಗ ಸಮುದಾಯದ ಕುಲಕಸುಬು ವ್ಯವಸಾಯವಾಗಿದ್ದು, ಅದನ್ನು ಉಳಿಸಿಕೊಂಡು ಹೋಗಬೇಕು. ಇಲ್ಲವಾದಲ್ಲಿ ನಮ್ಮ ಮಾನವನ್ನು ನಾವೇ ಕಳೆದುಕೊಂಡಂತೆ' ಎಂದರು.

'ರಾಜ್ಯದಲ್ಲಿ ಕುಂಚಿಟಿಗರಲ್ಲಿ 43 ಗೋತ್ರಗಳು ಇದ್ದು, ಎಲ್ಲವುಗಳ ಮೇಲೆ ಸಂಶೋಧನೆ ನಡೆಯಬೇಕು. ಇದಕ್ಕಾಗಿ ಸಮುದಾಯದ ಪ್ರತಿಷ್ಠಾನವನ್ನು ಸ್ಥಾಪಿಸಲು ₹25 ಲಕ್ಷ ಅಗತ್ಯವಿದ್ದು, ಸಮುದಾಯದ ಪ್ರತಿಯೊಬ್ಬರು ನೆರವು ನೀಡಬೇಕು' ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಚಿವ ಟಿ.ಬಿ. ಜಯಚಂದ್ರ ಅವರ ಪತ್ನಿ ಜಿ.ಎಚ್. ನಿರ್ಮಲ ಅವರು ಪುಸ್ತಕಗಳನ್ನು ಬಿಡುಗಡೆ ಮಾಡಿದರು.

ಮುಖ್ಯಾಂಶಗಳು

- ನಂದೀಶ್ವರ ಅವರ ಎರಡು ಪುಸ್ತಕಗಳ ಬಿಡುಗಡೆ
- ಕುಂಚಿಟಿಗರ 43 ಗೋತ್ರಗಳ ಮೇಲೆ ಸಂಶೋಧನೆ ನಡೆಯಬೇಕು
- ರೈತರಿಗೆ ಸರ್ಕಾರದ ನೆರವು ಅಗತ್ಯ

ಆರ್ಟ್ ಆಫ್ ಗಿವಿಂಗ್ . . .



ಕಳಿಂಗ ವಿದ್ಯಾ ಸಂಸ್ಥೆಯ ಸೇವಾಭಾವ ಕಾರ್ಯಕ್ರಮವಾದ ಆರ್ಟ್ ಆಫ್ ಗಿವಿಂಗ್‌ನ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಚಿತ್ರನಟ, ನಿರ್ಮಾಪಕ ರಾಘವೇಂದ್ರ ರಾಜಕುಮಾರ್, ಡಾ.ವೂಡೆ ಪಿ.ಕೃಷ್ಣ, ಶಾಸಕ ಬಿ.ಎನ್. ವಿಜಯಕುಮಾರ್, ಮಣಿಪಾಲ್ ಫೌಂಡೇಶನ್ ಸಿಇಒ ಪಿ.ಬಾಲಚಂದ್ರನ್ ವಾರಿಯರ್, ಐಪಿಎಸ್ ಅಧಿಕಾರಿ ಡಾ.ಸುಶಾಂತ್ ಮಹಾಪಾತ್ರ ಮತ್ತಿತರರು.

ಆರ್ಟ್ ಆಫ್ ಗಿವಿಂಗ್ ವಾರ್ಷಿಕೋತ್ಸವದಲ್ಲಿ ರಾಘವೇಂದ್ರ ರಾಜಕುಮಾರ್

5 ಲಕ್ಷ ಬೇವಿನ ಗಿಡಗಳ ಪೋಷಣೆ ಗುರಿ

ಬೆಂಗಳೂರು: ಸಮಾಜದಲ್ಲಿ ಶಾಶ್ವತವಾಗಿ ಉಳಿಯುವಂತಹ ಕೆಲಸ ಮಾಡುವ ನಿಟ್ಟಿನಲ್ಲಿ ಮುಂದಿನ ವರ್ಷದ ಅಪ್ಪಾಜಿಯ ಹುಟ್ಟುಹಬ್ಬದ ವೇಳೆಗೆ ಸುಮಾರು 5 ಲಕ್ಷ ಬೇವಿನ ಗಿಡಗಳನ್ನು ನೆಟ್ಟು ಪೋಷಿಸುವ ಗುರಿ ಹೊಂದಲಾಗಿದೆ ಎಂದು ಚಿತ್ರನಟ, ನಿರ್ಮಾಪಕ ರಾಘವೇಂದ್ರ ರಾಜಕುಮಾರ್ ತಿಳಿಸಿದರು.

ಶೇಷಾದ್ರಿಪುರ ಕಾಲೇಜಿನಲ್ಲಿ ಏರ್ಪಡಿಸಿದ್ದ ಕಳಿಂಗ ವಿದ್ಯಾ ಸಂಸ್ಥೆಯ ಸೇವಾಭಾವ ಕಾರ್ಯಕ್ರಮವಾದ ಆರ್ಟ್ ಆಫ್ ಗಿವಿಂಗ್‌ನ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು. ಸಮಾಜಕ್ಕೆ ಏನೂ ಸೇವಾ ಕಾರ್ಯ ಮಾಡಿಲ್ಲ ಎಂಬ ಆರೋಪ ನಮ್ಮ ಕುಟುಂಬದ ಮೇಲಿದೆ. ಹೌದು, ನಮ್ಮಲ್ಲಿ ಹಣ, ಅಂತಸ್ತು, ಜನರ ಅಭಿಮಾನ ಎಲ್ಲವೂ ಇದೆ. ಆದರೆ, ಸಮಾಜಕ್ಕೆ ಹೇಳಿಕೊಳ್ಳುವಂಥ ಅಥವಾ ಶಾಶ್ವತವಾಗಿ ಉಳಿಯುವಂಥ ಯಾವುದೇ ಕೆಲಸ ಮಾಡಿಲ್ಲ ಎಂಬ ನೋವೂ ಇದೆ ಎಂದು ಬೇಸರ ವ್ಯಕ್ತಪಡಿಸಿದರು.

ಇನ್ನು ಮುಂದಾದರೂ ಜನಮಾನಸದಲ್ಲಿ ಉಳಿಯುವಂಥ ಹಾಗೂ ಸಮಾಜಕ್ಕೆ ಅನುಕೂಲವಾಗುವಂಥ ಸೇವಾ ಕಾರ್ಯಗಳನ್ನು ಮಾಡಲು ನಿರ್ಧರಿಸಲಾಗಿದೆ ಎಂದರು. ಅಷ್ಟೇ ಅಲ್ಲದೆ ಕಳಿಂಗ ವಿದ್ಯಾಸಂಸ್ಥೆ ಮಾದರಿಯಲ್ಲಿ ಎಲ್ಲ ವರ್ಗದ ಬಡ ಮಕ್ಕಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆ, ಆರೋಗ್ಯ ಸಂಸ್ಥೆಗಳನ್ನು ಹುಟ್ಟುಹಾಕುವ ಕುರಿತಾಗಿದೆ ಎಂದು ಹೇಳಿದರು.

ದಿನ ಬದಲಾದಂತೆ ಮನುಷ್ಯನೂ ಬದಲಾಗುತ್ತಿದ್ದಾನೆ. ನಮ್ಮಿಂದ ಸಮಾಜಕ್ಕೆ ಕಿಂಚಿತ್ತೂ ಕೊಡುಗೆ ಇಲ್ಲ, ಬದಲಾಗಿ ನಿಸರ್ಗದ ಎಲ್ಲ ಸಂಪತ್ತನ್ನು ಬಳಸಿಕೊಳ್ಳುವ ಜತೆಗೆ ಅದನ್ನು ಸಂಪೂರ್ಣ ಹಾಳು ಮಾಡುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಸ್ವಾರ್ಥ ತುಂಬಿದ ಮನಸ್ಸುಗಳೇ ಹೆಚ್ಚಿದ್ದು, ಸಮಾಜ ಸೇವೆ ಹೆಸರಲ್ಲಿ ತೋರ್ಪಡಿಕೆಯ ಕಾರ್ಯಗಳು ನಡೆಯುತ್ತಿವೆ. ಸಮಾಜದಲ್ಲಿ ಬದುಕುತ್ತಿರುವ ಪ್ರತಿಯೊಬ್ಬರೂ ನಿಸ್ವಾರ್ಥದಿಂದ, ತ್ಯಾಗಭಾವನೆಯಿಂದ ಹೃದಯ ಸಮರ್ಪಣಾ ಕಾರ್ಯಗಳನ್ನು ಮಾಡಬೇಕು. ಈ ನಿಟ್ಟಿನಲ್ಲಿ ಕಳಿಂಗ ವಿದ್ಯಾ ಸಂಸ್ಥೆ ಸಮಾಜ ಸೇವಾ ಕಾರ್ಯದಲ್ಲಿ ತೊಡಗಿರುವುದು ಶ್ಲಾಘನೀಯ ಎಂದರು.

ಶೇಷಾದ್ರಿಪುರ ವಿದ್ಯಾ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ, ಶಾಸಕ ಬಿ.ಎನ್. ವಿಜಯಕುಮಾರ್, ಮಣಿಪಾಲ್ ಫೌಂಡೇಶನ್ ಸಿಇಒ ಪಿ.ಬಾಲಚಂದ್ರನ್ ವಾರಿಯರ್, ಐಪಿಎಸ್ ಅಧಿಕಾರಿ ಡಾ.ಸುಶಾಂತ್ ಮಹಾಪಾತ್ರ ಅವರು ಕಳಿಂಗ ವಿದ್ಯಾಸಂಸ್ಥೆಯ ಕಾರ್ಯವೈಖರಿ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಬಡ ಮಕ್ಕಳಿಗೆ ಕಲಿಕಾ ಸಾಮಗ್ರಿ ಮತ್ತು ವಿಶಿಷ್ಟಚೇತನರಿಗೆ ಅಗತ್ಯ ಸಾಮಗ್ರಿ ವಿತರಿಸಲಾಯಿತು.

ಬೆಂಗಳೂರು ಉದಯವಾಣಿ
ಸೋಮವಾರ, ಮೇ 18, 2015

ನಾಯಕನ ಜನ ದನಿ

ವರ್ಷದೊಳಗೆ 5 ಲಕ್ಷ ಬೇವಿನ ಸಸಿ ನೆಡ್ತೀವಿ

■ 'ಆರ್ಟ್ ಆಫ್ ಗಿವಿಂಗ್' ಕಾರ್ಯಕ್ರಮದಲ್ಲಿ ನಟ ರಾಘವೇಂದ್ರ ರಾಜಕುಮಾರ್ ಘೋಷಣೆ

ಬೆಂಗಳೂರು: ಮುಂದಿನ ವರ್ಷದ ಅಪ್ಪಾಜಿ (ಡಾ.ರಾಜ್‌ಕುಮಾರ್) ಹುಟ್ಟುಹಬ್ಬದ ವೇಳೆಗೆ ಐದು ಲಕ್ಷ ಬೇವಿನ ಸಸಿಗಳನ್ನು ನೆಟ್ಟು ಪೋಷಿಸುವ ಗುರಿ ಹೊಂದಲಾಗಿದೆ ಎಂದು ನಟ, ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್ ಹೇಳಿದ್ದಾರೆ.

ನಗರದ ಶೇಷಾದ್ರಿಪುರ ಕಾಲೇಜಿನಲ್ಲಿ ಭಾನುವಾರ 'ಆರ್ಟ್ ಆಫ್ ಗಿವಿಂಗ್'ನ ಎರಡನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜನಮಾನಸದಲ್ಲಿ ಉಳಿಯುವಂತಹ ಮತ್ತು ಸಮಾಜಕ್ಕೆ ಅನುಕೂಲವಾಗುವಂತಹ ಸೇವಾ ಕಾರ್ಯಗಳನ್ನು ಮಾಡಲು ಉದ್ದೇಶಿಸಲಾಗಿದೆ. ಈಗಾಗಲೇ ಬೇವಿನ ಸಸಿಗಳನ್ನು ನೆಡುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಮುಂದಿನ ವರ್ಷದ ಅಪ್ಪಾಜಿಯ ಹುಟ್ಟುಹಬ್ಬದ ವೇಳೆಗೆ ಐದು ಲಕ್ಷ ಗಿಡಗಳನ್ನು ನೆಡುವ ಉದ್ದೇಶ ಹೊಂದಲಾಗಿದ್ದು, ಪ್ರತಿಯೊಬ್ಬರು ಕೈ ಜೋಡಿಸಬೇಕು ಎಂದು ಕರೆ ನೀಡಿದರು.

ಸ್ವಾರ್ಥ ತುಂಬಿದ ಮನಸ್ಸುಗಳೇ ಈಗ ಹೆಚ್ಚು: ದಿನ ಬದಲಾದಂತೆ ಮನುಷ್ಯನೂ ಬದಲಾಗುತ್ತಿದ್ದಾನೆ. ನಮ್ಮಿಂದ ಸಮಾಜಕ್ಕೆ ಕಿಂಚಿತ್ತೂ ಕೊಡುಗೆ ಇಲ್ಲ. ಬದಲಾಗಿ ನಿಸರ್ಗದ ಎಲ್ಲಾ ಸಂಪತ್ತನ್ನು ಬಳಸಿಕೊಳ್ಳುವ ಜತೆಗೆ ಅದನ್ನು ಸಂಪೂರ್ಣ ಹಾಳು ಮಾಡುತ್ತಿದ್ದೇವೆ ಎಂದರು. ಮುಂದಿನ ಪೀಳಿಗೆಗೆ ಏನನ್ನೂ ಉಳಿಸದೆ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದೇವೆ. ಸ್ವಾರ್ಥ ತುಂಬಿದ ಮನಸ್ಸುಗಳೇ ಹೆಚ್ಚಿದ್ದು, ಸಮಾಜ ಸೇವೆ ಹೆಸರಲ್ಲಿ ತೋರ್ಪಡಿಕೆಯ ಕಾರ್ಯ ನಡೆಯುತ್ತಿವೆ. ಸಮಾಜದಲ್ಲಿ ಬದುಕುತ್ತಿರುವ ಪ್ರತಿಯೊಬ್ಬರೂ ನಿಸ್ವಾರ್ಥದಿಂದ, ತ್ಯಾಗ ಭಾವನೆಯಿಂದ ಹೃದಯ ಸಮರ್ಪಣಾ ಕಾರ್ಯಗಳನ್ನು ಮಾಡಬೇಕು. ಈ ನಿಟ್ಟಿನಲ್ಲಿ ಕಳಿಂಗ ವಿದ್ಯಾಸಂಸ್ಥೆ ಸಮಾಜ ಸೇವಾ ಕಾರ್ಯದಲ್ಲಿ ತೊಡಗಿರುವುದನ್ನು ಶ್ಲಾಘಿಸಿದರು.

ಶಾಸಕ ಬಿ.ಎನ್.ವಿಜಯಕುಮಾರ್ ಮಾತನಾಡಿ, ಜಗತ್ತಿನಲ್ಲಿ ಎಲ್ಲರೂ ಭಿಕ್ಷುಕರೆ. ನಿಸ್ವಾರ್ಥ, ತ್ಯಾಗ, ಹೃದಯ ಸಮರ್ಪಣೆ ಗುಣಗಳಿಂದ ಮಾತ್ರ ಶ್ರೀಮಂತಿಕೆಯ ಮೌಲ್ಯ ವೃದ್ಧಿಸಲಿದೆ. ಆರ್ಟ್ ಆಫ್ ಗಿವಿಂಗ್ ಎಂಬ ಭಾವನಾತ್ಮಕ ಕಾರ್ಯಕ್ರಮ ನಡೆಸುತ್ತಿರುವುದು ಅರ್ಥಪೂರ್ಣವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮದ ಅಧ್ಯಕ್ಷ ಹಾಗೂ ಡಿಜಿಪಿ ಸುಶಾಂತ್ ಮಹಾಪಾತ್ರ, ಮಣಿಪಾಲ್ ಫೌಂಡೇಷನ್ ಕಾರ್ಯನಿರ್ವಾಹಕ ಅಧಿಕಾರಿ ಪಿ.ಬಾಲಚಂದ್ರನ್ ವಾರಿಯರ್, ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಡಾ.ವೂಡೆ.ಪಿ.ಕೃಷ್ಣ ಇತರರು ಭಾಗವಹಿಸಿದ್ದರು. ಇದೇ ವೇಳೆ ಬಡಮಕ್ಕಳಿಗೆ ಕಲಿಕಾ ಸಾಮಗ್ರಿ ಮತ್ತು ಅಂಗವಿಕಲರಿಗೆ ಅಗತ್ಯ ಸಾಮಗ್ರಿಗಳನ್ನು ವಿತರಿಸಲಾಯಿತು.



ನಗರದ ಶೇಷಾದ್ರಿಪುರ ಕಾಲೇಜಿನಲ್ಲಿ ಭಾನುವಾರ 'ಆರ್ಟ್ ಆಫ್ ಗಿವಿಂಗ್'ನ ಎರಡನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಬಡ ಮಕ್ಕಳಿಗೆ ಕಲಿಕಾ ಸಾಮಗ್ರಿ ಮತ್ತು ಅಂಗವಿಕಲರಿಗೆ ಅಗತ್ಯ ಸಾಮಗ್ರಿಗಳನ್ನು ವಿತರಿಸಲಾಯಿತು. ನಟ, ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್, ಶಾಸಕ ಬಿ.ಎನ್.ವಿಜಯಕುಮಾರ್, ಡಿಜಿಪಿ ಸುಶಾಂತ್ ಮಹಾಪಾತ್ರ ಇದ್ದರು.

ಸಮಾಜಕ್ಕೆ ಕೊಡುಗೆ ನೀಡಬೇಕಿದೆ, ಸಲಹೆ ಕೊಡಿ...



ಡಾ.ರಾಜ್‌ಕುಮಾರ್ ಕುಟುಂಬ ಸಮಾಜಕ್ಕೆ ಯಾವುದೇ ಸೇವಾ ಕಾರ್ಯ ಮಾಡಿಲ್ಲ ಎಂಬ ಆರೋಪ ಚಿತ್ರರಂಗದ ಒಳಗೂ ಮತ್ತು ಹೊರಗೂ ಇದೆ. ಇದು ಸತ್ಯವೂ ಹೌದು. ನಮ್ಮಲ್ಲಿ ಹಣ, ಆಸ್ತಿ, ಜನರ ಅಭಿಮಾನ ಎಲ್ಲವೂ ಇದೆ. ಆದರೆ, ಸಮಾಜಕ್ಕೆ ಹೇಳಿಕೊಳ್ಳುವಂತಹ ಅಥವಾ ಶಾಶ್ವತವಾಗಿ ಉಳಿಯುವಂತಹ ಯಾವುದೇ ಕೆಲಸ ಮಾಡಿಲ್ಲ ಎಂಬ ನೋವು ಇದೆ ಎಂದು ಇದೇ ವೇಳೆ ರಾಘವೇಂದ್ರ ರಾಜಕುಮಾರ್ ಬೇಸರ ವ್ಯಕ್ತಪಡಿಸಿದರು. ನಮಗೆ ಸಮಾಜಕ್ಕೆ ಏನಾದರೂ ಕೊಡುಗೆ ನೀಡುವ ಹಂಬಲ ಇದೆ. ಆದರೆ, ಏನು ನೀಡಬೇಕು ಎಂಬುದು ಗೊತ್ತಾಗುತ್ತಿಲ್ಲ. ದಯವಿಟ್ಟು ಎಲ್ಲರು ಸಲಹೆ-ಸಹಕಾರ ನೀಡಬೇಕು. ಎಲ್ಲಾ ವರ್ಗದ ಬಡ ಮಕ್ಕಳಿಗೆ ಪ್ರಯೋಜನವಾಗುವಂಥ ಕೆಲಸ ಮಾಡಲಾಗುವುದು ಎಂದರು.

ವಿಜಯ ಕರ್ನಾಟಕ VK
ಸೋಮವಾರ, 18 ಮೇ 2015

'ರಾಜ್ ಹೆಸರಿನಲ್ಲಿ 5 ಲಕ್ಷ ಬೇವಿನ ಸಸಿ'

■ ವಿಕ ಸುದ್ದಿಲೋಕ ಬೆಂಗಳೂರು

ನಟ ರಾಜ್‌ಕುಮಾರ್ ಹೆಸರಿನಲ್ಲಿ ಐದು ಲಕ್ಷ ಬೇವಿನ ಸಸಿಗಳನ್ನು ನೆಡಲು ರಾಜ್ ಕುಟುಂಬ ತೀರ್ಮಾನಿಸಿ, ಇದಕ್ಕೊಂದು ಯೋಜನೆ ರೂಪಿಸಿದೆ.

"ಬೇವಿನ ಮರಗಳು ಆಮ್ಲಜನಕ ಉತ್ಪತ್ತಿ ಮಾಡುತ್ತವೆ. ಶುದ್ಧ ಗಾಳಿಯ ಅಭಾವದ ಹಿನ್ನೆಲೆಯಲ್ಲಿ ಬೇವಿನ ಸಸಿಗಳನ್ನು ನೆಟ್ಟಲ್ಲಿ ಕಲುಷಿತಗೊಂಡಿರುವ ಪರಿಸರವನ್ನು ಸ್ವಲ್ಪಮಟ್ಟಿಗಾದರೂ ಸರಿಪಡಿಸಲು ಸಾಧ್ಯವಿದೆ. ಅರಣ್ಯ ಇಲಾಖೆಯಿಂದ ಸಸಿಗಳನ್ನು ಪಡೆದು ಈಗಾಗಲೆ ಸದಾಶಿವನಗರ ಸುತ್ತಲಿನ ಪ್ರದೇಶದಲ್ಲಿ ನೆಡಲಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯದೆಲ್ಲೆಡೆ ವಿತರಣೆ ಆಗಲಿದೆ," ಎಂದು ನಟ ಹಾಗೂ ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್ ಹೇಳಿದರು.

ನಗರದ ಶೇಷಾದ್ರಿಪುರಂ ಕಾಲೇಜ್‌ನಲ್ಲಿ ನಡೆದ ಆರ್ಟ್ ಆಫ್ ಗಿವಿಂಗ್ (ಸಮರ್ಪಣಾ ಕಲೆ) ಸಂಸ್ಥೆಯ 2ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿ "ಪರಿಸರ ಸಂರಕ್ಷಣೆ ಅಪ್ಪಾಜಿಯ ಕನಸಾಗಿತ್ತು. ಮುಂದಿನ ವರ್ಷದ ಜನ್ಮದಿನದ ವೇಳೆಗೆ ಮತ್ತಷ್ಟು ಸಸಿಗಳನ್ನು ನೆಟ್ಟು ಅಪ್ಪಾಜಿಯ ಪರಿಸರ ಸಂರಕ್ಷಣೆಯ ಕನಸು ಸಾಕಾರಗೊಳಿಸಲಾಗುವುದು," ಎಂದರು.

> ಶಿಕ್ಷಣದಿಂದ ಮಾತ್ರ ಜೀವನದ ದಿಕ್ಕು ಬದಲಿಸಲು ಸಾಧ್ಯ. ಖಾಸಗಿ ಸಂಸ್ಥೆಯೊಂದು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದರೆ ಅದನ್ನು ಸ್ವಾಗತಿಸಬೇಕೇ ಹೊರತು ಕಾಲೆಳೆಯಬಾರದು. ಪ್ರಾಮಾಣಿಕವಾಗಿ ಸಮಾಜಸೇವೆ ಮಾಡುವವರಿಗೆ ಸಾರ್ವಜನಿಕರ ಸ್ಪಂದನೆ ಅಗತ್ಯ.
>
> **- ಸುಶಾಂತ್ ಮಹಾಪಾತ್ರ, ಡಿಜಿಪಿ**

ಸಮಾಜಸೇವೆಗೆ ಸಿದ್ಧ: "ನಟನಾಗಿದ್ದಾಗ ಹೆಸರು, ಕೀರ್ತಿ, ಹಣ ಗಳಿಕೆಯತ್ತ ಗಮನ ಇತ್ತು. ಕುಟುಂಬದಿಂದಲೂ ನಿರೀಕ್ಷಿತ ಮಟ್ಟದಲ್ಲಿ ಸಮಾಜಸೇವೆ ಆಗಿಲ್ಲ ಎಂಬುದನ್ನು ಒಪ್ಪುವೆ. ನಟನೆ ಬಿಟ್ಟು ವೈಯಕ್ತಿಕ ಸಾಧನೆ ಮಾಡಿಲ್ಲ ಎಂಬುದು ಅಘೋರ ಸ್ವಾಮೀಜಿ ಭೇಟಿ ವೇಳೆ ಅರಿವಾದ ಬಳಿಕ ಸಮಾಜ ಸೇವೆಯತ್ತ ದೃಷ್ಟಿ ಹರಿಸಿದ್ದೇನೆ. ನಾನಾ ಸಂಘ-ಸಂಸ್ಥೆಗಳ ಜತೆಗೂಡಿ ಸೇವೆ ಮಾಡಲು ಸಿದ್ಧನಿದ್ದು, ಅಭಿಮಾನಿಗಳ ಜತೆಗೂಡಿ ಕಾರ್ಯ ನಿರ್ವಹಿಸುವೆ," ಎಂದು ರಾಘವೇಂದ್ರ ರಾಜ್‌ಕುಮಾರ್ ವಿವರಿಸಿದರು.

ಶಾಸಕ ಬಿ.ಎನ್.ವಿಜಯಕುಮಾರ್, ಮಣಿಪಾಲ ಪ್ರತಿಷ್ಠಾನದ ಸಿಇಒ ಪಿ. ಬಾಲಚಂದ್ರನ್ ವಾರಿಯರ್, ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್‌ನ ಗೌರವ ಕಾರ್ಯದರ್ಶಿ ವೂಡೆ ಪಿ.ಕೃಷ್ಣ ಮತ್ತಿತರರು ಹಾಜರಿದ್ದರು.



ಆರ್ಟ್ ಆಫ್ ಗಿವಿಂಗ್ (ಸಮರ್ಪಣಾ ಕಲೆ) ಸಂಸ್ಥೆಯ ಎರಡನೆ ವಾರ್ಷಿಕೋತ್ಸವವನ್ನು ನಟ ರಾಘವೇಂದ್ರರಾಜ್‌ಕುಮಾರ್ ಭಾನುವಾರ ಉದ್ಘಾಟಿಸಿದರು. ಶಾಸಕ ವಿಜಯಕುಮಾರ್, ಡಿಜಿಪಿ ಸುಶಾಂತ್ ಮಹಾಪಾತ್ರ, ಮಣಿಪಾಲ್ ಪ್ರತಿಷ್ಠಾನದ ಸಿಇಒ ಬಾಲಚಂದ್ರನ್ ವಾರಿಯರ್ ಹಾಜರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • BENGALURU

ಸುದ್ದಿ ಹನಿ

ಬೇವಿನ ಸಸಿ ಮೂಲಕ ಪರಿಸರ ಜಾಗೃತಿ

ಬೆಂಗಳೂರು: ರಾಜ್ಯದಲ್ಲಿ 5 ಲಕ್ಷ ಬೇವಿನ ಸಸಿ ನೆಡುವ ಮೂಲಕ ಪರಿಸರ ಪ್ರಜ್ಞೆ ಮೂಡಿಸುವುದಾಗಿ ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್ ತಿಳಿಸಿದರು. ಕಳಿಂಗ ವಿದ್ಯಾಸಂಸ್ಥೆ ಭಾನುವಾರ ಶೇಷಾದ್ರಿಪುರ ಕಾಲೇಜಿನಲ್ಲಿ ಆಯೋಜಿಸಿದ್ದ ಆರ್ಟ್ ಆಫ್ ಗಿವಿಂಗ್ (ಸಮರ್ಪಣಾ ಕಲೆ) 2ನೇ ವಾರ್ಷಿಕೋತ್ಸವದಲ್ಲಿ ಮಾತನಾಡಿದರು. ಪರಿಸರದ ಮೇಲೆ ಅಪಾರ ಪ್ರೀತಿ ಹೊಂದಿದ್ದ ಅಪ್ಪಾಜಿ, ಗಿಡಮರಗಳನ್ನು ಸಂರಕ್ಷಿಸುತ್ತಿದ್ದರು. ಅಪ್ಪಾಜಿ ಹೆಸರಿನಲ್ಲಿ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದ್ದು, ಮುಂದಿನ ಅವರ ಹುಟ್ಟುಹಬ್ಬದೊಳಗೆ 5 ಲಕ್ಷ ಸಸಿಗಳನ್ನು ನೆಡುವ ಗುರಿ ಹೊಂದಲಾಗಿದೆ ಎಂದರು. ಪರಿಸರ ಹಾಳು ಮಾಡುವವರು ಯಾರೇ ಆಗಿದ್ದರೂ ಅವರ ವಿರುದ್ಧ ಅಪ್ಪಾಜಿ ಸಿಟ್ಟಿಗೇಳುತ್ತಿದ್ದರು. 'ಅಮ್ಮನ ಗರ್ಭ ಮಾತ್ರ ಮಾಲಿನ್ಯದಿಂದ ಮುಕ್ತವಾಗಿದ್ದು, ಉಳಿದೆಲ್ಲೆಡೆ ಮಾನವನ ದುರಾಸೆಯಿಂದ ಪರಿಸರ ಸಂಪೂರ್ಣ ಮಾಲಿನ್ಯವಾಗಿದೆ' ಎಂದು ಅಪ್ಪಾಜಿ ಬೇಸರದಿಂದ ಹೇಳುತ್ತಿದ್ದರು. ನಾವು ನಮ್ಮ ಮುಂದಿನ ಪೀಳಿಗೆಗೆ ಕಲುಷಿತ ಪರಿಸರವನ್ನು ಕೊಡುಗೆಯಾಗಿ ನೀಡುತ್ತಿದ್ದೇವೆ ಎಂದು ವಿಷಾದಿಸಿದರು. ನಟನೆ ಬಿಟ್ಟು ವೈಯಕ್ತಿಕ ಸಾಧನೆ ಮಾಡಿಲ್ಲ ಎಂಬುದು ಅಘೋರ ಸ್ವಾಮೀಯ ಭೇಟಿ ವೇಳೆ ಅರಿವಾದ ಬಳಿಕ ಸಮಾಜಸೇವೆಯತ್ತ ಮನಸ್ಸು ಮಾಡಿದ್ದೇನೆ. ಎರಡು ವರ್ಷದ ಹಿಂದೆ ಅನಾರೋಗ್ಯಕ್ಕೆ ಒಳಗಾಗಿದ್ದರೂ, ಈಗ ಗುಣಮುಖನಾಗಿದ್ದೇನೆ. ಹಲವು ಸಂಘ-ಸಂಸ್ಥೆಗಳ ಜತೆಗೂಡಿ ಸೇವೆ ಮಾಡಲು ಸಿದ್ಧನಿದ್ದೇನೆ. ಅಭಿಮಾನಿಗಳ ಜತೆಗೂಡಿ ಈ ಕಾರ್ಯ ನಿರ್ವಹಿಸುವೆ ಎಂದರು. ಶಾಸಕ ಬಿ.ಎನ್.ವಿಜಯಕುಮಾರ್, ಮಣಿಪಾಲ್ ಪ್ರತಿಷ್ಠಾನದ ಸಿಇಒ ಪಿ.ಬಾಲಚಂದ್ರನ್ ವಾರಿಯರ್, ಡಿಜಿಪಿ ಸುಶಾಂತ್ ಮಹಾಪಾತ್ರ, ವೋಡೆ ಪಿ.ಕೃಷ್ಣ ಉಪಸ್ಥಿತರಿದ್ದರು.



ಆರ್ಟ್ ಆಫ್ ಗಿವಿಂಗ್ 2ನೇ ವಾರ್ಷಿಕೋತ್ಸವವನ್ನು ರಾಘವೇಂದ್ರ ರಾಜ್‌ಕುಮಾರ್ ಉದ್ಘಾಟಿಸಿದರು.

ಸಂಯುಕ್ತ ಕರ್ನಾಟಕ ಸೋಮವಾರ, 18, ಮೇ, 2015,

ಪರಿಸರ ಸಂರಕ್ಷಣೆಗೆ 5 ಲಕ್ಷ ಬೇವಿನ ಸಸಿ ಪೋಷಣೆ

ಬೆಂಗಳೂರು

ಪರಿಸರವನ್ನು ಉಳಿಸಲು ನಗರದಲ್ಲಿ 5 ಲಕ್ಷ ಬೇವಿನ ಸಸಿಗಳನ್ನು ನೆಡಲಾಗುವುದು ಎಂದು ಚಿತ್ರನಟ ರಾಘವೇಂದ್ರ ರಾಜಕುಮಾರ್ ತಿಳಿಸಿದರು.

ಶೇಷಾದ್ರಿಪುರ ಕಾಲೇಜಿನಲ್ಲಿ ಏರ್ಪಡಿಸಿದ್ದ ಆರ್ಟ್ ಆಫ್ ಲಿವಿಂಗ್ ವಾರ್ಷಿಕೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬೆಳೆಯುತ್ತಿರುವ ಬೆಂಗಳೂರಿನಂತಹ ನಗರದಲ್ಲಿ ಪರಿಸರ ರಕ್ಷಣೆ ಎಲ್ಲರ ಹೊಣೆಯಾಗಿದೆ.



ಉತ್ತಮ ಆಮ್ಲಜನಕ್ಕಾಗಿ ಬೇವಿನ ಸಸಿಗಳನ್ನು ನೆಟ್ಟು ಪೋಷಣೆ ಮಾಡಬೇಕಾಗಿದೆ. ಇದಕ್ಕಾಗಿ ಈಗಾಗಲೇ ಬೇವಿನ ಸಸಿಗಳನ್ನು ನೆಡುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಕೆಲವೇ ವರ್ಷಗಳಲ್ಲಿ 5 ಲಕ್ಷ ಬೇವಿನ ಸಸಿಗಳನ್ನು ನೆಡಲಾಗುವುದು ಎಂದು ಹೇಳಿದರು.

ಪರಿಸರ ಉಳಿಸಲು ಡಾ. ರಾಜಕುಮಾರ್ ಅಭಿಮಾನಿಗಳಲ್ಲಿ ಅರಿವು ಮೂಡಿಸಲಾಗುವುದು. ಸಮಾಜ ಸೇವೆ ಜತೆಯಲ್ಲಿ ಪರಿಸರ ರಕ್ಷಣೆ ಮಾಡುವಂತಹ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ತಿಳಿಸಲಾಗುವುದು ಎಂದರಲ್ಲದೆ, ಸಮಾಜ ಸೇವೆ ಎಂಬುದು ಕೇವಲ ಕೊಡುವಂತಹ ಗುಣ ಮಾತಿಗೆ ಸೀಮಿತವಾಗಬಾರದು. ಅದನ್ನು ಕೃತಿಗಿಳಿಸಬೇಕು. ಅಘೋರಿ ಸ್ವಾಮೀಜಿಯವರೊಬ್ಬರು ಆಶೀರ್ವಚನ ನೀಡಿದ ನಂತರ ತಮ್ಮ ಮನಃಪರಿವರ್ತನೆಯಾಗಿದ್ದು, ಸಮಾಜಮುಖಿ ಸೇವೆ ಮಾಡಲು ಸಾಧ್ಯವಾಗಿದೆ. ತಮ್ಮ ಆರೋಗ್ಯದಲ್ಲೂ ಸುಧಾರಣೆಯಾಗಿದೆ ಎಂದರು.

ಶಾಸಕ ಬಿ.ಎನ್. ವಿಜಯಕುಮಾರ್ ಮಾತನಾಡಿ, ಸಮಾಜಕ್ಕೆ ನೀಡುವ ಕೊಡುಗೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಕಳಿಂಗ ವಿವಿ ಯಾವುದೇ ಪ್ರಚಾರವಿಲ್ಲದೆ ದೇಶಕ್ಕೆ ಮಾದರಿಯಾಗುವಂತಹ ಕೆಲಸ ಮಾಡುತ್ತಿದೆ. ಇದೇ ರೀತಿಯ ಕಾರ್ಯ ಮಾಡುವವರಿಗೆ ಪ್ರೋತ್ಸಾಹ ನೀಡಬೇಕಾಗಿದೆ ಎಂದರು.

ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮದ ಅಧ್ಯಕ್ಷ ಹಾಗೂ ಡಿಜಿಪಿ ಸುಶಾಂತ್ ಮಹಾಪಾತ್ರ ಮಾತನಾಡಿ, ಶಿಕ್ಷಣ ಕ್ಷೇತ್ರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಹಾಗೂ ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡುವವರನ್ನು ಪ್ರೋತ್ಸಾಹಿಸಬೇಕೆ ಹೊರತು ಅವರ ಕಾರ್ಯವನ್ನು ಹೀಗಳೆಯುವ ಕಾರ್ಯ ಸರಿಯಲ್ಲ. ಸಮಾಜ ಸೇವೆಮೂಲಕ ಮೌನಕ್ರಾಂತಿಯಾಗುತ್ತದೆ ಎಂದರು.

ಮಣಿಪಾಲ್ ಫೌಂಡೇಷನ್ ಕಾರ್ಯನಿರ್ವಾಹಕ ಅಧಿಕಾರಿ ಪಿ. ಬಾಲಚಂದ್ರನ್ ವಾರಿಯರ್, ಶೇಷಾದ್ರಿಪುರ ಶಿಕ್ಷಣ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಡಾ. ವೂಡೆ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡಪ್ರಭ

ಬೆಂಗಳೂರು | ಸೋಮವಾರ, 18 ಮೇ 2015

ರಾಜ್ಯಾದ್ಯಂತ 5 ಲಕ್ಷ ಬೇವಿನ ಸಸಿ ನೆಡಲು ನಿರ್ಧಾರ



ಬೆಂಗಳೂರು: ವರನಟ ಡಾ.ರಾಜ್‌ಕುಮಾರ್ ಪ್ರತಿಮೆ ಸುತ್ತಮುತ್ತ ಹಾಗೂ ರಾಜ್ಯಾದ್ಯಂತ 5 ಲಕ್ಷ ಬೇವಿನ ಸಸಿಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆ ಮಾಡಲಾಗುವುದು ಎಂದು ನಟ ರಾಘವೇಂದ್ರ ರಾಜ್‌ಕುಮಾರ್ ಹೇಳಿದರು.

ಭಾನುವಾರ ಆರ್ಟ್ ಆಫ್ ಗಿವಿಂಗ್‌ನ 2ನೇ ವಾರ್ಷಿಕೋತ್ಸವದಲ್ಲಿ ಮಾತನಾಡಿ, ಈಗಾಗಲೇ ಬೇವಿನ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ಮುಂಬರುವ ದಿನಗಳಲ್ಲಿ 5 ಲಕ್ಷ ಬೇವಿನ ಸಸಿಗಳನ್ನು ನೆಡಲಾಗುವುದು. ಈ ಕಾರ್ಯಕ್ಕೆ ಅಭಿಮಾನಿಗಳೆಲ್ಲರೂ ಕೈ ಜೋಡಿಸಬೇಕು. ಕೊಡುವ ಗುಣ ಕೇವಲ ಮಾತಿಗೆ ಸೀಮಿತವಾಗದೆ, ಕೃತಿಗಿಳಿಯಬೇಕು ಎಂದರು.

ಶಾಸಕ ಬಿ.ಎನ್.ವಿಜಯ್‌ಕುಮಾರ್ ಮಾತನಾಡಿ, ಕೊಡುವುದರಿಂದ ದೊರೆಯುವ ತೃಪ್ತಿ ಬೆಲೆ ಕಟ್ಟಲು ಸಾಧ್ಯವಾಗದು. ಕಳಿಂಗ ವಿವಿ ಯಾವುದೇ ಪ್ರಚಾರವಿಲ್ಲದೆ ದೇಶಕ್ಕೆ ಮಾದರಿಯಾಗುವ ಕೆಲಸ ಮಾಡುತ್ತಿದೆ ಎಂದರು.

ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಡಾ. ವೂಡೆ ಪಿ.ಕೃಷ್ಣ ಮಾತನಾಡಿ, ಕೊಡುವುದು ನಮ್ಮ ಸಂಸ್ಕೃತಿಯಲ್ಲೇ ಬೆರೆತಿದೆ. ಅದನ್ನು ನಾವು ಮರೆತಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಿ ಕೊಡುವ ಧರ್ಮವನ್ನು ಹೆಚ್ಚು ಅಳವಡಿಸಿಕೊಳ್ಳಬೇಕಿದೆ ಎಂದರು. ರಾಜ್ಯ ಪೊಲೀಸ್ ವಸತಿ ನಿಗಮದ ಅಧ್ಯಕ್ಷ ಸುಶಾಂತ್ ಮಹಾಪಾತ್ರ, ಮಣಿಪಾಲ್ ಫೌಂಡೇಷನ್ ಕಾರ್ಯ ನಿರ್ವಹಣಾಧಿಕಾರಿ ಪಿ. ಬಾಲಚಂದ್ರನ್ ವಾರಿಯರ್ ಭಾಗವಹಿಸಿದ್ದರು.

ಈ ಸಂಜೆ ಭಾನುವಾರ, 17-05-2015

ಪರಿಸರ ಸಂರಕ್ಷಣೆಗೆ 5 ಲಕ್ಷ ಬೇವಿನ ಸಸಿ



ಬೆಂಗಳೂರು, ಮೇ 17- ಐದು ಲಕ್ಷ ಬೇವಿನ ಸಸಿ ನೆಡುವ ಮೂಲಕ ಪರಿಸರ ಸಂರಕ್ಷಣೆ ಮಾಡಲಾಗುವುದು ಎಂದು ಚಲನಚಿತ್ರ ನಟ ರಾಘವೇಂದ್ರ ರಾಜ್‌ಕುಮಾರ್ ಇಂದಿಲ್ಲಿ ತಿಳಿಸಿದರು.

ಆರ್ಟ್ ಆಫ್ ಗೀವಿಂಗ್ ವಾರ್ಷಿಕೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈಗಾಗಲೇ ಬೇವಿನ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದ್ದು, ಕೆಲವೇ ವರ್ಷಗಳಲ್ಲಿ ಐದು ಲಕ್ಷ ಬೇವಿನ ಸಸಿಗಳನ್ನು ನೆಡಲಾಗುವುದು ಎಂದರು.

ಅಭಿಮಾನಿಗಳಲ್ಲೂ ಕೂಡ ಸಮಾಜಸೇವಾ ಮನೋಭಾವವನ್ನು ರೂಪಿಸಬೇಕು, ಅವರನ್ನು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಬೇಕು, ಕೊಡುವ ಗುಣ ಕೇವಲ ಮಾತಿಗೆ ಸೀಮಿತವಾಗದೆ ಕೃತಿಗಿಳಿಯಬೇಕು ಎಂದರು.

ಅಘೋರಿ ಸ್ವಾಮೀಜಿಯೊಬ್ಬರು ಆಶೀರ್ವಾದ ನೀಡಿದ ನಂತರ ತಮ್ಮ ಮನಸ್ಸಿನಲ್ಲಿ ಪರಿವರ್ತನೆಯಾಗಿದ್ದು, ಸಮಾಜಮುಖಿ ಸೇವೆ ಮಾಡಲು ಮುಂದಾಗಿರುವುದಾಗಿ ತಿಳಿಸಿದರು.

ಸ್ವಾಮೀಜಿಯವರ ಆಶೀರ್ವಾದದ ನಂತರ ತಮ್ಮ ಆರೋಗ್ಯದಲ್ಲಿ ಸುಧಾರಣೆಯಾಗಿದೆ ಎಂದು ಹೇಳಿದರು.

ಶಾಸಕ ಬಿ.ಎನ್.ವಿಜಯ್‌ಕುಮಾರ್ ಮಾತನಾಡಿ, ಕೊಡುವುದರಿಂದ ಸಿಗುವ ತೃಪ್ತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ, ಕಳಿಂಗ ವಿಶ್ವವಿದ್ಯಾಲಯ ಯಾವುದೇ ಪ್ರಚಾರವಿಲ್ಲದೆ ದೇಶಕ್ಕೆ ಮಾದರಿಯಾಗುವ ಕೆಲಸ ಮಾಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮದ ಅಧ್ಯಕ್ಷ ಹಾಗೂ ಡಿಜಿಪಿ ಸುಶಾಂತ್ ಮಹಾಪಾತ್ರ ಮಾತನಾಡಿ, ಶಿಕ್ಷಣ ಕ್ಷೇತ್ರ ಹಾಗೂ ಸಮಾಜಕ್ಕೆ ಒಳ್ಳೆಯ ಕೆಲಸ ಮಾಡುವಂತವರಿಗೆ ಪ್ರೋತ್ಸಾಹ ನೀಡಬೇಕೆ ಹೊರತು ಕಾಲೆಳೆಯಬಾರದು.

ಸಮಾಜಸೇವೆ ಮಾಡುವವರಿಂದ ಮೌನಕ್ರಾಂತಿ ಯಾಗುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಣಿಪಾಲ್ ಫೌಂಡೇಷನ್ ಕಾರ್ಯನಿರ್ವಾಹಕ ಅಧಿಕಾರಿ ಪಿ.ಬಾಲಚಂದ್ರನ್ ವಾರಿಯರ್, ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಡಾ.ವೂಡೆ.ಪಿ.ಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು.

ಸಂಜೆವಾಣಿ
ಭಾನುವಾರ 17 ಮೇ 2015



ನಗರದ ಶೇಷಾದ್ರಿಪುರ ಕಾಲೇಜು ಆವರಣದಲ್ಲಿಂದು ನಡೆದ "ಆರ್ಟ್ ಆಫ್ ಗಿವಿಂಗ್" ವಾರ್ಷಿಕ ದಿನಾಚರಣೆಯಲ್ಲಿ ನಟ ರಾಘವೇಂದ್ರ ರಾಜ್‌ಕುಮಾರ್, ಮೂಡೆ ಪಿ. ಕೃಷ್ಣ, ಶಾಸಕ ವಿಜಯ ಕುಮಾರ್, ಸುಶಾಂತ್ ಮಹಾಪಾತ್ರ ಇದ್ದಾರೆ.

ವಿಜಯವಾಣಿ
ಕನ್ನಡಿಗರ ಧ್ವನಿ
ೃವಲ್ಲಿ
ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ
VIJAYAVANI ● BENGALURU 17 MAY 2015

ಇಂದು ಆರ್ಟ್ ಆಫ್ ಗಿವಿಂಗ್ ದಿನಾಚರಣೆ

ಬೆಂಗಳೂರು: ಕೆಐಐಟಿ ಮತ್ತು ಕೆಐಎಸ್ಎಸ್‌ನ ಸಂಸ್ಥಾಪಕ ಅಚ್ಯುತ ಸಮಂತ ಅವರು ಮೇ 17ರಂದು ಶೇಷಾದ್ರಿಪುರಂ ಕಾಲೇಜಿನಲ್ಲಿ ಆರ್ಟ್ ಆಫ್ ಗಿವಿಂಗ್ (ಸಮರ್ಪಣಾ ಕಲೆ) ದಿನಾಚರಣೆ ಆಯೋಜಿಸಿದ್ದಾರೆ. ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ನಡೆಯುವುದು.

ಬೆಂಗಳೂರಿನಲ್ಲಿ ನಡೆಯುತ್ತಿರುವ 2ನೇ ಆರ್ಟ್ ಆಫ್ ಗಿವಿಂಗ್ ದಿನಾಚರಣೆ ಇದು. ಸಮಾರಂಭದಲ್ಲಿ ನಟ ರಾಘವೇಂದ್ರ ರಾಜ್‌ಕುಮಾರ್ ತಮ್ಮ ಸೇವಾ ಕಾರ್ಯದ ಕುರಿತು ಮಾತನಾಡಲಿದ್ದಾರೆ. ಪಿ. ಬಾಲಚಂದ್ರನ್ ವಾರಿಯರ್ ಪ್ರಧಾನ ಭಾಷಣ ನೀಡುವರು. ಸುಶಾಂತ್ ಮಹಾಪಾತ್ರ, ಶಾಸಕರಾದ ಡಾ. ಅಶ್ವತ್ಥನಾರಾಯಣ್ ಸಿ.ಎನ್., ಬಿ.ಎನ್. ವಿಜಯಕುಮಾರ್, ಡಾ. ಸುಧಾಕರ್ ಕೆ. ಮತ್ತು ಡಾ. ವೂಡೇ ಪಿ. ಕೃಷ್ಣ ಭಾಗವಹಿಸುವರು. ಸವಿತಾ ಗಣೇಶ್‌ಪ್ರಸಾದ್ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯುವುದು.

ಅಚ್ಯುತ್ ಸಮಂತ್ ಖಾಸಗಿಯಾಗಿ ಪಾಠ ಮಾಡುವ ಮೂಲಕ ಗಳಿಸಿದ ಹಣವನ್ನು ಸ್ವಂತಕ್ಕೆ ಮಾತ್ರ ಬಳಸಿಕೊಳ್ಳದೆ ಅಗತ್ಯ ಇರುವ ಸ್ನೇಹಿತರಲ್ಲಿ ಅಚ್ಯುತ್ ಸಮಂತ್ ಹಂಚಿಕೊಳ್ಳುತ್ತಿದ್ದರು. ಅವಿವಾಹಿತರಾಗಿರುವ ಇವರು ಸರಳ ಮತ್ತು ಮಾದರಿ ಜೀವನ ಪದ್ಧತಿ ಅಳವಡಿಸಿಕೊಂಡಿದ್ದಾರೆ.

1992ರಲ್ಲಿ ಕೆಐಐಟಿ ಮತ್ತು ಕೆಐಎಸ್ಎಸ್ ಸಂಸ್ಥೆಗಳನ್ನು ಬಾಡಿಗೆ ಕಟ್ಟಡದಲ್ಲಿ ಆರಂಭಿಸಿದರು. ನಂತರ ಆರಂಭಿಸಿದ ಶಿಕ್ಷಣ ಸಂಸ್ಥೆಯಲ್ಲಿ ಸದ್ಯ 25 ಸಾವಿರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಸಂಜೆವಾಣಿ

1982

ಬೆಂಗಳೂರು ◆ ಕಲಬುರಗಿ ◆ ಮೈಸೂರು ◆ ದಾವಣಗೆರೆ ◆ ರಾಯಚೂರು [illegible] ಹುಬ್ಬಳ್ಳಿ ◆ ಬಳ್ಳಾರಿ ◆ ಮಂಗಳೂರು ◆ ತುಮಕೂರು ◆ ಶಿವಮೊಗ್ಗ

ಬೆಂಗಳೂರು ಶುಕ್ರವಾರ 15-5-2015 ಕನ್ನಡ ದಿನಪತ್ರಿಕೆ ಸಂಪುಟ 33 ಸಂಚಿಕೆ 155 ಪುಟ 8 ಬೆಲೆ ₹ 3:00 RNI No.36667/82 Ph.22868882 Fax:080-22868484 http://w

ಸಮರ್ಪಣಾ ಕಲೆ ಕಾರ್ಯಕ್ರಮ

ಬೆಂಗಳೂರು, ಮೇ ೧೪- ತಮ್ಮಲ್ಲಿ ಇರುವುದನ್ನು ಇಲ್ಲದವರಿಗೆ ನೀಡುವ ಸಮರ್ಪಣಾ ಕಲೆ (ಆರ್ಟ್ ಆಫ್ ಗಿವಿಂಗ್) ಕಾರ್ಯಕ್ರಮವು ನಗರದ ಶೇಷಾದ್ರಿಪುರಂನ ಶೇಷಾದ್ರಿಪುರಂ ಕಾಲೇಜಿನ ಆವರಣದಲ್ಲಿ ಇದೇ ತಿಂಗಳ 17 ರಂದು ನಡೆಯಲಿದೆ.

ಆರ್ಟ್ ಆಫ್ ಗಿವಿಂಗ್‌ನ ಎರಡನೇ ವರ್ಷದ ಕಾರ್ಯಕ್ರಮವನ್ನು ಅಂದು ಬೆಳಿಗ್ಗೆ ಬೆಳಿಗ್ಗೆ 11ಕ್ಕೆ ನಟ ಹಾಗೂ ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್ ಅವರು ಉದ್ಘಾಟಿಸಿ ಸಮರ್ಪಣಾ ಕಲೆಯ ಮಹತ್ವವನ್ನು ಹಾಗೂ ತಮ್ಮ ಜೀವನದಲಿ ಆರಂಭಿಸಿರುವ ನಿಸ್ವಾರ್ಥ ಸೇವಾ ಕಾರ್ಯಗಳನ್ನು ತಿಳಿಸಿಕೊಡಲಿದ್ದಾರೆ.

ಮಣಿಪಾಲ್ ಪ್ರತಿಷ್ಠಾನದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಾಲಚಂದ್ರನ್ ವಾರಿಯಾರ್, ಪೊಲೀಸ್ ಗೃಹ ಮಂಡಲಿ ಪೊಲೀಸ್ ಮಹಾ ನಿರ್ದೇಶಕ ಸುಶಾಂತ್ ಮಹಾಪಾತ್ರ, ಶಾಸಕರಾದ ಅಶ್ವತ್ಥ ನಾರಾಯಣ, ವಿಜಯ್‌ಕುಮಾರ್, ಡಾ. ಸುಧಾಕರ್, ಶೇಷಾದ್ರಿಪುರಂ ಕಾಲೇಜಿನ ಟ್ರಸ್ಟಿ ವೂತೇ. ಪಿ. ಕೃಷ್ಣ ಮತ್ತಿತರ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ನಿಸ್ವಾರ್ಥ ಸೇವೆಯನ್ನು ಮೈಗೂಡಿಸಿಕೊಂಡಿರುವ ಕಳಿಂಗ ಇನ್ಸಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್ (ಕಿಸ್)ನ ಮುಖ್ಯಸ್ಥ ಅಚ್ಯುತ ಸಮಂತ ಅವರು ಪ್ರತಿ ವರ್ಷದಂತೆ ನಗರದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ.

ಸಮರ್ಪಣಾ ಕಲೆ ಮಾನವ ಜೀವನದಲ್ಲಿ ಅನನ್ಯ ಅನುಭೂತಿ ನೀಡುವ ಕ್ರಿಯೆಯಾಗಿದೆ. ತಮ್ಮಲ್ಲಿ ಇರುವುದನ್ನು ಇಲ್ಲದವರಿಗೆ ನೀಡುವುದೇ ಸಮರ್ಪಣೆಯಾಗಿದೆ ಎಂದು ಕಾರ್ಯಕ್ರಮದ ಆಯೋಜಕ ಸಮಂತ ಅವರು ತಿಳಿಸಿದ್ದಾರೆ.

ವಿಜಯ ಕರ್ನಾಟಕ
ಶನಿವಾರ, 9 ಮೇ 2015, ಬೆಂಗಳೂರು

'ಕರ್ನಾಟಕದಲ್ಲಿ ಗಾಂಧಿ ಮೊದಲ ಹೆಜ್ಜೆ' ಶತಮಾನೋತ್ಸವ ಉದ್ಘಾಟನೆ

ಎಲ್ಲ ಜಿಲ್ಲೆಗಳಲ್ಲಿ ಗಾಂಧಿ ಭವನ: ಸಿಎಂ ಘೋಷಣೆ

■ ವಿಕ ಸುದ್ದಿಲೋಕ ಬೆಂಗಳೂರು

ಗಾಂಧೀಜಿಯವರ ತತ್ವ, ಸಿದ್ಧಾಂತ, ವಿಚಾರಧಾರೆಗಳ ಬಗ್ಗೆ ಯುವಕರಲ್ಲಿ ಸ್ಫೂರ್ತಿ, ಪ್ರೇರಣೆ ತುಂಬಲು ಎಲ್ಲ ಜಿಲ್ಲೆಗಳಲ್ಲಿ ಗಾಂಧಿಭವನಗಳನ್ನು ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಪ್ರಕಟಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಾನಾ ಸಂಸ್ಥೆಗಳ ಸಹಯೋಗದಲ್ಲಿ ಸೆಂಟ್ರಲ್ ಕಾಲೇಜ್ ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 'ಕರ್ನಾಟಕದಲ್ಲಿ ಗಾಂಧಿ ಮೊದಲ ಹೆಜ್ಜೆ ಶತಮಾನೋತ್ಸವ' ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

''ಗಾಂಧೀಜಿ ಅವರು ಜಗತ್ತು ಕಂಡ ಅತ್ಯಂತ ಶ್ರೇಷ್ಠ ಚಿಂತಕ. ಅವರು ಇಡೀ ಜಗತ್ತಿನ ನಾಯಕ. ಇಡೀ ಜಗತ್ತಿನ ಸಮಸ್ಯೆಗಳಿಗೆ ಗಾಂಧೀಜಿ ವಿಚಾರಧಾರೆಗಳು ಪರಿಹಾರ ಎಂದು ಅಮೆರಿಕದ ಅಧ್ಯಕ್ಷ ಒಬಾಮ ಅವರೇ ಒಪ್ಪಿಕೊಂಡರೆ, ಗಾಂಧೀಜಿ ಅವರನ್ನು ಮರೆತರೆ ವಿಶ್ವವೇ ನಾಶವಾಗಲಿದೆ ಎಂದು ಮಾರ್ಟಿನ್ ಲೂಥರ್ ಹೇಳಿದ್ದರು. ಹೀಗಾಗಿ, ಗಾಂಧೀಜಿ ಅವರನ್ನು ಸ್ಮರಿಸಿದರೆ ಸಾಲದು, ಅವರ ಸಾಮಾಜಿಕ, ಆರ್ಥಿಕ ಚಿಂತನೆಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ,'' ಎಂದು ಹೇಳಿದರು.

''ಗಾಂಧೀಜಿಯವರ ವಿಚಾರಧಾರೆಗಳು ಎಲ್ಲ ಕಾಲಘಟ್ಟಕ್ಕೂ ಅನ್ವಯವಾಗಲಿವೆ. ಅವರ 'ಸತ್ಯ ಮತ್ತು ಅಹಿಂಸೆ' ಮಾರ್ಗಗಳನ್ನು ಇಡೀ ಜಗತ್ತಿನ ಜನ ಅರ್ಥಮಾಡಿಕೊಂಡು ಬದುಕುವುದೇ ನಾವು ಅವರಿಗೆ ಸಲ್ಲಿಸುವ ಗೌರವ. ''ದೇಶದಲ್ಲಿ ಕೋಮು ಸೌಹಾರ್ದ, ಸಾಮರಸ್ಯಕ್ಕಾಗಿ ಗಾಂಧೀಜಿ ತಮ್ಮ ಪ್ರಾಣವನ್ನೇ ತೆತ್ತರು. ಈಗಲೂ ಜಾತಿ, ಧರ್ಮದ ಹೆಸರಿನಲ್ಲಿ ಸಮಾಜ ಒಡೆಯುವ ಪ್ರಯತ್ನ ದೇಶದಲ್ಲಷ್ಟೇ ಅಲ್ಲ, ನಾನಾ ರಾಷ್ಟ್ರಗಳಲ್ಲಿ ನಡೆಯುತ್ತಿದೆ. ಇದಕ್ಕೆಲ್ಲಾ ಗಾಂಧೀಜಿಯವರ ಅಹಿಂಸೆ ಮತ್ತು ಸತ್ಯದ ಮಾರ್ಗವೇ ಪರಿಹಾರ,'' ಎಂದರು.

ಒಬ್ಬ ವ್ಯಕ್ತಿಯಲ್ಲಿ ಎಲ್ಲ ಧರ್ಮಗಳು: ''ರಾಷ್ಟ್ರಪಿತನಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್, ಜೈನ ಸೇರಿದಂತೆ ಎಲ್ಲ ಧರ್ಮಗಳನ್ನೂ ಕಾಣಬಹುದು. ಬಸವೇಶ್ವರರನ್ನೂ ಗಾಂಧಿಯಲ್ಲಿ ಕಾಣುತ್ತಿದ್ದೆವು. ಹೀಗಾಗಿ, ಅವರದು ವಿಶಿಷ್ಟವಾದ ವ್ಯಕ್ತಿತ್ವ'' ಎಂದರು.



ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಕರ್ನಾಟಕದಲ್ಲಿ ಗಾಂಧಿ ಮೊದಲ ಹೆಜ್ಜೆ ಶತಮಾನೋತ್ಸವ' ಸಮಾರಂಭದಲ್ಲಿ ತೈಲವರ್ಣದ ಚಿತ್ರದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹಿ ಹಾಕಿದರು. ರೋಷನ್ ಬೇಗ್, ಎಚ್.ಕೆ.ಪಾಟೀಲ್, ಹೊ. ಶ್ರೀನಿವಾಸಯ್ಯ ಮತ್ತಿತರರಿದ್ದರು.



ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಹಾತ್ಮ ಗಾಂಧಿ ಅವರ ಪ್ರತಿಮೆಗೆ ವಿದ್ಯಾರ್ಥಿಗಳು ಹೂವಿನ ಹಾರ ಹಾಕಿ ನಮನ ಸಲ್ಲಿಸಿದರು.

''ಕಟ್ಟಕಡೆಯ ಮನುಷ್ಯ, ಅವಕಾಶ ವಂಚಿತರಿಗೆ ರಾಜಕೀಯ, ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ಸಿಕ್ಕಾಗ ಮಾತ್ರ ಗಾಂಧೀಜಿ ಕಂಡಂತಹ ಗ್ರಾಮ ಸ್ವರಾಜ್ಯ ಕನಸು ನನಸಾಗಲಿದೆ. ಆ ನಿಟ್ಟಿನಲ್ಲಿ ಸರಕಾರ ಹೆಜ್ಜೆಯನ್ನಿಡುತ್ತಿದೆ. ಕರ್ನಾಟಕದಲ್ಲಿ ಗಾಂಧಿ ಮೊದಲ ಹೆಜ್ಜೆ ಶತಮಾನೋತ್ಸವದ ಅಂಗವಾಗಿ ಗಾಂಧಿ ಸ್ಮಾರಕ ನಿಧಿ ವರ್ಷವಿಡೀ ಹಮ್ಮಿಕೊಳ್ಳಲಿರುವ ಕಾರ್ಯಕ್ರಮಗಳಿಗೆ ಸರಕಾರ ಎಲ್ಲ ರೀತಿಯ ಬೆಂಬಲ ನೀಡಲಿದೆ,'' ಎಂದು ಭರವಸೆ ನೀಡಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಎಚ್.ಕೆ. ಪಾಟೀಲ್, ''ಆಧುನಿಕ ಯುಗದಲ್ಲಿ ನಾವು ಗಾಂಧೀಜಿಯವರ ತತ್ವ, ಚಿಂತನೆಗಳನ್ನು ಅಳವಡಿಸಿಕೊಳ್ಳಲು ಎಡವಿದೆವು. ಪರಿಣಾಮ ಸ್ವಾತಂತ್ರ್ಯ ಬಂದ ಏಳು ದಶಕಗಳ ನಂತರ ನಾವು ಗ್ರಾಮಗಳ ಸ್ವಾವಲಂಬಿ, ಪುನರುಜ್ಜೀವನದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ,'' ಎಂದರು.

ಗೂಂಡಾ ರಾಜ್ಯ ಭಯ: ಸ್ವಾತಂತ್ರ್ಯಯೋಧ ಎಚ್. ಎಸ್. ದೊರೆಸ್ವಾಮಿ, ''ಅಹಿಂಸೆಯ ಸಮಾಜ ನಿರ್ಮಾಣವಾಗಬೇಕೆಂದು ಗಾಂಧಿ ಬಯಸಿದ್ದರು. ಆದರೆ, ಇಂದಿನ ಸಮಾಜ ಕೆಟ್ಟು ಹೋಗಿದೆ. ಜನರಿಗೆ ಸ್ವರಾಜ್ಯದ ಅರ್ಥವೇ ಗೊತ್ತಿಲ್ಲ. ಇಡೀ ರಾಜ್ಯ ಗೂಂಡಾಗಳ ರಾಜ್ಯವಾಗುವ ಭಯ ಕಾಡುತ್ತಿದೆ,'' ಎಂದು ಆತಂಕ ವ್ಯಕ್ತಪಡಿಸಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ.ಪಾಟೀಲ ಪುಟ್ಟಪ್ಪ ''1934ರಲ್ಲಿ ಗಾಂಧೀಜಿ ರಾಜ್ಯಕ್ಕೆ ಬಂದಿದ್ದಾಗ ಅವರನ್ನು ನಾನು ಭೇಟಿಯಾಗಿದ್ದೆ. ಹೈಸ್ಕೂಲ್‌ನಲ್ಲಿ ಓದುತ್ತಿದ್ದ ನನಗೆ ಸ್ವಯಂಸಂಘಟಕನಾಗಿ ಅವರನ್ನು ಭೇಟಿ ಮಾಡುವ ಅವಕಾಶ ಸಿಕ್ಕಿತ್ತು. ಗಾಂಧೀಜಿ ನನ್ನ ಬೆನ್ನು ತಟ್ಟಿದ್ದನ್ನು ನೆನಪಿಸಿಕೊಂಡರೆ ರೋಮಾಂಚನವಾಗುತ್ತದೆ,'' ಎಂದರು.

ಹೊಸದಿಲ್ಲಿಯ ಮಹಾತ್ಮಗಾಂಧಿ ರಾಷ್ಟ್ರೀಯ ಸಂಗ್ರಹಾಲಯದ ನಿರ್ದೇಶಕ ಅಣ್ಣಾಮಲೈ, ''ಗಾಂಧೀಜಿ ಯವರ ಜೀವನ ಚರಿತ್ರೆ ಕುರಿತು ಹೊರತಂದಿರುವ ಸಾಕ್ಷ್ಯಚಿತ್ರವನ್ನು ಕನ್ನಡ ಭಾಷೆಗೆ ಡಬ್ಬಿಂಗ್ ಮಾಡುವ ಮೂಲಕ ಶಾಲಾ-ಕಾಲೇಜುಗಳಲ್ಲಿ ಪ್ರದರ್ಶನಕ್ಕೆ ಕರ್ನಾಟಕ ಸರಕಾರ ಮುಂದಾಗಬೇಕು,'' ಎಂದು ಕೋರಿದರು. ಸಚಿವೆ ಉಮಾಶ್ರೀ, ಬೆಂಗಳೂರು ವಿವಿ ಕುಲಪತಿ ಪ್ರೊ. ತಿಮ್ಮೇಗೌಡ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಎಂ.ಆರ್. ರಂಗಶಾಮಯ್ಯ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಹೊ. ಶ್ರೀನಿವಾಸಯ್ಯ ಮಾತನಾಡಿದರು. ಸಚಿವ ರೋಷನ್‌ಬೇಗ್, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ವೂಡೇ ಪಿ. ಕೃಷ್ಣ ವಾರ್ತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ.ನಾಗಾಂಬಿಕಾದೇವಿ, ಬೆಂಗಳೂರು ವಿವಿ ಕುಲಸಚಿವೆ ಕೆ.ಕೆ. ಸೀತಮ್ಮ ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ ಶನಿವಾರ, 9, ಮೇ, 2015, ಬೆಂಗಳೂರು

ಎಲ್ಲಾ ಜಿಲ್ಲೆಯಲ್ಲೂ ಗಾಂಧಿಭವನ ನಿರ್ಮಾಣ: ಸಿದ್ದರಾಮಯ್ಯ

ಬೆಂಗಳೂರು

ಮಹಾತ್ಮಾ ಗಾಂಧಿಜೀಯವರ ವಿಚಾರಧಾರೆಗಳನ್ನು ಯುವಕರಿಗೆ ತಲುಪಿಸಲು ಹಾಗೂ ಅವರಿಗೆ ಸ್ಫೂರ್ತಿ, ಪ್ರೇರಣೆ ನೀಡಲು ಎಲ್ಲಾ ಜಿಲ್ಲೆಗಳಲ್ಲಿಯೂ ಗಾಂಧಿಭವನ ನಿರ್ಮಾಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಶುಕ್ರವಾರ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ "ಕರ್ನಾಟಕದಲ್ಲಿ ಗಾಂಧಿ ಮೊದಲ ಹೆಜ್ಜೆ ಶತಮಾನೋತ್ಸವ" ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಗಾಂಧಿ ಮೊದಲ ಹೆಜ್ಜೆ ಶತಮಾನವೇ ಕಳೆದಿದೆ. ಆದರೆ, ಇನ್ನೂ ಸಂಪೂರ್ಣವಾಗಿ ಗಾಂಧಿ ವಿಚಾರಧಾರೆಗಳನ್ನು ಯುವಕರಿಗೆ ತಲುಪಿಸಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯದ ಪ್ರತಿ ಜಿಲ್ಲೆಯಲ್ಲಿಯೂ ಗಾಂಧಿಭವನ ನಿರ್ಮಾಣ ಮಾಡಬೇಕೆಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪದಾಧಿಕಾರಿಗಳು ಮನವಿ ಮಾಡಿದ್ದಾರೆ. ಶೀಘ್ರವೇ ಗಾಂಧಿಭವನ ನಿರ್ಮಾಣ ಮಾಡಿ ಮಹಾತ್ಮರ ವಿಚಾರಧಾರೆಗಳನ್ನು ಯುವಜನತೆಗೆ ತಲುಪಿಸಲು ನೆರವಾಗುವುದಾಗಿ ತಿಳಿಸಿದರು.

ಪ್ರಸ್ತುತ ಸಮಾಜದಲ್ಲಿ ಜಾತಿ, ಧರ್ಮದ ಹೆಸರಿನಲ್ಲಿ ಸಮಾಜ ಒಡೆಯುವ ಪ್ರಯತ್ನಗಳಾಗುತ್ತಿವೆ ಎಂದು ವಿಷಾದಿಸಿದ ಅವರು, ಅನೇಕ ರಾಷ್ಟ್ರಗಳಲ್ಲಿ ಗಾಂಧೀಜಿಯವರ ಸತ್ಯ ಅಹಿಂಸೆಯ ಮಾರ್ಗವನ್ನು ಅನುಸರಿಸಲಾಗುತ್ತಿದೆ.

ಗಾಂಧೀಜಿ ಯಾವುದೇ ಧರ್ಮಕ್ಕೆ ಸೀಮಿತವಾಗಿರದೆ, ಓರ್ವ ವ್ಯಕ್ತಿಯಲ್ಲಿಯೆ ಎಲ್ಲಾ ಧರ್ಮಗಳನ್ನು ನೋಡಬಹುದಾಗಿದೆ. ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿರುವ ಕಾರಣ ಗಾಂಧಿ ಇಂದಿಗೂ ಪ್ರಸ್ತುತವಾಗಿದ್ದಾರೆ ಎಂದರು.



"ಕರ್ನಾಟಕದಲ್ಲಿ ಗಾಂಧಿ ಮೊದಲ ಹೆಜ್ಜೆ ಶತಮಾನೋತ್ಸವ" ಕಾರ್ಯಕ್ರಮ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಚಿವರಾದ ಎಚ್.ಕೆ.ಪಾಟೀಲ್, ಉಮಾಶ್ರೀ, ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ, ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ.ನಾಗಾಂಬಿಕಾದೇವಿ, ನವದೆಹಲಿಯ ಮಹಾತ್ಮ ಗಾಂಧಿ ರಾಷ್ಟ್ರೀಯ ಸ್ಮಾರಕ ಸಂಗ್ರಹಾಲಯದ ನಿರ್ದೇಶಕ ಅಣ್ಣಾಮಲೈ, ಬೆಂಗಳೂರು ವಿವಿ ಕುಲಪತಿ ಪ್ರೊ.ಬಿ.ತಿಮ್ಮೇಗೌಡ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಹೊ. ಶ್ರೀನಿವಾಸಯ್ಯ, ಡಾ.ವೂಡೇ ಪಿ. ಕೃಷ್ಣ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

- ಗಾಂಧಿ ವಿಚಾರಧಾರೆ ಯುವಕರಿಗೆ ತಲುಪಿಸಿ
- ಗಾಂಧೀಜಿ ಯಾವುದೇ ಧರ್ಮಕ್ಕೆ ಸೀಮಿತವಲ್ಲ
- ಭೂಗಳ್ಳರ ರಕ್ಷಣೆಯಿಂದ ಗೂಂಡಾರಾಜ್ಯ ನಿರ್ಮಾಣ

ಪಂಚವಾರ್ಷಿಕ ಯೋಜನೆ ಬಳಸಿ

ಸ್ವಾತಂತ್ರ್ಯ ಹೋರಾಟಗಾರ ಎಚ್‌-ಎಸ್‌ದೊರೆಸ್ವಾಮಿ ಮಾತನಾಡಿ, ಭೂಗಳ್ಳರಿಗೆ ಹೀಗೆ ರಕ್ಷಣೆ ನೀಡುತ್ತಾ ಹೋದರೆ ನಮ್ಮ ರಾಜ್ಯ ಗೂಂಡಾರಾಜ್ಯವಾಗಿ ನಿರ್ಮಾಣವಾಗುತ್ತದೆ ಎಂಬ ಆತಂಕ ವ್ಯಕ್ತಪಡಿಸಿದರು. ಶೋಷಣೆಮುಕ್ತ, ಬಡತನ ನಿರ್ಮೂಲನೆಯಾಗದೆ, ಸ್ವರಾಜ್ಯ ಸ್ಥಾಪನೆಯಾಗುವುದು ಸಾಧ್ಯವಿಲ್ಲ. ಸರ್ಕಾರ ಪಂಚವಾರ್ಷಿಕ ಯೋಜನೆಗೆ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿದ್ದರೂ, ಬಡವ ಬಡವನಾಗಿಯೆ, ಶ್ರೀಮಂತ ಮತ್ತಷ್ಟು ಶ್ರೀಮಂತನಾಗುತ್ತಿದ್ದಾನೆ. ಆದ್ದರಿಂದ ಮುಂದಿನ 2 ಪಂಚವಾರ್ಷಿಕ ಯೋಜನೆಗಳನ್ನು ಬಡತನ ನಿರ್ಮೂಲನಕ್ಕಾಗಿಯೆ ಬಳಸಿಕೊಳ್ಳಬೇಕು. ಬಹುರಾಷ್ಟ್ರೀಯ ಕಂಪೆನಿಗಳ ಆಗಮನದಿಂದ ಪರದೇಶಿಗಳ ಗುಲಾಮರಾಗುತ್ತಿದ್ದು, ಗ್ರಾಮೋದ್ಯೋಗಗಳು ನಶಿಸಿ ಬಡವರ ಕೆಲಸಗಳು ಹೋಗಿ ಗುಲಾಮರಾಗುತ್ತಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ.ಪಾಟೀಲ್, ಕನ್ನಡ ಸಂಸ್ಕೃತಿ ಸಚಿವೆ ಉಮಾಶ್ರೀ ಕನ್ನಡ, ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ, ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿ, ಡಾ.ನಾಗಾಂಬಿಕಾದೇವಿ, ನವದೆಹಲಿಯ ಮಹಾತ್ಮ ಗಾಂಧಿ ರಾಷ್ಟ್ರೀಯ ಸ್ಮಾರಕ ಸಂಗ್ರಹಾಲಯದ ನಿರ್ದೇಶಕ ಅಣ್ಣಾಮಲೈ, ಬೆಂಗಳೂರು ವಿವಿ ಕುಲಪತಿ ಪ್ರೊ.ಬಿ.ತಿಮ್ಮೇಗೌಡ, ಗಾಂಧಿಸ್ಮಾರಕ ನಿಧಿ ಅಧ್ಯಕ್ಷರು ಡಾ.ಹೊ. ಶ್ರೀನಿವಾಸಯ್ಯ, ಡಾ. ವೂಡೆ ಪಿ. ಕೃಷ್ಣ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಶುಕ್ರವಾರ 8 ಮೇ 2015

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗಾಂಧಿ ಭವನ

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಮೇ ೮- ಇಂದಿನ ಯುವ ಜನಾಂಗಕ್ಕೆ ಗಾಂಧೀಜಿ ಅವರ ವಿಚಾರಧಾರೆಗಳನ್ನು ತಲುಪಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ "ಗಾಂಧೀ ಭವನ"ವನ್ನು ಆರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕದಲ್ಲಿ ಗಾಂಧೀಜಿ ಅವರ ಮೊದಲ ಹೆಜ್ಜೆಯ ಶತಮಾನೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಯುವಕರಿಗೆ ಗಾಂಧೀಜಿ ಅವರ ವಿಚಾರಧಾರೆಗಳನ್ನು ತಲುಪಿಸಿ ಸ್ಫೂರ್ತಿ ಪ್ರೇರಣೆಯನ್ನು ಮೂಡಿಸಿ ಗಾಂಧಿ ಚಿಂತನೆಗೆ ಅವಕಾಶ ಕಲ್ಪಿಸಲು ಈ ಗಾಂಧಿ ಭವನಗಳು ಕೆಲಸ ಮಾಡಲಿವೆ ಎಂದರು.



ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಆಯೋಜಿಸಿದ್ದ ಕರ್ನಾಟಕದಲ್ಲಿ ಗಾಂಧಿ ಮೊದಲ ಹೆಜ್ಜೆ ಶತಮಾನೋತ್ಸವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಚಿವರಾದ ಆರ್. ರೋಷನ್ ಬೇಗ್, ಉಮಾಶ್ರೀ, ಎಚ್.ಕೆ. ಪಾಟೀಲ್, ಸ್ವಾತಂತ್ರ್ಯ ಹೋರಾಟಗಾರ ಡಾ. ಪಾಟೀಲ ಪುಟ್ಟಪ್ಪ; ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂ.ಡೇ. ಪಿ. ಕೃಷ್ಣ ಇದ್ದಾರೆ.

ಯುವ ಜನಾಂಗಕ್ಕೆ ಗಾಂಧೀ ವಿಚಾರಧಾರೆಗಳನ್ನು ಮುಟ್ಟಿಸಲು ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಗಾಂಧೀಜಿಯವರ ವಿಚಾರಧಾರೆಗಳು ಸದಾ ಪ್ರಸ್ತುತ, ಎಲ್ಲಾ ಕಾಲಘಟ್ಟಕ್ಕೂ ಅನ್ವಯಿಸುತ್ತವೆ. ಇಂದಿನ ಹಲವು ಸಮಸ್ಯೆಗಳಿಗೂ ಪರಿಹಾರ ದೊರಕಿಸಲು ಸಾಧ್ಯ ಎಂದರು.

ಸಮಾಜದಲ್ಲಿ ಜಾತಿ-ಧರ್ಮಗಳನ್ನು ಒಡೆಯುವ ಪ್ರಯತ್ನಗಳು ನಡೆದಿವೆ. ನಮ್ಮ ದೇಶದಲ್ಲೇ ಅಲ್ಲ, ಎಲ್ಲಾ ದೇಶದಲ್ಲೂ ಧರ್ಮದ ಮೇಲೆ ಸಮಾಜ ಒಡೆಯುವ ಪ್ರಯತ್ನ ನಡೆದಿದೆ. ಗಾಂಧೀಜಿಯವರ ಅಹಿಂಸೆ, ಸತ್ಯ ಮಾರ್ಗದ ಮೂಲಕ ಇದಕ್ಕೆ ಪರಿಹಾರ ದೊರಕಿಸಿಕೊಳ್ಳಬಹುದು ಎಂದರು.

ಸ್ವಾರ್ಥಕ್ಕಾಗಿ ಸಮಾಜ ಒಡೆಯುವ ಶಕ್ತಿಗಳ ಬಗ್ಗೆ ಎಚ್ಚರದಿಂದ ಇರುವ ಅವಶ್ಯವಿದೆ ಎಂದು ಅವರು ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗಾಂಧೀಜಿಯವರಲ್ಲಿ ಎಲ್ಲಾ ಧರ್ಮಗಳು ಒಟ್ಟಾಗಿದ್ದವು. ಅವರದೊಂದು ವಿಶಿಷ್ಟ ವ್ಯಕ್ತಿತ್ವ. ಹಿಂದೂ, ಇಸ್ಲಾಂ, ಕ್ರೈಸ್ತ ಧರ್ಮ, ಸಿಖ್, ಜೈನ, ಬುದ್ಧ, ಜತೆಗೆ ಬಸವೇಶ್ವರರ ಕಾಯಕ ತತ್ವಗಳನ್ನೂ ಗಾಂಧೀಜಿಯವರಲ್ಲಿ ಕಾಣಬಹುದು ಎಂದರು.

ಗಾಂಧೀಜಿಯವರು ಭಾರತಕ್ಕಲ್ಲ, ಇಡೀ ಜಗತ್ತಿಗೆ ನಾಯಕ ಎಂದು ಅಮೆರಿಕ ಅಧ್ಯಕ್ಷ ಒಬಾಮಾ ಹೇಳಿದ್ದರು. ಅದೇ ರೀತಿ ಸಮಾಜ ಸುಧಾರಕ ಮಾರ್ಟಿನ್ ಲೂಥರ್ ಗಾಂಧೀಜಿ ಜಗತ್ತಿಗೆ ಅನಿವಾರ್ಯ. ಗಾಂಧೀಜಿಯವರನ್ನು ಮರೆತರೆ ವಿಶ್ವದ ನಾಶ ಎಂದಿದ್ದರು. ಇದು ಜಾಗತಿಕ ಮಟ್ಟದಲ್ಲಿ ಗಾಂಧೀಜಿಯವರಿಗೆ ಇರುವ ಮನ್ನಣೆ, ಗೌರವವನ್ನು ತೋರಿಸುತ್ತದೆ ಎಂದರು.

ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ನಮ್ಮ ದೇಶಕ್ಕೆ ಗಾಂಧೀಜಿಯವರು ತಮ್ಮದೇ ಆದ ವಿಚಾರಧಾರೆಗಳನ್ನು ಹೇಳಿದ್ದಾರೆ. ಗ್ರಾಮ. ಸ್ವರಾಜ್ಯ ಅವರ ಆಶಯವಾಗಿತ್ತು. ಸರ್ವೋದಯ ಅವರ ಕನಸಾಗಿತ್ತು ಎಂದು ಹೇಳಿದರು.

ಅಹಿಂಸೆ ಹಾಗೂ ಸತ್ಯದ ಅನ್ವೇಷಣೆ ಗಾಂಧೀಜಿಯವರ ಸಂದೇಶವಾಗಿತ್ತು. ಅವರ ಸಂದೇಶಗಳು ಸದಾ ಪ್ರಸ್ತುತ ಎಂದು ಹೇಳಿದರು.

ಕರ್ನಾಟಕಕ್ಕೂ ಗಾಂಧೀಜಿಯವರಿಗೂ ಒಂದು ಭಾವನಾತ್ಮಕ ಸಂಬಂಧವಿತ್ತು. ಆ ಕಾರಣಕ್ಕಾಗಿಯೇ ಅವರು 18 ಬಾರಿ ಕರ್ನಾಟಕಕ್ಕೆ ಭೇಟಿ ನೀಡಿದ್ದರು. ರಾಯಚೂರು, ಕೊಪ್ಪಳ, ಬೀದರ್ ಜಿಲ್ಲೆ ಬಿಟ್ಟರೆ ರಾಜ್ಯದ ಉಳಿದ ಎಲ್ಲಾ ಜಿಲ್ಲೆಗಳಿಗೂ ಗಾಂಧೀಜಿಯವರು ಭೇಟಿ ನೀಡಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬಹುರಾಷ್ಟ್ರೀಯ ಕಂಪನಿಗೆ ವಿರೋಧ

ಇದೇ ಸಮಾರಂಭದಲ್ಲಿ ಮಾತನಾಡಿದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ, ದೇಶದಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಕೆಂಪು ಹಾಸಿನ ಸ್ವಾಗತ ನೀಡಲಾಗುತ್ತಿದೆ. ಇದು ಗಾಂಧೀಜಿಯವರ ವಿಚಾರಗಳಿಗೆ ವಿರುದ್ಧವಾದದ್ದು ಎಂದರು.

ಗಾಂಧೀಜಿಯವರು ಸ್ವಾತಂತ್ರ್ಯ ಪೂರ್ವದಲ್ಲೇ ಈಸ್ಟ್ ಇಂಡಿಯಾ ಕಂಪನಿಗೆ ವಿರೋಧ ವ್ಯಕ್ತಪಡಿಸಿದರು. ಈಗ ಬಹುರಾಷ್ಟ್ರೀಯ ಕಂಪನಿಗಳಿಗೆ ತೆರಿಗೆ ವಿನಾಯ್ತಿ ನೀಡಿ ರಾಷ್ಟ್ರಕ್ಕೆ ಕರೆ ತರುತ್ತಿರುವುದು ಸರಿಯಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ಸಚಿವರುಗಳಾದ ಎಚ್.ಕೆ. ಪಾಟೀಲ್, ಆರ್. ರೋಷನ್ ಬೇಗ್, ಉಮಾಶ್ರೀ, ನವದೆಹಲಿಯ ಮಹಾತ್ಮಾಗಾಂಧಿ ರಾಷ್ಟ್ರೀಯ ಸ್ಮಾರಕ ಸಂಗ್ರಹಾಲಯದ ನಿರ್ದೇಶಕ ಅಣ್ಣಾಮಲೈ, ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಹೋ. ಶ್ರೀನಿವಾಸಯ್ಯ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಖ್ಯಾತ ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ. ಎಚ್.ಎಸ್. ದೊರೆಸ್ವಾಮಿ, ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಎಂ.ಆರ್. ರಂಗಶಾಮಯ್ಯ, ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂ.ಡೇ. ಪಿ. ಕೃಷ್ಣ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ. ತಿಮ್ಮೇಗೌಡ, ಕನ್ನಡ ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ: ನಾಗಾಂಬಿಕಾ ದೇವಿ, ವಾರ್ತಾ ಇಲಾಖೆ ನಿರ್ದೇಶಕ ಎನ್.ಆರ್. ವಿಶುಕುಮಾರ್, ವಾರ್ತಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಕೆ. ದಯಾನಂದ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಸಂಜೆವಾಣಿ

ಶುಕ್ರವಾರ
8 ಮೇ 2015



ಮಹಾತ್ಮಗಾಂಧಿ ಬೆಂಗಳೂರಿಗೆ ನೀಡಿದೆ ಮೊದಲ ಭೇಟಿಗೆ ಇಂದು ನೂರರ ಸಂಭ್ರಮ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ನಗರದ ರೈಲ್ವೆ ನಿಲ್ದಾಣದಿಂದ ಗಾಂಧಿ ಭವನದವರೆಗೆ ರ್‍ಯಾಲಿ ನಡೆಸಿದರು.

ರಾಜ್ಯಕ್ಕೆ ಬಾಪು ಮೊದಲ ಹೆಜ್ಜೆ ನೆನಪಿಗೆ ಸಂದೇಶದ ಮೆರವಣಿಗೆ

ಬೆಂಗಳೂರು, ಮೇ ೮- ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರು ಕರ್ನಾಟಕಕ್ಕೆ ಮೊದಲ ಹೆಜ್ಜೆ ಇಟ್ಟು ಇಂದಿಗೆ 100 ವರ್ಷ ತುಂಬಿದ್ದು, ಈ ನೆನಪಿಗಾಗಿ ಇಂದು ನಗರದಲ್ಲಿ ಗಾಂಧಿಜೀಯವರ ಸಂದೇಶ ಸಾರುವ ಮೆರವಣಿಗೆ ನಡೆಯಿತು.

ನಗರದ ರೈಲ್ವೆ ನಿಲ್ದಾಣದಿಂದ ಗಾಂಧಿಭವನದವರೆಗೂ ನಡೆದ ಈ ಜಾಥಾದಲ್ಲಿ ಸ್ವಾತಂತ್ರ್ಯ ಹೋರಾಟಗಾರರೂ ಸೇರಿದಂತೆ ಹಲವು ಗಣ್ಯರು, ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಈ ಜಾಥಾದಲ್ಲಿ ಗಾಂಧೀಜಿಯವರ ಭಾವಚಿತ್ರದ ಜೊತೆ ಎಲ್ಲರೂ ಹೆಜ್ಜೆ ಹಾಕಿದರು. ಜೊತೆಗೆ ಗಾಂಧೀಜಿಯವರ ಸಂದೇಶ ಸಾರುವ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು.

ಗಾಂಧೀಜಿಯವರ ವೇಷಧಾರಿ ವೇಮಗಲ್ ಕೃಷ್ಣ ಈ ಜಾಥಾದಲ್ಲಿ ಎಲ್ಲರ ಗಮನ ಸೆಳೆದರು. ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಹೋ. ಶ್ರೀನಿವಾಸಯ್ಯ, ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವೂ.ಡೇ ಕೃಷ್ಣ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಛಾಯಾಚಿತ್ರ ಪ್ರದರ್ಶನ

ಇದೇ ಸಂದರ್ಭದಲ್ಲಿ ಗಾಂಧಿಭವನದಲ್ಲಿ ಗಾಂಧೀಜಿಯವರ ಬದುಕು, ಜೀವನ ಪರಿಚಯಿಸುವ ಛಾಯಾಚಿತ್ರ ಪ್ರದರ್ಶನವನ್ನು ಆಯೋಜಿಸಲಾಗಿದ್ದು, ವಾರ್ತಾ ಸಚಿವ ರೋಷನ್‌ಬೇಗ್ ಈ ಛಾಯಾಚಿತ್ರ ಪ್ರದರ್ಶನವನ್ನು ಉದ್ಘಾಟಿಸಿದರು.

ಈ ಛಾಯಾಚಿತ್ರ ಪ್ರದರ್ಶನದಲ್ಲಿ ಗಾಂಧೀಜಿಯವರ ಜೀವನ, ಹೋರಾಟವನ್ನು ಪರಿಚಯಿಸುವ ಅಪರೂಪದ ಛಾಯಾಚಿತ್ರಗಳಿವೆ.

ರಾಜ್ಯದಲ್ಲಿ ಗಾಂಧೀಜಿಯವರ ಹೆಜ್ಜೆ ಗುರುತುಗಳು, ಅವರು ಭೇಟಿ ನೀಡಿದ ಸ್ಥಳಗಳು ಬೆಳಗಾಂನ ಕಾಂಗ್ರೆಸ್ ಮೊದಲ ಅಧಿವೇಶನದ ಛಾಯಾಚಿತ್ರಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ.

ಈ ಛಾಯಾಚಿತ್ರ ಪ್ರದರ್ಶನದಲ್ಲಿ 1915ರ ಮೇ 8ರಂದು ಮಹಾತ್ಮಗಾಂಧಿಜೀವರು ತಮ್ಮ ಪತ್ನಿ ಕಸ್ತೂರಿಬಾ ಅವರ ಜೊತೆ ಮೊದಲ ಬಾರಿಗೆ ಬೆಂಗಳೂರಿಗೆ ಆಗಮಿಸಿದ್ದ ಛಾಯಾಚಿತ್ರವು ಎಲ್ಲರ ಗಮನ ಸೆಳೆದಿದೆ.

ಕರ್ನಾಟಕ ಗಾಂಧಿಸ್ಮಾರಕ ನಿಧಿ, ವಾರ್ತಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು ವಿಶ್ವವಿದ್ಯಾಲಯ, ಗಾಂಧಿ ಶಾಂತಿ ಪ್ರತಿಷ್ಠಾನ, ರಾಷ್ಟ್ರೀಯ ಸೇವಾ ಯೋಜನೆ, ಗಾಂಧಿ ಅಧ್ಯಯನ ಕೇಂದ್ರ ಹಾಗೂ ಯುವಜನ ಸಬಲೀಕರಣ ಇಲಾಖೆ ಜಂಟಿಯಾಗಿ ಕರ್ನಾಟಕದಲ್ಲಿ ಗಾಂಧಿ ಮೊದಲ ಹೆಜ್ಜೆ ಶತಮಾನೋತ್ಸವ ಸಂಭ್ರಮವನ್ನು ಆಯೋಜಿಸಿವೆ.

ವಿಜಯ ಕರ್ನಾಟಕ ಗುರುವಾರ,7 ಮೇ 2015

'ಜೀವನಕಲೆ ಭಗವದ್ಗೀತೆ' ಕೃತಿ ಬಿಡುಗಡೆ ಸಮಾರಂಭದಲ್ಲಿ ಅಭಿಮತ

'ಶಿಸ್ತಿನ ಜೀವನ ಕಲಿಸುವ ಭಗವದ್ಗೀತೆ'

■ ವಿಕ ಸುದ್ದಿಲೋಕ ಬೆಂಗಳೂರು

ವ್ಯಕ್ತಿ ಶಿಸ್ತುಬದ್ಧ ಜೀವನ ನಡೆಸುವುದು ಹೇಗೆ ಮತ್ತು ಮನುಷ್ಯ ಸಂಬಂಧಗಳು ಹೇಗಿರಬೇಕೆಂಬುದನ್ನು ಭಗವದ್ಗೀತೆ ಸಮಾಜಕ್ಕೆ ತಿಳಿಸಿದೆ ಎಂದು ಶೇಷಾದ್ರಿಪುರ ಶಿಕ್ಷಣ ದತ್ತಿ ಕಾರ್ಯದರ್ಶಿ ವೂಡೇ ಪಿ ಕೃಷ್ಣ ಅಭಿಪ್ರಾಯಪಟ್ಟರು.

ಭಾರತೀಯ ವಿದ್ಯಾಭವನದ ಇಎಸ್‌ವಿ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಎಸ್ ವಿ ಮಂಜುನಾಥ್ ಅವರ 'ಜೀವನಕಲೆ ಭಗವದ್ಗೀತೆ' ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

''ನಮ್ಮನ್ನು ನಾವು ಹೇಗೆ ನಿರ್ವಹಿಸಿಕೊಳ್ಳಬೇಕು ಮತ್ತು ನಮ್ಮಲ್ಲಿರುವ ದ್ವಂದ್ವಗಳನ್ನು ಹೇಗೆ ಎದುರಿಸಬೇಕು ಇತ್ಯಾದಿ ಗುಣಗಳನ್ನು ಭಗವದ್ಗೀತೆ ಕಲಿಸಿದೆ. 'ಜೀವನಕಲೆ ಭಗವದ್ಗೀತೆ' ಕೃತಿಯು ತಾತ್ವಿಕ ಮತ್ತು ಪಾರಮಾರ್ಥಿಕ ಶಿಕ್ಷಣಕ್ಕೆ ಬೆಳಕು ನೀಡಲಿದೆ,'' ಎಂದು ನುಡಿದರು.

ಪ್ರಾಧ್ಯಾಪಕ ಮಲ್ಲೇಪುರಂ ಜಿ ವೆಂಕಟೇಶ್, ''ರಾಮಾಯಣ ಹಾಗೂ ಮಹಾಭಾರತ ಮತ್ತು ಭಗವದ್ಗೀತೆ ಬಗ್ಗೆ ಕೆಟ್ಟದಾಗಿ ಮಾತನಾಡುವವರನ್ನು ಮೂರ್ಖರು ಅಥವಾ ಮಾನಸಿಕ ದೋಷ ಉಳ್ಳವರು ಎಂದು ಕರೆಯಬೇಕು. ಆದರೆ ಇವುಗಳ ಬಗ್ಗೆ ಟೀಕೆ ಮಾಡುವವರು ಪ್ರಜ್ಞಾವಂತರು. ಅವರು ಏಕೆ ಹೀಗೆ ಟೀಕೆ ಮಾಡುತ್ತಿದ್ದಾರೆಂಬುದು ಗೊತ್ತಾಗುತ್ತಿಲ್ಲ. ಇವರನ್ನು ಮೂದಲಿಸಬೇಕು ಎನಿಸುತ್ತದೆ. ಆದರೆ ಈ ಮೂರ್ಖರ ಬಗ್ಗೆ ಮಾತನಾಡುವುದಕ್ಕಿಂತ ಮೌನವಾಗಿರುವುದೇ ವಾಸಿ,'' ಎಂದರು.

ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್ ಎನ್ ಸುರೇಶ್, ಲೇಖಕ ಎಸ್ ವಿ ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.



ಭಾರತೀಯ ವಿದ್ಯಾಭವನದ ಇಎಸ್‌ವಿ ಸಭಾಂಗಣದಲ್ಲಿ ಬುಧವಾರ ನಡೆದ ಎಸ್.ವಿ. ಮಂಜುನಾಥ್ ರಚಿತ 'ಜೀವನಕಲೆ ಭಗವದ್ಗೀತೆ 'ಕೃತಿ ಬಿಡುಗಡೆ ಸಮಾರಂಭದಲ್ಲಿ ಮಲ್ಲೇಪುರಂ ಜಿ. ವೆಂಕಟೇಶ್, ಎಚ್.ಎನ್. ಸುರೇಶ್, ಎಸ್.ವಿ. ಮಂಜುನಾಥ್ ಮತ್ತು ವೂಡೇ ಪಿ. ಕೃಷ್ಣ ಉಪಸ್ಥಿತರಿದ್ದರು.

ವಿಜಯ ಕರ್ನಾಟಕ ಬುಧವಾರ,6 ಮೇ 2015

'ಶಿಕ್ಷಣದಲ್ಲಿ ಮೌಲ್ಯವನ್ನು ಕಲಿಸುವ ಅಗತ್ಯವಿದೆ'

■ ವಿಕ ಸುದ್ದಿಲೋಕ ಬೆಂಗಳೂರು

ಶಿಕ್ಷಣದಲ್ಲಿ ಮೌಲ್ಯವನ್ನು ಕಲಿಸುವ ಅಗತ್ಯವಿದೆ ಎಂದು ಮಾಜಿ ರಾಜ್ಯಪಾಲ ನ್ಯಾ. ಡಾ. ಎಂ.ರಾಮಾ ಜೋಯಿಸ್ ಅಭಿಪ್ರಾಯಪಟ್ಟಿದ್ದಾರೆ.

ಪಟೇಲ್ ಪಬ್ಲಿಕೇಷನ್ಸ್, ಮೇಘಾ ಪಬ್ಲಿಕೇಷನ್ಸ್ ಮತ್ತು ಸಿವಿಜಿ ಬುಕ್ಸ್ ಸಹಯೋಗದಲ್ಲಿ ನಗರದ ಎಡಿಎ ರಂಗಮಂದಿರದಲ್ಲಿ ಆಯೋಜಿಸಿದ್ದ ಡಾ. ವೂಡೇ ಪಿ. ಕೃಷ್ಣ ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

''ಇಂದು ಹೆಚ್ಚಿನ ಸಂಖ್ಯೆಯ ಜನರು ವೈದ್ಯ ಹಾಗೂ ಎಂಜಿನಿಯರಿಂಗ್ ಕ್ಷೇತ್ರದತ್ತ ಒಲವು ತೋರುತ್ತಿದ್ದಾರೆ. ಅದೇ ರೀತಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲೂ ಕೇವಲ ಉದ್ಯೋಗಾಧಾರಿತ ಶಿಕ್ಷಣವನ್ನಷ್ಟೇ ನೀಡಲಾಗುತ್ತಿದೆ. ಉತ್ತಮ ಸಮಾಜ ರೂಪಿಸುವ ಬಹುದೊಡ್ಡ ಜವಾಬ್ದಾರಿ ಶಿಕ್ಷಣ ಕ್ಷೇತ್ರದ ಮೇಲಿದೆ. ಆದರೆ ಇಂತಹ ಸಂದರ್ಭದಲ್ಲೇ ಶಿಕ್ಷಣ ತಜ್ಞರ ಕೊರತೆ ಕಾಡುತ್ತಿದೆ,'' ಎಂದ ಅವರು, ''ಶಿಕ್ಷಣ ಕೇವಲ ಅಕ್ಷರ ಜ್ಞಾನ ನೀಡಿದರೆ ಸಾಲದು. ಮನುಷ್ಯನನ್ನು ಮಾನವನನ್ನಾಗಿ ರೂಪಿಸುವ ಮೌಲ್ಯಗಳನ್ನೂ ಬಿತ್ತಬೇಕು,'' ಎಂದರು.

''ಡಾ. ವೂಡೇ ಪಿ. ಕೃಷ್ಣ ಅವರು ಸಮಾಜ ಸೇವಕರಾಗಿ, ಶಿಕ್ಷಣ ತಜ್ಞರಾಗಿ, ಆರ್ಥಿಕ ವಿಮರ್ಶಕರಾಗಿ, ಎಲ್ಲದಕ್ಕಿಂತಲೂ ಮಿಗಿಲಾಗಿ ಉತ್ತಮ ಮನುಷ್ಯನಾಗಿ ಸಮಾಜದಲ್ಲಿ ಮಾನ್ಯತೆಗಳಿಸಿದ್ದಾರೆ. ವಿದ್ಯಾದಾನದ ಜತೆಗೆ ಇತರೆ ಕಲವು ಸಾಮಾಜಿಕ ಪ್ರವೃತ್ತಿಯನ್ನು ಮೈಗೂಡಿಸಿ ಕೊಂಡಿದ್ದಾರೆ,'' ಎಂದು ಬಣ್ಣಿಸಿದರು.

''ನಮ್ಮ ಸರಕಾರ ಶಿಕ್ಷಣದಲ್ಲಿ ಮೊದಲಿನಿಂದಲೂ ಅಸಡ್ಡೆ ತೋರುತ್ತಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಶಿಕ್ಷಣ ಕಡ್ಡಾಯವಾಗಿರಲಿಲ್ಲ, ಸುಪ್ರೀಂ ಕೋರ್ಟ್ 1994ರಲ್ಲಿ ಶಿಕ್ಷಣ ಮೂಲಭೂತ ಹಕ್ಕು ಎಂದು ಹೇಳಿತು. ಆದರೆ 2010ರಲ್ಲಿ ಅದಕ್ಕೆ ತಿದ್ದುಪಡಿ ತರಲಾಯಿತು. ಇದು ಶಿಕ್ಷಣ ಕುರಿತು ಸರಕಾರಕ್ಕೆ ಇರುವ ನಿರ್ಲಕ್ಷ್ಯವನ್ನು ತೋರಿಸುತ್ತದೆ,'' ಎಂದು ಅವರು ಬೇಸರಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಹೊ. ಶ್ರೀನಿವಾಸಯ್ಯ ಮಾತನಾಡಿ, ''ಇಂದು ಎಲ್ಲರೂ ಅಕ್ಷರವಂತರಾಗುತ್ತಿದ್ದಾರೆ. ಆದರೆ ಬದುಕುವುದನ್ನು ಕಲಿಯುತ್ತಿಲ್ಲ, ಬಹಳಷ್ಟು ಮಂದಿ ಲಕ್ಷಾಂತರ ಹಣ ಗಳಿಸುತ್ತಿದ್ದಾರೆ. ಆದರೆ ಹೇಗೆ ಬದುಕಬೇಕು ಎಂಬುದನ್ನು ತಿಳಿಯದೆ ಜೀವನವನ್ನೇ ನಾಶಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಶಿಕ್ಷಣದಲ್ಲಿ ಹಣ ಸಂಪಾದನೆಯೇ ಅಲ್ಲದೆ, ಬದುಕಿನ ಕುರಿತು ಮೌಲ್ಯಯುತ ಶಿಕ್ಷಣ ನೀಡಬೇಕು,'' ಎಂದರು. ಕಾರ್ಯಕ್ರಮದಲ್ಲಿ ಡಾ. ವೂಡೇ ಪಿ. ಕೃಷ್ಣ ಅವರ 'ಬಿಯಾಂಡ್ ದಿ ಬೌಂಡರಿ', 'ಕೃಷ್ಣಸಿರಿ' (ಡಾ. ವೂಡೇ ಪಿ.ಕೃಷ್ಣ 50ರ ಹೊತ್ತಿಗೆ), 'ನದಿಯಂತೆ ನೆನಪು' (ಆತ್ಮಕತೆಯ ಪುಟಗಳು) ಮತ್ತು 'ಬೆಳ್ಳಕ್ಕಿ ಸಾಲು' (ವ್ಯಕ್ತಿ ಚಿತ್ರಗಳು) ಕೃತಿಗಳ ಲೋಕಾರ್ಪಣೆ ಮಾಡಲಾಯಿತು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ವಿಮರ್ಶಕ ಪ್ರೊ. ಶಿವರಾಮಯ್ಯ, ಹಿರಿಯ ಪತ್ರಕರ್ತ ಗುಡಿಹಳ್ಳಿ ನಾಗರಾಜು, ಸವಿತಾ ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.



ನಗರದ ಎಡಿಎ ರಂಗಮಂದಿರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವೂಡೇ ಪಿ.ಕೃಷ್ಣ ಅವರ ಪುಸ್ತಕಗಳ ಲೋಕಾರ್ಪಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಹೊ. ಶ್ರೀನಿವಾಸಯ್ಯ, ನಿವೃತ್ತ ನ್ಯಾ. ಎಂ. ರಾಮಾ ಜೋಯಿಸ್ ಮತ್ತಿತರರು ಇದ್ದರು.

ವಿಜಯವಾಣಿ ಬುಧವಾರ,6 ಮೇ 2015

ಶಿಕ್ಷಣ ಪದ್ಧತಿಯಲ್ಲಿ ನೈತಿಕತೆ, ಚಾರಿತ್ರ್ಯ ಒಲವಿರಲಿ



ಡಾ. ವೂಡೇ ಕೃಷ್ಣ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ನ್ಯಾ. ರಾಮಾ ಜೋಯಿಸ್, ಡಾ. ಹೊ. ಶ್ರೀನಿವಾಸಯ್ಯ, ಪತ್ರಕರ್ತ ಗುಡಿಹಳ್ಳಿ ನಾಗರಾಜ್, ವಿಮರ್ಶಕ ಪ್ರೊ.ಶಿವರಾಮಯ್ಯ, ವೂಡೇ ಪಿ. ಕೃಷ್ಣ ದಂಪತಿ, ಇತರರು ಭಾಗವಹಿಸಿದ್ದರು.

ಹಣಗಳಿಕೆಗಾಗಿ ಪದವಿ

ಇಂದಿನ ಮಾಹಿತಿ ಆಧಾರಿತ ಶಿಕ್ಷಣ ಪದ್ಧತಿಯಲ್ಲಿ ಮಾನವೀಯ ಮೌಲ್ಯ ಮರೆಯಾಗಿದೆ. ವೈದ್ಯ ಹಾಗೂ ಇಂಜಿನಿಯರಿಂಗ್ ಪದವಿ ಪಡೆಯುವುದು ಹಣ ಗಳಿಕೆಗಾಗಿ ಎಂಬಂತಾಗಿದೆ. ಉತ್ತಮ ವೈದ್ಯ, ಶ್ರೇಷ್ಠ ಇಂಜಿನಿಯರ್ ಅಥವಾ ತತ್ವಜ್ಞಾನಿಯಾದರೇ ಸಾಲದು, ವೈಚಾರಿಕ ನೆಲೆ ಹಾಗೂ ಮಾನವೀಯ ಮೌಲ್ಯಗಳಿರಬೇಕು. ಶಿಕ್ಷಣದ ಮೂಲಕ ಮಕ್ಕಳಲ್ಲಿ ನೈತಿಕ ಸ್ಥೈರ್ಯ ತುಂಬಬೇಕು ಎಂದು ನ್ಯಾಯಮೂರ್ತಿ ರಾಮಾ ಜೋಯಿಸ್ ಆಶಯ ವ್ಯಕ್ತಪಡಿಸಿದರು.

ವೂಡೇ ಕುರಿತ ಕೃತಿ ಲೋಕಾರ್ಪಣೆಯಲ್ಲಿ ನ್ಯಾ. ರಾಮಾ ಜೋಯಿಸ್

ಶಿಕ್ಷಣ ಪದ್ಧತಿಯಲ್ಲಿ ಮಾನವೀಯತೆ, ನೈತಿಕತೆ ಹಾಗೂ ಚಾರಿತ್ರ್ಯ ತುಂಬುವ ಕೆಲಸ ಆಗಬೇಕಿದೆ ಎಂದು ನ್ಯಾಯಮೂರ್ತಿ ಡಾ. ಎಂ. ರಾಮಾ ಜೋಯಿಸ್ ಹೇಳಿದ್ದಾರೆ.

ಪಟೇಲ್ ಪಬ್ಲಿಕೇಷನ್, ಮೇಘಾ ಪಬ್ಲಿಕೇಷನ್ಸ್ ಹಾಗೂ ಸಿವಿಜಿ ಬುಕ್ಸ್ ಹೊರತಂದಿರುವ ಡಾ. ವೂಡೇ ಪಿ. ಕೃಷ್ಣ ಅವರ ಕುರಿತ 'ಕೃಷ್ಣಸಿರಿ', 'ಬೆಳ್ಳಕ್ಕಿ ಸಾಲು','ಬಿಯಾಂಡ್ ದಿ ಬೌಂಡರಿಸ್' ಹಾಗೂ 'ನದಿಯಂತೆ ನೆನಪು' ಪುಸ್ತಕ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಪ್ರತಿಯೊಬ್ಬರು ಗಳಿಸಿದ ಜ್ಞಾನವನ್ನು ಬಡ್ಡಿ ಸಮೇತವಾಗಿ ಮುಂದಿನ ಪೀಳಿಗೆಗೆ ಹಂಚುವ ಪ್ರಯತ್ನ ಮಾಡಬೇಕು. ಮನುಷ್ಯನಾಗಿ ಹುಟ್ಟಿದ ಮೇಲೆ ದೇವರ ಋಣ, ಪಾಲಕರ ಋಣ, ಗುರುಗಳ ಋಣ ಹಾಗೂ ಮನುಷ್ಯ ಋಣವನ್ನು ತೀರಿಸಲೇಬೇಕು ಎಂದರು.

ಡಾ. ವೂಡೇ ಪಿ. ಕೃಷ್ಣ ಅವರು ಸಮಾಜ ಸೇವಕರಾಗಿ, ಶಿಕ್ಷಣ ತಜ್ಞನಾಗಿ, ಆರ್ಥಿಕ ವಿಮರ್ಶಕನಾಗಿ, ಎಲ್ಲದಕ್ಕಿಂತಲೂ ಮಿಗಿಲಾಗಿ ಉತ್ತಮ ಮನುಷ್ಯನಾಗಿ ಸಮಾಜದಲ್ಲಿ ಮಾನ್ಯತೆ ಗಳಿಸಿಕೊಂಡಿದ್ದಾರೆ. ವಿದ್ಯಾದಾನದ ಜತೆಗೆ ಸಾಮಾಜಿಕ ಪ್ರವೃತ್ತಿಯನ್ನು ಅಳವಡಿಸಿಕೊಂಡಿದ್ದಾರೆ. ಸಾಮಾಜಿಕ ಸೇವೆಯಲ್ಲಿ ಮನುಷ್ಯ ಋಣ ತೀರಿಸುವ ಪ್ರಯತ್ನ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳಲ್ಲಿ ಚಾರಿತ್ರ್ಯ ನಿರ್ಮಾಣದ ಸೇವೆ ಮಾಡುತ್ತಿದ್ದಾರೆ ಎಂದರು.

ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್ ಮಾತನಾಡಿ, ಪ್ರಜ್ಞೆ, ಕಾಲ, ಧರ್ಮ, ಸ್ತುತಿ, ಪರಾಕ್ರಮ, ಮೌನ, ಧ್ಯಾನ ಹಾಗೂ ಕೃತಜ್ಞ ಗುಣ ಹೊಂದಿರುವವರು ಜೀವನದಲ್ಲಿ ಶ್ರೇಷ್ಠ ಸಾಧನೆ ಮಾಡುತ್ತಾರೆ. ಆ ಸಾಲಿಗೆ ವೂಡೇ ಪಿ. ಕೃಷ್ಣ ಸೇರುತ್ತಾರೆ. ಸಾಧನೆಯ ಶಿಖರ ಏರುವಾಗ ಇನ್ನೊಬ್ಬರನ್ನು ದಮನ ಮಾಡುತ್ತೇವೆ, ಅಧಿಕಾರ ಸಿಕ್ಕಾಗ ಸ್ವಜಾತಿಯವರಿಗೆ ಆದ್ಯತೆ ನೀಡುತ್ತೇವೆ. ಆದರೆ, ವೂಡೇ ಪಿ. ಕೃಷ್ಣ ಅವರು ಇದ್ಯಾವುದಕ್ಕೂ ಮಾನ್ಯತೆ ನೀಡಿಲ್ಲ. ಅಷ್ಟಗುಣ ಹಾಗೂ ಚತುರ್ಮುಖ ವ್ಯಕ್ತಿತ್ವ ಹೊಂದಿದ್ದಾರೆ ಎಂದರು.

ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ಡಾ. ಹೊ. ಶ್ರೀನಿವಾಸಯ್ಯ, ಪತ್ರಕರ್ತ ಗುಡಿಹಳ್ಳಿ ನಾಗರಾಜ್, ವಿಮರ್ಶಕ ಪ್ರೊ.ಶಿವರಾಮಯ್ಯ, ವೂಡೇ ಪಿ. ಕೃಷ್ಣ ದಂಪತಿ ಉಪಸ್ಥಿತರಿದ್ದರು.

ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮೂರು ದಶಕಗಳಿಂದಲೂ ಸಕ್ರಿಯವಾಗಿ ಅನೂಚಾನವಾಗಿ ಕಾರ್ಯನಿರತರಾಗಿರುವ ಡಾ. ವೊಡೇ ಪಿ.ಕೃಷ್ಣ ಅವರು ಮೂಡಿಸಿರುವ ಹೆಜ್ಜೆಗುರುತುಗಳು, ಪೊರೆದ ಸಂಸ್ಥೆಗಳು ಹಲವು. ಯುವಕರಿಗೆ ಅವರೊಂದು ಆದರ್ಶವೆಂಬ ಮಾತು ಅಕ್ಷರಶಃ ಸತ್ಯ.

ಸೇವೆಗೆ ಮಾದರಿ ನಡೆತೆಗೆ ಹೊನ್ನಗರಿ

ಎಂ. ಕೃಷ್ಣಮೂರ್ತಿ, 9740074555

ನಾನು ಮೊದಲು ಕೃಷ್ಣ ಅವರನ್ನು ನೋಡಿದ್ದು ಇಂದಿಗೆ ಹದಿನಾರು–ಹದಿನೇಳು ವರ್ಷಗಳ ಹಿಂದೆ. ನಾನು ಆಗ ಲಕ್ಷ್ಮಿ ಮುದ್ರಣಾಲಯದ ಸಹಾಯಕನಾಗಿ ಕೆಲಸ ಮಾಡುತ್ತಿದ್ದೆ. ರೆಡ್‌ಕ್ರಾಸ್ ಸೊಸೈಟಿಯ ವಾರ್ಷಿಕ ವರದಿ ನಮ್ಮ ಮುದ್ರಣಾಲಯದಲ್ಲಿ ಮುದ್ರಣವಾಗಿತ್ತು. ಅದನ್ನು ಸೊಸೈಟಿಗೆ ತಲುಪಿಸಲು ಆಟೋ ಜೊತೆಯಲ್ಲಿ ನಾನು ಹೋಗಿದ್ದೆ. ಪುಸ್ತಕದ ಕಟ್ಟುಗಳನ್ನು ಕಛೇರಿಯಲ್ಲಿ ಇಳಿಸುತ್ತಿರುವ ಸಂದರ್ಭದಲ್ಲಿ ಅಲ್ಲಿಗೆ ಬಂದ ವೊಡೇ ಪಿ. ಕೃಷ್ಣ ಅವರು ಯಾವುದೇ ಹಮ್ಮು–ಬಿಮ್ಮಿಲ್ಲದೆ ತುಂಬಾ ಆಪ್ಯಾಯಮಾನವಾಗಿ, ಮೃದು–ಮಧುರವಾಗಿ, 'ಏನು ಇದು' ಎಂದು ಕೇಳಿದರು. ನಾನು ವಿವರಗಳನ್ನು ಕೊಟ್ಟ ಮೇಲೆ ಮತ್ತೆ ನಗುಮೊಗದೊಂದಿಗೆ ಅಲ್ಲಿ ಯಾವುದೋ ಕಾರ್ಯಕ್ರಮಕ್ಕೆ ವ್ಯವಸ್ಥೆಯಾಗಿದ್ದ ಕಾಫಿ, ತಿಂಡಿಯ ಕಡೆ ಕೈ ತೋರಿಸಿ "ಮೊದಲು ಹೋಗಿ ತಿಂಡಿ ತಿಂದು, ನಂತರ ಕೆಲಸವನ್ನು ಮುಂದುವರಿಸಿ" ಎಂದು ನಮ್ಮನ್ನು ಅಲ್ಲಿನ ಕೌಂಟರ್ ಬಳಿಗೆ ಕರೆದೊಯ್ದು ಅಲ್ಲಿರುವವರಿಗೆ ಕಾಫಿ, ತಿಂಡಿ ಕೊಡಲು ಹೇಳಿ ಹೊರಟುಹೋದರು. ಅದಾದ ನಂತರ ಅವರನ್ನು ಅನೇಕ ಸಭೆ–ಸಮಾರಂಭಗಳಲ್ಲಿ, ದಿನಪತ್ರಿಕೆಗಳಲ್ಲಿ ನೋಡುತ್ತಿದ್ದೆ. ಹದಿನಾರು ವರ್ಷಗಳ ನಂತರ ನಾನು ಹೋಗಿದ್ದ ಪುಸ್ತಕ ಬಿಡುಗಡೆ ಸಮಾರಂಭವೊಂದರಲ್ಲಿ ಅವರೇ ಪುಸ್ತಕವನ್ನು ಬಿಡುಗಡೆ ಮಾಡಿದ್ದರು. ಡಾ. ಮೀರಾಸಾಬಿಹಳ್ಳಿ ಶಿವಣ್ಣನವರು 'ಈ ಪುಸ್ತಕದ ಮುದ್ರಕರು ಇವರೇ' ಎಂದು ಕೃಷ್ಣ ಅವರಿಗೆ ಪರಿಚಯಿಸಿಕೊಟ್ಟರು. ೧೬ ವರ್ಷಗಳ ಹಿಂದೆ ಒಬ್ಬ ಸಾಮಾನ್ಯ ಕೆಲಸಗಾರನನ್ನು ಮಾತಾಡಿಸಿದ ರೀತಿಯಲ್ಲೇ ಅವರು ನನ್ನನ್ನು ಆಗಲೂ ಮಾತನಾಡಿಸಿ ನಗುಮೊಗದಲ್ಲಿ ಬೆನ್ನುತಟ್ಟಿ ಪ್ರೋತ್ಸಾಹಿಸಿದರು.

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ ಸ್ವಾತಂತ್ರ್ಯ ಹೋರಾಟಗಾರರ ಅತ್ಯಂತ ಶ್ರೀಮಂತ ಕುಟುಂಬದಲ್ಲಿ ಜನಿಸಿದ ವೊಡೇ.ಪಿ. ಕೃಷ್ಣ ಅವರು ಕನ್ನಡ ಸಾಹಿತ್ಯ ಕ್ಷೇತ್ರದ ಮಹಾಚೇತನವಾದ ಶ್ರೀ ಕುವೆಂಪು, ಅಧ್ಯಾತ್ಮ ಕ್ಷೇತ್ರದ ಅವಧೂತರಾದ ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಗಾಂಧೀಜಿ ಅವರ ತತ್ವ ಚಿಂತನೆಗಳಿಂದ ಪ್ರಭಾವಿತರಾಗಿ ಶಿಕ್ಷಣ, ಸಮಾಜಸೇವೆಯಲ್ಲಿ ನಿರತರಾಗಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ವಿದ್ಯಾದಾನ ಹಾಗೂ ಅನ್ನದಾನವೆಂಬ ದ್ವಿವಿಧ ದಾಸೋಹದ ಜೊತೆಗೆ ರಕ್ತದಾನದಂತಹ ಶ್ರೇಷ್ಠ ದಾನದಲ್ಲಿ ಶ್ರಮಿಸುತ್ತ ಯುವಕರ ಪಾಲಿನ ಆಶಾಕಿರಣವಾಗಿದ್ದಾರೆ. ಹಲವಾರು ಪದವಿಗಳನ್ನು ಗಳಿಸಿದ್ದರೂ ಉದ್ಯೋಗ ಮತ್ತು ಹಣದ ಬೆನ್ನು ಹತ್ತದೆ ಹಲವಾರು ಶೈಕ್ಷಣಿಕ ಮತ್ತು ಸಾಮಾಜಿಕ ಸೇವಾ ಸಂಘ ಸಂಸ್ಥೆಗಳಲ್ಲಿ ಕಿರುವಯಸ್ಸಿನಲ್ಲಿಯೇ ಯಾವುದೇ ಫಲಾಪೇಕ್ಷೆಯಿಲ್ಲದೆ ನಿಸ್ವಾರ್ಥ ಮನೋಭಾವದಿಂದಲೂ ಪರಹಿತದೃಷ್ಟಿಯಿಂದಲೂ ತೊಡಗಿಸಿಕೊಂಡಿರುವ ಅಪರೂಪದ ವ್ಯಕ್ತಿ ಅವರು. ಒಬ್ಬ ವ್ಯಕ್ತಿ ಸಕ್ರಿಯವಾಗಿ ಹತ್ತಾರು ಸಂಸ್ಥೆಗಳಲ್ಲಿ ದುಡಿಯಲು ಸಾಧ್ಯವೆನ್ನುವುದಕ್ಕೆ ಇವರೇ ಉದಾಹರಣೆ. ಬಿಡುವಿಲ್ಲ ಎಂದು ಹೇಳುತ್ತ ಯಾವ ಕೆಲಸವನ್ನೂ ಸಮರ್ಪಕವಾಗಿ, ಶಿಸ್ತುಬದ್ಧವಾಗಿ ಮಾಡದವರ ನಡುವೆ, ತಲೆತುಂಬ ಕನಸುಗಳನ್ನೂ, ಮೈತುಂಬ ಕೆಲಸಗಳನ್ನೂ ಹೊತ್ತುಕೊಂಡು, ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ ಪಡೆದು 'ಬಹುಜನ ಸಮಾಜ ಹೊರತರುವ' ಇಂಗ್ಲಿಷ್ ಪತ್ರಿಕೆಯ ಸಂಪಾದಕರಾಗಿ, ಕುಂದುಕೊರತೆಗಳನ್ನು ಪ್ರತಿಬಿಂಬಿಸುವ ಪತ್ರಗಳನ್ನು ಪತ್ರಿಕೆಗಳಿಗೆ ಬರೆಯುತ್ತಲೇ ಇರುವ ಪತ್ರಕರ್ತರಿವರು.

ಇಂಜಿನಿಯರಿಂಗ್, ಚಾರ್ಟರ್ಡ್ ಅಕೌಂಟೆಂಟ್, ಎಲ್.ಎಲ್.ಬಿ. ಮತ್ತು ಹಲವು ಪದವಿಗಳನ್ನು ಹೊಂದಿದ್ದರೂ ವಾಕ್ಪಟುಗಳಾದ ಸಾಹಿತಿಗಳಿಗೆ ಕಮ್ಮಿ ಇಲ್ಲವೆನ್ನುವ ರೀತಿಯಲ್ಲಿ ಸಭೆ ಸಮಾರಂಭಗಳಲ್ಲಿ ನಿರರ್ಗಳವಾಗಿ, ಎದುರಿಗೆ ಇದ್ದವರು ಮಂತ್ರಮುಗ್ಧರಾಗುವಂತೆ ಭಾಷಣ ಮಾಡುವ ಹೆಗ್ಗಳಿಕೆ ಕೃಷ್ಣ ಅವರದ್ದು. ಅವರು ಭಾಷಣದಲ್ಲಿ ಹೇಳಿದ ಒಂದು ಮಾತು "ಹೊಸತನ್ನು ತನ್ನಿ, ಇಲ್ಲವೇ ನಾಶವಾಗಿ"– ಈ ನುಡಿಗಟ್ಟು ಸ್ವಾತಂತ್ರ್ಯಪೂರ್ವದಲ್ಲಿ ಸರ್ ಎಂ.ವಿಶ್ವೇಶ್ವರಯ್ಯನವರು ಹೇಳಿದ "ಕೈಗಾರಿಕೆಯನ್ನು ತನ್ನಿ, ಇಲ್ಲ ನಾಶವಾಗಿ" ಎನ್ನುವ ನುಡಿಗಟ್ಟನ್ನು ನೆನಪಿಸುವಂತಿತ್ತು.



ಯುವಮನಸ್ಸುಗಳಿಗೆ ಪ್ರೇರಣೆ ನೀಡುತ್ತ, ಸದಾ ಪ್ರೋತ್ಸಾಹದಾಯಕ ಮಾತುಗಳನ್ನು ಆಡುತ್ತ ಅವರಲ್ಲಿ ಉನ್ನತವಾದುದನ್ನು ಸಾಧಿಸುವ ಮಹತ್ವಾಕಾಂಕ್ಷೆ ಮೊಳೆಯುವಂ ಸಲಹೆ–ಸಹಕಾರಗಳನ್ನು ನೀಡುವ, ಅಸ್ಖಲಿತತೆಯಿಂದ ಕೂಡಿರುವ ಅವರ ಭಾಷಣಗಳ ವೈವಿಧ್ಯವೆನಿಸುವ ವಿಷಯಗಳ ಪ್ರಸ್ತಾಪ, ಅಂತಿಮವಾಗಿ ತಲುಪುವ ನಿಲುವು ಯುವಕರನ್ನು ಆಕರ್ಷಿಸುತ್ತವೆ. ಬೆಂಗಳೂರಿನ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದಾಗಲೂ ಕಾಲೇಜಿನಲ್ಲಿ ಕನ್ನಡ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿ, ಗೋಕಾಕ್ ಚಳುವಳಿಯಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿ ಸಂಘಟನೆಯ ನೇತೃತ್ವ ವಹಿಸಿ ಧರಣಿ ಕೂತು ಸೆಕ್ಷನ್ ೧೪೪ ಜಾರಿಯಲ್ಲಿದ್ದುದರಿಂದ ದಸ್ತಗಿರಿ ಒಳಗಾಗಿದ್ದು ಅವರ ಕನ್ನಡಪರ ಕಾಳಜಿ, ಪ್ರೀತಿ, ಅಭಿಮಾನಕ್ಕೆ ಸಾಕ್ಷಿ.

ರಾಮಕೃಷ್ಣ ಆಶ್ರಮದ ವಿದ್ಯಾರ್ಥಿಯಾಗಿದ್ದಾಗ ಆಂಧ್ರಪ್ರದೇಶದಲ್ಲಿ ಚಂಡಮಾರುತ ಜೋರಾಗಿ ಅಪ್ಪಳಿಸಿ ಸಾವಿರಾರು ಮಂದಿ ಸಾವಿಗೀಡಾ ಸಂದರ್ಭದಲ್ಲಿ ವಿದ್ಯಾರ್ಥಿ ಸಂಘಟಕರೊಡಗೂಡಿ ಬೆಂಗಳೂರು ಸೆಂಟ್ರ ಕಾಲೇಜ್ ಮೈದಾನದಲ್ಲಿ 'ರಾಮಲೀಲಾ' ಎಂಬ ನಾಟಕವನ್ನು ಆಡಿ ಅದರಿಂದ ಬಂದ ಹಣವನ್ನು ಸಂತ್ರಸ್ತರಿಗೆ ದೇಣಿಗೆರೂಪದಲ್ಲಿ ನೀಡಿದ್ದು ಅವರ ಮಾನವೀಯ ಕಾಳಜಿಯ ದ್ಯೋತಕ. ಈ ನಾಟಕದಲ್ಲಿನ ಅವರ 'ರಾವಣನ' ಪಾತ್ರಾಭಿನಯ ಮೆಚ್ಚಿ ಪತ್ರಿಕೆಗಳಲ್ಲಿ ಲೇಖನ ಬಂದಿದ್ದು ವಿಶೇಷ. ಮಾತಿನಲ್ಲಿ ಸರಳತೆ ಮತ್ತು ಸಹಜತೆ, ಸಮಯೋಚಿತವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ, ಸಂಘಟನಾ ಚಾತುರ್ಯ, ಯಾವುದೇ ಸಂದರ್ಭದಲ್ಲಿ ತಾಳ್ಮೆಗೆಡದೇ ಇರುವ ಆರೋಗ್ಯಕರ ಮಾನಸಿಕ ಸಮತೋಲನ, ಕ್ರಿಯಾಶೀಲತೆ, ಸಮಯಪಾಲನೆ, ಶಿಸ್ತು, ಅಚ್ಚುಕಟ್ಟುತನ, ದಕ್ಷತೆ, ಮತ್ತಷ್ಟು ಸಾಧಿಸಬೇಕೆಂಬ ಹಂಬಲ, ಸಾಧಿಸಬಲ್ಲೆನೆಂ ಆತ್ಮವಿಶ್ವಾಸ, ಒಂದು ಅಗಳು ಅನ್ನವನ್ನು ಕೂಡ ಹಾಳು ಮಾಡಬಾರದೆನ್ನುವ ಎಚ್ಚರ– ಈ ಎಲ್ಲಾ ಗುಣಗಳನ್ನು ಮೈಗೂಡಿಸಿಕೊಂಡಿರುವ ಆದರ್ಶ ವ್ಯಕ್ತಿಗಳಾದ ವೊಡೇ ಪಿ. ಕೃಷ್ಣ ಅವರು ನಮ್ಮಂಥ ಯುವಕರಿಗೆ ನಿಜಕ್ಕೂ ಆದರ್ಶಪ್ರಾಯರು ಎಂಬುದರಲ್ಲಿ ಎರಡು ಮಾತಿಲ್ಲ. ■

ಈ ಸಂಜೆ

ಬುಧವಾರ, 22 ಏಪ್ರಿಲ್, 2015



ಶೇಷಾದ್ರಿಪುರಂ ಕಾನೂನು ಕಾಲೇಜಿನಲ್ಲಿಂದು ಹಮ್ಮಿಕೊಂಡಿದ್ದ ಭೂ ಸ್ವಾಧೀನ ಕಾಯ್ದೆ - 2015 ಭಾರತದ ಕೃಷಿ ಮೇಲೆ ಪರಿಣಾಮ ಕುರಿತ ವಿಚಾರ ಸಂಕಿರಣದಲ್ಲಿ ಗಾಂಧಿ ಭವನದ ಅಧ್ಯಕ್ಷ ಹೊ.ಶ್ರೀನಿವಾಸಯ್ಯ, ಶೇಷಾದ್ರಿಪುರಂ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಪಂಡಿತಾರಾಧ್ಯ, ಕಾರ್ಯದರ್ಶಿ ವೂಡೆ.ಪಿ.ಕೃಷ್ಣ, ಡಾ.ಸಾಯಿರಾಂ ಭಟ್. ಪಾಲ್ಗೊಂಡಿದ್ದರು.

ಕನ್ನಡ ಉಳಿಸಲು ಮಾಧ್ಯಮ ಜಗತ್ತು ಮುಂದಾಗಲಿ

ಹೋರಾಟಗಾರ ಜಾಣಗೆರೆ ವೆಂಕಟರಾಮಯ್ಯ ಅಭಿಪ್ರಾಯ



ಶೇಷಾದ್ರಿಪುರಂ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ನಡೆದ ಕನ್ನಡ ಸಂವಾದದಲ್ಲಿ ಪತ್ರಕರ್ತ ಜಾಣಗೆರೆ ವೆಂಕಟರಾಮಯ್ಯ, ಶೇಷಾದ್ರಿಪುರಂ ಶಿಕ್ಷಣ ಸಮೂಹ ಸಂಸ್ಥೆಗಳ ಗೌರವ ಕಾರ್ಯದರ್ಶಿ ವೂಡೇ.ಪಿ.ಕೃಷ್ಣ, ಪ್ರಾಚಾರ್ಯರಾದ ಆರ್. ಮಹಾಲಕ್ಷ್ಮಿ, ರಾಣಿ ಗೋವಿಂದರಾಜು ಮತ್ತಿತರರು ಇದ್ದರು.

ಬೆಂಗಳೂರು: ಕನ್ನಡ ಭಾಷೆ ಉಳಿಸುವ ಕೆಲಸವನ್ನು ದಿನಪತ್ರಿಕೆಗಳು ಹಾಗೂ ಮಾಧ್ಯಮ ಜಗತ್ತು ಯುದ್ಧದ ಮಾದರಿಯಲ್ಲಿ ಕೈಗೆತ್ತಿಕೊಳ್ಳಬೇಕಿದೆ ಎಂದು ಕನ್ನಡಪರ ಹೋರಾಟಗಾರ ಮತ್ತು ಪತ್ರಕರ್ತ ಜಾಣಗೆರೆ ವೆಂಕಟರಾಮಯ್ಯ ಅಭಿಪ್ರಾಯಪಟ್ಟರು.

ಬುಧವಾರ ಬೆಂಗಳೂರಿನ ಶೇಷಾದ್ರಿಪುರಂ ಮಹಾವಿದ್ಯಾಲಯದಲ್ಲಿ ಏರ್ಪಡಿಸಲಾಗಿದ್ದ ಗಾಂಧಿನಗರ ವಿಧಾನಸಭಾ ಕ್ಷೇತ್ರದ ವಿಜಯವಾಣಿ ಕನ್ನಡ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಕರ್ನಾಟಕದಲ್ಲಿ ಕನ್ನಡ ಉಳಿಯಬೇಕು ಎಂಬ ಕೂಗು ಈಗ ವ್ಯಾಪಕವಾಗಿದೆ. ಈ ಕೆಲಸವನ್ನು ಪ್ರತಿಯೊಬ್ಬ ಕನ್ನಡಾಭಿಮಾನಿ ಮಾಡಬೇಕಿದೆ.

ಗಾಂಧಿನಗರ

ಆದರೆ ಎಲ್ಲರ ಪ್ರತಿನಿಧಿಯಾಗಿ ವಿಜಯವಾಣಿ ದಿನಪತ್ರಿಕೆ ಈ ಕೆಲಸವನ್ನು ಕೈಗೆತ್ತಿಕೊಂಡಿರುವುದು ಶ್ಲಾಘನೀಯ. ಕನ್ನಡದ ಎಲ್ಲ ದಿನಪತ್ರಿಕೆಗಳು ಮತ್ತು ಮಾಧ್ಯಮ ಜಗತ್ತು ಕನ್ನಡ ಉಳಿಸುವ ಅಭಿಯಾನವನ್ನು ಯುದ್ಧದ ಮಾದರಿಯಲ್ಲಿ ಕೈಗೆತ್ತಿಕೊಳ್ಳಬೇಕು. ಆಗ ಅದು ಜನರಲ್ಲಿ ಜಾಗೃತಿ ಉಂಟು ಮಾಡುತ್ತದೆ. ಪ್ರಾದೇಶಿಕ ಭಾಷೆಯನ್ನು ಉಳಿಸುವ ಕರ್ನಾಟಕದ ಹೋರಾಟಕ್ಕೆ ಇತರೆ ರಾಜ್ಯಗಳು ಬೆಂಬಲ ಸೂಚಿಸುತ್ತವೆ ಎಂಬುದು ತಮ್ಮ ಅಭಿಪ್ರಾಯ ಎಂದು ಜಾಣಗೆರೆ ಹೇಳಿದರು.

ಸಮರ್ಥವಾಗಿ ವಾದ ಮಂಡಿಸಿಲ್ಲ

ಕಡ್ಡಾಯವಾಗಿ ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣ ಎಂಬ ಈ ನಾಡಿನ ಕಾನೂನನ್ನು ಸುಪ್ರೀಂಕೋರ್ಟ್ ತಳ್ಳಿ ಹಾಕಿದೆ. ಭಾಷೆ ವಿಚಾರವಾಗಿ ನಮ್ಮ ವಕೀಲರು ಸಮರ್ಥವಾದ ಮಂಡಿಸದ ಕಾರಣ ಕನ್ನಡಕ್ಕೆ ಮತ್ತು ಸರ್ಕಾರಕ್ಕೆ ಸೋಲಾಗಿದೆ. ಸುಪ್ರೀಂಕೋರ್ಟ್ ಕನ್ನಡದ ವಿಚಾರವಾಗಿ ನೀಡಿರುವ ತೀರ್ಪು ಚರಮಗೀತೆಯೇನಲ್ಲ, ಇನ್ನೂ ಅವಕಾಶಗಳಿವೆ. ಆ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡು ವಾದ ಮಾಡಬೇಕು ಎಂದರು.



ಕನ್ನಡಪರ ಸಂಘಟನೆಗಳು ಪರಿಶುದ್ಧರಾಗಿರಬೇಕು. ವ್ಯಾಪಾರ ವಹಿವಾಟುಗಳಿಂದ ದೂರ ಇರಬೇಕು. ಆಗ ಮಾತ್ರ ಕನ್ನಡ ಸಂಘಟನೆ ಮತ್ತು ಕನ್ನಡಪರ ಹೋರಾಟಗಾರರಿಗೆ ಸಮಾಜದಲ್ಲಿ ಜನ ಬೆಲೆ ಕೊಡುತ್ತಾರೆ. ಇಲ್ಲದಿದ್ದರೆ ಇವರ ಕತೆ ಇಷ್ಟೇ ಎಂದು ಹೀಯಾಳಿಸುತ್ತಾರೆ.

। ಜಾಣಗೆರೆ ವೆಂಕಟರಾಮಯ್ಯ ಕನ್ನಡಪರ ಹೋರಾಟಗಾರ

ಪಿಯುಸಿಯಲ್ಲಿ ಆಂಗ್ಲ ಭಾಷೆ ಕಡ್ಡಾಯಗೊಳಿಸಲಾಗಿದೆ. ಆದರೆ ಕನ್ನಡದ ಬದಲಿಗೆ ಹಿಂದಿ, ಸಂಸ್ಕೃತ ಕಲಿಯಲು ಅವಕಾಶ ಕಲ್ಪಿಸಲಾಗಿದೆ. ಈ ನಿಯಮವನ್ನು ಬದಲಿಸಬೇಕು. ಆಗ ಕಡ್ಡಾಯವಾಗಿ ಪಿಯುಸಿ ವಿದ್ಯಾರ್ಥಿಗಳು ಕನ್ನಡ ಕಲಿಯುತ್ತಾರೆ.

ಡಾ. ಅಶೋಕಕುಮಾರ್, ಪ್ರಾಧ್ಯಾಪಕ

ದುರಭಿಮಾನ ಬಿಡಿ

ಮನೆಯ ಸೋಫಾ ಮೇಲೆ ನಾಯಿಗಳನ್ನು ಮಲಗಿಸುತ್ತಾರೆ. ಆದರೆ ಮನೆಯ ಟೇಬಲ್ ಮೇಲೆ ಒಂದು ಕನ್ನಡ ಪತ್ರಿಕೆ ಇರಿಸುವುದಿಲ್ಲ. ಇಂಥ ದುರಭಿಮಾನಿಗಳನ್ನು ಬೀದಿಯಲ್ಲಿ ವಿಚಾರಿಸಿಕೊಳ್ಳಬೇಕಾಗುತ್ತದೆ. ಇದಕ್ಕೂ ಮುನ್ನ ಕನ್ನಡದ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಿ ಎಂದು ವೆಂಕಟರಾಮಯ್ಯ ಕೆಲವೇ ವರ್ಗದವರನ್ನು ಗುರಿಯಾಗಿಸಿಕೊಂಡು ಎಚ್ಚರಿಕೆ ನೀಡಿದರು.

ಶಹರದ ಮಕ್ಕಳಿಗೆ ಕನ್ನಡ-ಹಳ್ಳಿ ಮಕ್ಕಳಿಗೆ ಇಂಗ್ಲಿಷ್ ಕಲಿಸಿ: ಶೇಷಾದ್ರಿಪುರಂ ಶಿಕ್ಷಣ ಸಮೂಹ ಸಂಸ್ಥೆಗಳ ಗೌರವ ಕಾರ್ಯದರ್ಶಿ ವೂಡೇ.ಪಿ.ಕೃಷ್ಣ ಮಾತನಾಡಿ, ಚಿಂತಕ ಪಿ. ಲಂಕೇಶ್ ಹೇಳಿದಂತೆ ಶಹರದ ಮಕ್ಕಳಿಗೆ ಕನ್ನಡ ಕಲಿಸಬೇಕು. ಹಳ್ಳಿ ಮಕ್ಕಳಿಗೆ ಇಂಗ್ಲೀಷ್ ಕಲಿಸಬೇಕು. ಆಗ ಸಮಸ್ಯೆ ಬಗೆ ಹರಿಯುತ್ತದೆ ಎಂದು ಅಭಿಪ್ರಾಯಪಟ್ಟರು. ಸಾಹಿತಿ ನಾ. ಗೀತಾಚಾರ್ಯ ಮಾತನಾಡಿ, ಮಾತೃಭಾಷೆ ಕನ್ನಡದಲ್ಲಿಯೇ ಪ್ರಾಥಮಿಕ ಶಿಕ್ಷಣ ನೀಡಬೇಕೆಂದು ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಬೇಕು. ಸುಪ್ರೀಂಕೋರ್ಟ್‌ನಲ್ಲಿ ಉಂಟಾಗಿರುವ ತಾತ್ಕಾಲಿಕ ಹಿನ್ನಡೆಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಕೆಎಸ್‌ಆರ್‌ಟಿಸಿ ಕೇಂದ್ರ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ವ.ಚ. ಚನ್ನೇಗೌಡ ಮಾತನಾಡಿ, ಸರ್ಕಾರಗಳು ಬಂಡವಾಳಶಾಹಿಗಳ ಹಿತ ಕಾಪಾಡುವುದನ್ನು ಕೈ ಬಿಡಬೇಕು. ಕನ್ನಡದ ನೆಲ, ಜಲ, ತೆರಿಗೆ ವಿನಾಯಿತಿ ಸೌಲಭ್ಯ ಪಡೆಯುವ ಕಂಪನಿಗಳಲ್ಲಿ ಕಡ್ಡಾಯವಾಗಿ ಶೇ.75ರಷ್ಟು ಹುದ್ದೆಗಳಿಗೆ ಕನ್ನಡಿಗರನ್ನೇ ಆಯ್ಕೆ ಮಾಡಿಕೊಳ್ಳಬೇಕು ಎಂಬ ಕಾಯ್ದೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಶೇಷಾದ್ರಿಪುರಂ ಪದವಿ (ಸಂಜೆ) ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ.ಚಂದ್ರಿಕಾ ಪುರಾಣಿಕ್ ಮಾತನಾಡಿ, ಇತ್ತೀಚೆಗೆ ವಿದ್ಯಾರ್ಥಿಗಳು ಮೊಬೈಲ್‌ಗಳಲ್ಲಿ ಬಳಸುವ ಎಸ್‌ಎಂಎಸ್ ಭಾಷೆಯನ್ನೇ ಉತ್ತರ ಪತ್ರಿಕೆಗಳಲ್ಲೂ ಬರೆಯುತ್ತಿರುವುದು ದುರಂತ. ಕನ್ನಡ ಅವರ ಕೈಯಲ್ಲಿ ನರಳುತ್ತಿದೆ. ಇದಕ್ಕೆ ಈಗಲೇ ಕಡಿವಾಣ ಹಾಕಬೇಕು. ಅದಕ್ಕಾಗಿ ಎಲ್ಲರೂ ಕನ್ನಡದ ದೀಕ್ಷೆ ಸ್ವೀಕರಿಸಬೇಕು ಎಂದರು.



ಕನ್ನಡ ಏಕೆ ಕಲಿಯಬೇಕು?

ಇದು ಸಂವಾದದಲ್ಲಿ ವಿದ್ಯಾರ್ಥಿ ಮಂಜುನಾಥ್, ಕನ್ನಡ ಕಲಿತರೆ ಉದ್ಯೋಗ ಸಿಗುವುದಿಲ್ಲ ಎಂದ ಮೇಲೆ ಕನ್ನಡವನ್ನು ಏಕೆ ಕಲಿಯಬೇಕು ಎಂಬ ಪ್ರಶ್ನೆ ಗಂಭೀರ ಚರ್ಚೆಗೆ ಕಾರಣವಾಯಿತು. ವೂಡೇ ಪಿ. ಕೃಷ್ಣ ಮಾತನಾಡಿ, ಕನ್ನಡ ಮಾಧ್ಯಮ ಶಾಲೆಗಳಲ್ಲಿ ತಮ್ಮ ಮಕ್ಕಳನ್ನು ಸೇರಿಸಲು ಕನ್ನಡಿಗರೇ ಹಿಂದೇಟು ಹಾಕುತ್ತಿದ್ದಾರೆ. ತಮಿಳು ಮತ್ತು ತೆಲುಗು ಭಾಷಿಕರ ಮಕ್ಕಳು ನಮ್ಮ ಶಾಲೆಯಲ್ಲಿ ಕನ್ನಡ ಕಲಿಯುತ್ತಿದ್ದಾರೆ. ನಾವು ಸ್ವಯಂ ಪ್ರೇರಣೆಯಿಂದ ಕೊಳೆಗೇರಿಗಳಿಗೆ ಹೋಗಿ ಅಲ್ಲಿನ ಮಕ್ಕಳನ್ನು ಕರೆತರುತ್ತಿದ್ದೇವೆ. ಈ ಧೋರಣೆ ಬದಲಾಗಬೇಕು ಎಂದರು.

ದೃಶ್ಯ ಮತ್ತು ಶ್ರವಣ ಮಾಧ್ಯಮಗಳಲ್ಲಿ ಕನ್ನಡಕ್ಕಿಂತ ಆಂಗ್ಲ ಭಾಷೆಯನ್ನೇ ಹೆಚ್ಚಾಗಿ ಬಳಸುತ್ತಿರುವುದಕ್ಕೆ ಯಾರು ಕಡಿವಾಣ ಹಾಕಬೇಕು ಎಂದು ಗೋಪಿ ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಜಾಣಗೆರೆ ವೆಂಕಟರಾಮಯ್ಯ, ಮನಸಾಕ್ಷಿ ಎಂಬ ಚಲನಚಿತ್ರದಲ್ಲಿ ಡಾ.ರಾಜ್‌ಕುಮಾರ್ ತಮಿಳು ಪದವನ್ನು ಬಳಸಿದ್ದಕ್ಕೆ ಅವರ ಅಭಿಮಾನಿಗಳೇ ಚಿತ್ರಮಂದಿರದಲ್ಲಿ ಪ್ರತಿಭಟನೆ ನಡೆಸಿ ಸೀಟು ಹರಿದಿದ್ದರು. ಆದರೆ ಈಗ ಮಾಧ್ಯಮ ಮತ್ತು ಸಿನಿಮಾ ರಂಗದಲ್ಲಿ ಯಥೇಚ್ಛವಾಗಿ ಬೇರೆ ಭಾಷೆ ಬಳಸಲಾಗುತ್ತಿದೆ. ಕನ್ನಡವನ್ನು ಗುತ್ತಿಗೆ ತೆಗೆದುಕೊಂಡವರು ಇದನ್ನು ಯಾಕೆ ಪ್ರಶ್ನಿಸುತ್ತಿಲ್ಲ. ಹೀಗಾಗಿ ಪರಭಾಷೆ ವ್ಯಾಮೋಹಕ್ಕೆ ಕನ್ನಡಿಗರೇ ಕಡಿವಾಣ ಹಾಕಬೇಕು ಎಂದರು. ತಮ್ಮಯ್ಯಗೌಡ, ರುಕ್ಮಿಣಿಯಮ್ಮ, ಧರ್ಮರಾಜ್ ಕಡಗ, ನದಿವುಲ್ಲಾ, ಕೆ. ಧನಪಾಲ್, ಆನೇಕಲ್ ನರಸಿಂಹಸ್ವಾಮಿ, ಜಿ.ಸುಬ್ರಮಣ್ಯ (ಸುಬ್ಬು) ಮುಂತಾದವರು ಕನ್ನಡ ಉಳಿಸುವ ಸಂಬಂಧ ಸಲಹೆ ನೀಡಿದರು.

ಇಂದು ಎರಡು ಕಡೆ ಕನ್ನಡ ಸಂವಾದ

ಸಿ.ವಿ. ರಾಮನ್ ನಗರ

ಜೀವನ್ ಬಿಮಾನಗರದ ಆದಿಪರಾಶಕ್ತಿ ಕತ್ತರಿಪೀಠ ಸಮುದಾಯ ಭವನದಲ್ಲಿ ಸಂಜೆ 5-30ಕ್ಕೆ ಸಂವಾದ ಆರಂಭವಾಗಲಿದೆ. ಕಾರ್ಯಕ್ರಮದಲ್ಲಿ ಶಿಕ್ಷಣತಜ್ಞ ಮುಡಂಬಡಿತ್ತಾಯ, ಸಾಹಿತಿಗಳಾದ ಅಂಜನಾದ್ರಿ, ಈರಪ್ಪ.ಎಂ.ಕಂಬಳಿ, ಗೋಪಾಲಕೃಷ್ಣ ಬಿ.ಎಂ, ಸ್ಥಳೀಯ ಕಸಾಪ ಘಟಕಾಧ್ಯಕ್ಷ ಅರಬಘಟ್ಟ ಬಸವರಾಜ, ಕೋಶಾಧ್ಯಕ್ಷ ನ. ನಂಜಪ್ಪ, ಲೇಖಕಿ ಸರಸ್ವತಿ ನಟರಾಜ್, ಕನ್ನಡಪರ ಹೋರಾಟಗಾರ ತಿಮ್ಮರಾಜ ಅರಸು ಮೊದಲಾದವರು ಭಾಗವಹಿಸಲಿದ್ದಾರೆ. ಸಂವಾದದಲ್ಲಿ ಸಾಹಿತಿಗಳಾದ ಸು.ಜಗದೀಶ್, ಧರ್ಮೇಂದ್ರ, ಪ್ರದೀಪ್ ರೋಖಡೆ, ಶಿವಲಿಂಗ ಬಿ.ಎಸ್, ಶಿವಾನಂದಯ್ಯ, ಜೀವನ್ ಬೀಮಾನಗರ ಪದಾಧಿಕಾರಿಗಳಾದ ಶಿವಶಂಕರ್ ರೆಡ್ಡಿ, ಮುನಾಫ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ವಿಜಯನಗರ

ಇಲ್ಲಿನ 15ನೇ ಮುಖ್ಯರಸ್ತೆಯಲ್ಲಿರುವ ಪಂಪ ಸಭಾಂಗಣದಲ್ಲಿ ಸಂಜೆ 4 ಗಂಟೆಗೆ ಸಂವಾದ ನಡೆಯಲಿದೆ. ಶಾಸಕ ಎಂ. ಕೃಷ್ಣಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಶೋಧಕ ಡಾ. ಚಿದಾನಂದಮೂರ್ತಿ, ಕರ್ನಾಟಕ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಿ. ವೀರಣ್ಣ, ಚಿಂತಕರಾದ ಹಿ.ಚಿ. ಶಾಂತವೀರಯ್ಯ, ಕಸಾಪ ವಿಜಯನಗರ ವಿಧಾನಸಭಾ ಕ್ಷೇತ್ರ ಘಟಕಾಧ್ಯಕ್ಷರಾದ ಪ್ರೇಮಾ ಶಾಂತವೀರಯ್ಯ, ಮಹಿಳಾ ಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಕನ್ನಡಪರ ಹೋರಾಟಗಾರ ಆರ್. ದತ್ತಾರಾವ್, ಜಯ ಕರ್ನಾಟಕ ಸಂಘಟನೆಯ ಆರ್. ಚಂದ್ರಪ್ಪ ಹಾಗೂ ಹಲವು ಚಿಂತಕರು ಭಾಗವಹಿಸಲಿದ್ದಾರೆ. ಸಮಾಜ ಸೇವಕ ಪ್ರದೀಪ್, ಕನ್ನಡಪರ ಚಿಂತಕ ಪ್ರಕಾಶ್‌ಮೂರ್ತಿ, ಸ್ಕೂಲ್ ಬುಕ್ ಅಕಾಡೆಮಿಯ ಡಿ.ಎಸ್. ಅಲ್ಲಮಪ್ರಭು, ವಿನಯ್‌ಕುಮಾರ್ ಹಾಗೂ ವಿವಿಧ ಕನ್ನಡಪರ ಸಂಘಟನೆಗಳು ಕಾರ್ಯಕ್ರಮಕ್ಕೆ ಸಹಯೋಗ ನೀಡಿವೆ.

ದಿನಾಂಕ : ಮಾರ್ಚ್ 19, ಗುರುವಾರ

ಕನ್ನಡಪ್ರಭ ಬೆಂಗಳೂರು | ಶನಿವಾರ, 21 ಫೆಬ್ರವರಿ 2015



ಕಲಾವಿದೆ ವಿನಯ ಸುವರ್ಣ ಅವರ ಚಿತ್ರಗಳನ್ನು ಡಾ.ಬಿ.ಎಲ್.ಶಂಕರ್ ವೀಕ್ಷಿಸಿದರು. ವೂಡೆ ಪಿ.ಕೃಷ್ಣ, ಕೃಷ್ಣಪ್ಪ ಸುವರ್ಣ ಹಾಜರಿದ್ದರು.

ಅನುಭವದ ಮೂಲಕ ಕಲಿಯುವ ವಿದ್ಯೆ ಶ್ರೇಷ್ಠ

ಬೆಂಗಳೂರು: ಶಿಕ್ಷಣ ಸಂಸ್ಥೆಗಳಲ್ಲಿ ಪದವಿ ಪಡೆಯುವುದಕ್ಕಿಂತ ಅನುಭವದ ಮೂಲಕ ಕಲಿಯುವ ವಿದ್ಯೆ ಶ್ರೇಷ್ಠವಾದುದು ಎಂದು ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಡಾ.ಬಿ.ಎಲ್.ಶಂಕರ್ ಅಭಿಪ್ರಾಯಪಟ್ಟರು.

ವೆಂಕಟಪ್ಪ ಚಿತ್ರಕಲಾ ಶಾಲೆಯಲ್ಲಿ ಕಲಾವಿದೆ ವಿನಯ ಸುವರ್ಣ ಅವರ ಚಿತ್ರಕಲಾ ಪ್ರದರ್ಶನಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, ಚಿತ್ರಕಲೆ, ಸಂಗೀತ, ಸಾಹಿತ್ಯ ಸೇರಿದಂತೆ ಕಲೆಗಳು ಅನುಭವದ ಮೂಲಕ ಒಲಿಯುತ್ತದೆ. ಶಿಕ್ಷಣ ಸಂಸ್ಥೆಗಳಲ್ಲಿ ಕಲಿತು ಪಡೆದ ಕಲೆಯ ಶಿಕ್ಷಣಕ್ಕಿಂತಲೂ ಸ್ವಂತ ಅನುಭವದ ಮೂಲಕ ಕಲಿಯುವ ಪ್ರಕ್ರಿಯೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ತಪಸ್ಸಿನ ಮಾದರಿಯಲ್ಲಿ ಶ್ರಮಪಟ್ಟರೆ ಮಾತ್ರ ಕಲೆಯಲ್ಲಿ ಪರಿಪೂರ್ಣತೆ ಸಾಧಿಸಬಹುದು. ಅನುಭವದ ಕಲಿಕೆಯಲ್ಲಿ ಮುಂಚೂಣಿಗೆ ಬರುವವರು ವಿನಯಶೀಲ ಹಾಗೂ ಪ್ರಾಮಾಣಿಕರಾಗಿರುತ್ತಾರೆ ಎಂದರು. ಶೇಷಾದ್ರಿಪುರ ಕಾಲೇಜು ದತ್ತಿಯ ಗೌರವ ಕಾರ್ಯದರ್ಶಿ ವೂಡೆ ಪಿ.ಕೃಷ್ಣ, ಕೃಷ್ಣಪ್ಪ ಸುವರ್ಣ ಹಾಜರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಶನಿವಾರ
21 ಫೆಬ್ರವರಿ 2015

ಸುವರ್ಣ ರೇಖೆಗಳಲ್ಲಿ ಮೂಡಿದ ಪ್ರಕೃತಿ ಸೌಂದರ್ಯ, ಬುದ್ಧ

■ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಕಲಾ ಪ್ರದರ್ಶನಕ್ಕೆ ಬಿ.ಎಲ್. ಶಂಕರ್ ಚಾಲನೆ ■ 26ರವರೆಗೆ ವೀಕ್ಷಣೆಗೆ ಅವಕಾಶ

ಬೆಂಗಳೂರು: ವೃತ್ತಿಯಲ್ಲಿ ಶಿಕ್ಷಕಿ, ಪ್ರವೃತ್ತಿಯಲ್ಲಿ ಕಲಾವಿದೆಯಾಗಿರುವ ವಿನಯ ಸುವರ್ಣ ನಿವೃತ್ತಿ ನಂತರ ಕುಂಚ ಹಿಡಿದು ಚಿತ್ರಿಸಿದ ಪ್ರಕೃತಿ ಸೌಂದರ್ಯವನ್ನು ಫೆ.26ರವರೆಗೆ ವಿಶ್ವೇಶ್ವರಯ್ಯ ಮ್ಯೂಸಿಯಂ ಸಮೀಪದ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನಕ್ಕಿಡಲಾಗಿದೆ.

ಪ್ರೌಢಶಾಲೆಯಲ್ಲಿ ಸಮಾಜ ವಿಜ್ಞಾನ, ಇಂಗ್ಲಿಷ್ ಹಾಗೂ ಸಸ್ಯಶಾಸ್ತ್ರದ ಶಿಕ್ಷಕಿಯಾಗಿದ್ದ ವಿನಯ ಸುವರ್ಣ, ಬಾಲ್ಯದಿಂದಲೇ ಚಿತ್ರಕಲೆ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದರು. ಕುಂಚದ ಮೂಲಕ ತಮ್ಮದೇ ಕಲ್ಪನೆಯಲ್ಲಿ ಪ್ರಕೃತಿಯನ್ನು ಮರುಸೃಷ್ಟಿಸಿದ್ದಾರೆ. ಗೌತಮ ಬುದ್ಧನ ನಂತರ ಬಂದ ಬೌದ್ಧಬಿಕ್ಷುಗಳು, ಗುಡ್ಡದ ನಡುವಿನ ಜಲಪಾತ, ಮುಂಜಾನೆಯ ಮಂಜಲ್ಲಿ ಝುಗಮಗಿಸುವ ಸೂರ್ಯ ರಶ್ಮಿ, ಪ್ರಕೃತಿಯಲ್ಲಿ ಪ್ರಾಣಿ ಪಕ್ಷಿಗಳ ಕಲರವ ಇಲ್ಲಿ ಒಡಮೂಡಿವೆ. ಜತೆಗೆ ಡಾ. ರಾಜ್‌ಕುಮಾರ್, ಐಶ್ವರ್ಯಾ ರೈ, ಹೃತಿಕ್‌ರೋಷನ್ ಸೇರಿ ಅನೇಕ ಗಣ್ಯರ ವ್ಯಕ್ತಿಚಿತ್ರಗಳು ಸೇರಿ 114 ಚಿತ್ರಗಳು ಪ್ರದರ್ಶನದಲ್ಲಿವೆ.

ಕಲಾ ಪ್ರದರ್ಶನಕ್ಕೆ ಶುಕ್ರವಾರ ಸಂಜೆ ಚಾಲನೆ ನೀಡಿ ಮಾತನಾಡಿದ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಡಾ. ಬಿ.ಎಲ್. ಶಂಕರ್, ಶಿಕ್ಷಣ ಸಂಸ್ಥೆಗಳಲ್ಲಿ ಪದವಿ ಪಡೆಯುವುದಕ್ಕಿಂತ ಅನುಭವದ ಮೂಲಕ ಕಲಿಯುವ ವಿದ್ಯೆ ಶ್ರೇಷ್ಠ. ಬದ್ಧತೆ ಹಾಗೂ ಸವಾಲನ್ನು ಸ್ವೀಕರಿಸುವ ಗುಣವಿದ್ದರೆ ಏನೂ ಬೇಕಾದರೂ ಸಾಧಿಸಬಹುದು ಎಂದರು.

ಚಿತ್ರಕಲೆ, ಸಂಗೀತ, ಸಾಹಿತ್ಯ ಸೇರಿ ವಿವಿಧ ಕಲೆಗಳು ಅನುಭವದ ಮೂಲಕ ಕಲಾವಿದನಿಗೆ ಒಲಿಯುತ್ತವೆ. ಆಡಂಬರವಿಲ್ಲದೇ, ಆರಾಧಿಸುವ ಕಲೆ ದೀರ್ಘಕಾಲ ಪರಿಣಾಮ ಬೀರುತ್ತದೆ. ತಪಸ್ಸಿನಂತೆ ಶ್ರಮಪಟ್ಟರೆ ಕಲೆಯಲ್ಲಿ ಪರಿಪೂರ್ಣತೆ ಗಳಿಸಬಹುದು ಎಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ಕೃಷ್ಣಪ್ಪ ಸುವರ್ಣ



ನಗರದ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಶುಕ್ರವಾರ ಕಲಾವಿದೆ ವಿನಯ ಸುವರ್ಣ ಅವರ ಕಲಾಕೃತಿಗಳ ಪ್ರದರ್ಶನಕ್ಕೆ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ಚಾಲನೆ ನೀಡಿ, ಕಲಾಕೃತಿಗಳನ್ನು ವೀಕ್ಷಿಸಿದರು.

“ಚಿತ್ರಕಲೆಗೆ ಸಂಬಂಧಿಸಿದ ಪದವಿ ಪಡೆದಿಲ್ಲ. ಆದರೆ, ವ್ಯಕ್ತಿ ಚಿತ್ರ ಬಿಡಿಸುವುದೆಂದರೆ ಎಲ್ಲಿಲ್ಲದ ಆನಂದ. ನಿರಂತರವಾಗಿ ಚಿತ್ರ ಬಿಡಿಸುತ್ತಿದ್ದರೂ ಸುಸ್ತಾಗುವುದಿಲ್ಲ. ಚಿತ್ರ ಬಿಡಿಸಿದ ನಂತರ ಸಿಗುವ ಸಂತೃಪ್ತಿಗಿಂತ ದೊಡ್ಡ ಸುಖ ಇನ್ನೊಂದಿಲ್ಲ. ಪ್ರಕೃತಿಯ ವೈಭವನ್ನು ನನ್ನ ಕಲ್ಪನೆಯ ಬಣ್ಣದಲ್ಲಿ ಬಿಡಿಸುವ ಪ್ರಯತ್ನ ಮಾಡುತ್ತಿದ್ದೇನೆ. ಇದಕ್ಕೆ ಮನೆಯವರೆಲ್ಲರೂ ಪ್ರೋತ್ಸಾಹ ನೀಡುತ್ತಿದ್ದಾರೆ.

। ವಿನಯ ಸುವರ್ಣ
ಚಿತ್ರಕಲಾವಿದೆ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಶನಿವಾರ
21 ಫೆಬ್ರವರಿ 2015

ಸುವರ್ಣ ರೇಖೆಗಳಲ್ಲಿ ಮೂಡಿದ ಪ್ರಕೃತಿ ಸೌಂದರ್ಯ, ಬುದ್ಧ

ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಕಲಾ ಪ್ರದರ್ಶನಕ್ಕೆ ಬಿ.ಎಲ್. ಶಂಕರ್ ಚಾಲನೆ 26ರವರೆಗೆ ವೀಕ್ಷಣೆಗೆ ಅವಕಾಶ


ಬೆಂಗಳೂರು: ವೃತ್ತಿಯಲ್ಲಿ ಶಿಕ್ಷಕಿ, ಪ್ರವೃತ್ತಿಯಲ್ಲಿ ಕಲಾವಿದೆಯಾಗಿರುವ ವಿನಯ ಸುವರ್ಣ ನಿವೃತ್ತಿ ನಂತರ ಕುಂಚ ಹಿಡಿದು ಚಿತ್ರಿಸಿದ ಪ್ರಕೃತಿ ಸೌಂದರ್ಯವನ್ನು ಫೆ.26ರವರೆಗೆ ವಿಶ್ವೇಶ್ವರಯ್ಯ ಮ್ಯೂಸಿಯಂ ಸಮೀಪದ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನಕ್ಕಿಡಲಾಗಿದೆ.

ಪ್ರೌಢಶಾಲೆಯಲ್ಲಿ ಸಮಾಜ ವಿಜ್ಞಾನ, ಇಂಗ್ಲಿಷ್ ಹಾಗೂ ಸಸ್ಯಶಾಸ್ತ್ರದ ಶಿಕ್ಷಕಿಯಾಗಿದ್ದ ವಿನಯ ಸುವರ್ಣ, ಬಾಲ್ಯದಿಂದಲೇ ಚಿತ್ರಕಲೆ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದರು. ಕುಂಚದ ಮೂಲಕ ತಮ್ಮದೇ ಕಲ್ಪನೆಯಲ್ಲಿ ಪ್ರಕೃತಿಯನ್ನು ಮರುಸೃಷ್ಟಿಸಿದ್ದಾರೆ. ಗೌತಮ ಬುದ್ಧನ ನಂತರ ಬಂದ ಬೌದ್ಧಬಿಕ್ಷುಗಳು, ಗುಡ್ಡದ ನಡುವಿನ ಜಲಪಾತ, ಮುಂಜಾನೆಯ ಮಂಜಲ್ಲಿ ಝುಗಮಗಿಸುವ ಸೂರ್ಯ ರಶ್ಮಿ, ಪ್ರಕೃತಿಯಲ್ಲಿ ಪ್ರಾಣ ಪಕ್ಷಿಗಳ ಕಲರವ ಇಲ್ಲಿ ಒಡಮೂಡಿವೆ. ಜತೆಗೆ ಡಾ. ರಾಜ್‌ಕುಮಾರ್, ಐಶ್ವರ್ಯಾಷ್ಕ, ಹೃತಿಕ್‌ರೋಷನ್ ಸೇರಿ ಅನೇಕ ಗಣ್ಯರ ವ್ಯಕ್ತಿಚಿತ್ರಗಳು ಸೇರಿ 114 ಚಿತ್ರಗಳು ಪ್ರದರ್ಶನದಲ್ಲಿವೆ.

ಕಲಾ ಪ್ರದರ್ಶನಕ್ಕೆ ಶುಕ್ರವಾರ ಸಂಜೆ ಚಾಲನೆ ನೀಡಿ ಮಾತನಾಡಿದ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಡಾ. ಬಿ.ಎಲ್. ಶಂಕರ್, ಶಿಕ್ಷಣ ಸಂಸ್ಥೆಗಳಲ್ಲಿ ಪದವಿ ಪಡೆಯುವುದಕ್ಕಿಂತ ಅನುಭವದ ಮೂಲಕ ಕಲಿಯುವ ವಿದ್ಯೆ ಶ್ರೇಷ್ಠ. ಬದ್ಧತೆ ಹಾಗೂ ಸವಾಲನ್ನು ಸ್ವೀಕರಿಸುವ ಗುಣವಿದ್ದರೆ ಏನೂ ಬೇಕಾದರೂ ಸಾಧಿಸಬಹುದು ಎಂದರು.

ಚಿತ್ರಕಲೆ, ಸಂಗೀತ, ಸಾಹಿತ್ಯ ಸೇರಿ ವಿವಿಧ ಕಲೆಗಳು ಅನುಭವದ ಮೂಲಕ ಕಲಾವಿದನಿಗೆ ಒಲಿಯುತ್ತವೆ. ಆಡಂಬರವಿಲ್ಲದೇ ಅರಳಿದ ಕಲೆ ದೀರ್ಘಕಾಲ ಪರಿಣಾಮ ಬೀರುತ್ತದೆ. ತಪಸ್ಸಿನಂತೆ ಶ್ರಮಪಟ್ಟರೆ ಕಲೆಯಲ್ಲಿ ಪರಿಪೂರ್ಣತೆ ಗಳಿಸಬಹುದು ಎಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ಕೃಷ್ಣಪ್ಪ ಸುವರ್ಣ



ನಗರದ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಶುಕ್ರವಾರ ಕಲಾವಿದೆ ವಿನಯ ಸುವರ್ಣ ಅವರ ಕಲಾಕೃತಿಗಳ ಪ್ರದರ್ಶನಕ್ಕೆ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ಚಾಲನೆ ನೀಡಿ, ಕಲಾಕೃತಿಗಳನ್ನು ವೀಕ್ಷಿಸಿದರು.

ಚಿತ್ರಕಲೆಗೆ [illegible] ...ದ್ದಾರೆ.

ಚಿತ್ರಕಲಾವಿದೆ

ಪ್ರಜಾವಾಣಿ — ಶನಿವಾರ 21ನೇ ಫೆಬ್ರುವರಿ 2015



ನಗರದ ವೆಂಕಟಪ್ಪ ಕಲಾ ಗ್ಯಾಲರಿಯಲ್ಲಿ ಶುಕ್ರವಾರ ನಡೆದ ಹಿರಿಯ ಕಲಾವಿದೆ ವಿನಯಾ ಸುವರ್ಣ ಅವರ ವರ್ಣ ಚಿತ್ರ ಕಲಾಕೃತಿಗಳ ಪ್ರದರ್ಶನವನ್ನು ಕಲಾಸಕ್ತರು ವೀಕ್ಷಿಸಿದರು —ಪ್ರಜಾವಾಣಿ ಚಿತ್ರ

'ಕಲಾವಿದರಿಗೆ ಬದ್ಧತೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲಾವಿದರಿಗೆ ಬದ್ಧತೆ ಹಾಗೂ ಸವಾಲು ಸ್ವೀಕರಿಸುವ ಗುಣ ಇರಬೇಕು' ಎಂದು ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಡಾ.ಬಿ.ಎಲ್.ಶಂಕರ್ ಹೇಳಿದರು.

ನಗರದ ವೆಂಕಟಪ್ಪ ಕಲಾ ಗ್ಯಾಲರಿಯಲ್ಲಿ ಶುಕ್ರವಾರ ನಡೆದ ಹಿರಿಯ ಕಲಾವಿದೆ ವಿನಯಾ ಸುವರ್ಣ ಅವರ ವರ್ಣ ಚಿತ್ರ ಕಲಾಕೃತಿಗಳ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು.

'ಒಂದೆರಡು ಪ್ರದರ್ಶನಗಳನ್ನು ನೀಡಿದ ಕೆಲವು ಯುವ ಕಲಾವಿದರು ದೊಡ್ಡ ಸಾಧನೆ ಮಾಡಿದ್ದೇವೆ ಎಂಬಂತೆ ಬಿಂಬಿಸಿಕೊಳ್ಳುತ್ತಿದ್ದಾರೆ. ದೊಡ್ಡ ಸಾಧನೆ ಮಾಡಿದವರು ಸದ್ದುಗದ್ದಲ ಇಲ್ಲದೆ ಬದುಕುತ್ತಾರೆ. ಕಡಿಮೆ ಸಾಧನೆ ಮಾಡಿದವರು ಸದಾ ಸದ್ದುಗದ್ದಲ ಮಾಡುತ್ತಾರೆ' ಎಂದರು.

ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಹಾಗೂ ಕಲಾವಿದೆ ವಿನಯಾ ಸುವರ್ಣ ಉಪಸ್ಥಿತರಿದ್ದರು.

ಪ್ರದರ್ಶನ ಇದೇ 26ರ ವರೆಗೆ ಬೆಳಿಗ್ಗೆ 10ರಿಂದ ಸಂಜೆ 6ರ ವರೆಗೆ ಇರಲಿದೆ.

ಬೆಂಗಳೂರು । ಶನಿವಾರ, 21 ಫೆಬ್ರವರಿ 2015




ಕಲಾವಿದೆ ವಿನಯ ಸುವರ್ಣ ಅವರ ಚಿತ್ರಗಳನ್ನು ಡಾ.ಬಿ.ಎಲ್.ಶಂಕರ್ ವೀಕ್ಷಿಸಿದರು. ವೂಡೆ ಪಿ.ಕೃಷ್ಣ ಕೃಷ್ಣಪ್ಪ ಸುವರ್ಣ ಹಾಜರಿದ್ದರು.

ಅನುಭವದ ಮೂಲಕ ಕಲಿಯುವ ವಿದ್ಯೆ ಶ್ರೇಷ್ಠ

ಬೆಂಗಳೂರು: ಶಿಕ್ಷಣ ಸಂಸ್ಥೆಗಳಲ್ಲಿ ಪದವಿ ಪಡೆಯುವುದಕ್ಕಿಂತ ಅನುಭವದ ಮೂಲಕ ಕಲಿಯುವ ವಿದ್ಯೆ ಶ್ರೇಷ್ಠವಾದುದು ಎಂದು ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಡಾ.ಬಿ.ಎಲ್.ಶಂಕರ್ ಅಭಿಪ್ರಾಯಪಟ್ಟರು.

ವೆಂಕಟಪ್ಪ ಚಿತ್ರಕಲಾ ಶಾಲೆಯಲ್ಲಿ ಕಲಾವಿದೆ ವಿನಯ ಸುವರ್ಣ ಅವರ ಚಿತ್ರಕಲಾ ಪ್ರದರ್ಶನಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, ಚಿತ್ರಕಲೆ, ಸಂಗೀತ, ಸಾಹಿತ್ಯ ಸೇರಿದಂತೆ ಕಲೆಗಳು ಅನುಭವದ ಮೂಲಕ ಒಲಿಯುತ್ತದೆ. ಶಿಕ್ಷಣ ಸಂಸ್ಥೆಗಳಲ್ಲಿ ಕಲಿತು ಪಡೆದ ಕಲೆಯ ಶಿಕ್ಷಣಕ್ಕಿಂತಲೂ ಸ್ವಂತ ಅನುಭವದ ಮೂಲಕ ಕಲಿಯುವ ಪ್ರಕ್ರಿಯೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ತಪಸ್ಸಿನ ಮಾದರಿಯಲ್ಲಿ ಶ್ರಮಪಟ್ಟರೆ ಮಾತ್ರ ಕಲೆಯಲ್ಲಿ ಪರಿಪೂರ್ಣತೆ ಸಾಧಿಸಬಹುದು. ಅನುಭವದ ಕಲಿಕೆಯಲ್ಲಿ ಮುಂಚೂಣಿಗೆ ಬರುವವರು ವಿನಯಶೀಲ ಹಾಗೂ ಪ್ರಾಮಾಣಿಕರಾಗಿರುತ್ತಾರೆ ಎಂದರು. ಶೇಷಾದ್ರಿಪುರ ಕಾಲೇಜು ದತ್ತಿಯ ಗೌರವ ಕಾರ್ಯದರ್ಶಿ ವೂಡೆ ಪಿ.ಕೃಷ್ಣ ಕೃಷ್ಣಪ್ಪ ಸುವರ್ಣ ಹಾಜರಿದ್ದರು.

ವಿದ್ಯುತ್ ಸಮಸ್ಯೆಗೆ ಸೌರಶಕ್ತಿಯೇ ಪರಿಹಾರ



ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಮತ್ತು ಸಿಟಿಜನ್ಸ್ ಫೋರಂ ಆಯೋಜಿಸಿದ್ದ ಸೌರಶಕ್ತಿ ಸಮಾವೇಶವನ್ನು ಸಚಿವ ಶಿವಕುಮಾರ್ ಉದ್ಘಾಟಿಸಿದರು.

ಯಲಹಂಕ: ವಿದ್ಯುತ್ ಅಭಾವ ಎದುರಿಸುತ್ತಿರುವ ಇಂದಿನ ದಿನಗಳಲ್ಲಿ ರಾಜ್ಯದ ಜನತೆ ಸೌರಶಕ್ತಿಯನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ಸಲಹೆ ನೀಡಿದ್ದಾರೆ.

ಇಲ್ಲಿನ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಹಾಗೂ ಸಿಟಿಜನ್ಸ್ ಫೋರಂ ಜಂಟಿಯಾಗಿ ಆಯೋಜಿಸಿದ್ದ ಸೌರಶಕ್ತಿ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ರಾಜ್ಯದಲ್ಲಿ 3 ಜಿಲ್ಲೆ ಹೊರತುಪಡಿಸಿ ಉಳಿದೆಡೆ ಸೌರಶಕ್ತಿ ಉತ್ಪಾದನೆಗೆ ಉತ್ತಮ ಅವಕಾಶವಿದೆ. ರಾಜ್ಯದಲ್ಲಿ ಸಾವಿರದಿಂದ 1,400 ಮೆಗಾವ್ಯಾಟ್ ವಿದ್ಯುತ್ ಕೊರತೆಯಿದೆ. ಇದನ್ನು ಸರಿದೂಗಿಸಲು ಸರ್ಕಾರ ಕೂಡ ಹರಸಾಹಸ ಮಾಡುತ್ತಿದೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ಜನತೆ ಸೌರವಿದ್ಯುತ್ ಉತ್ಪಾದಿಸುವ ಮೂಲಕ ಅಭಾವ ನೀಗಿಸುವಲ್ಲಿ ಸಹಕರಿಸಬೇಕು ಎಂದರು.

ಶಾಸಕ ಎಸ್.ಆರ್. ವಿಶ್ವನಾಥ್ ಮಾತನಾಡಿ, ಜನರು ಬಳಸುತ್ತಿರುವ ವಿದ್ಯುತ್ ಪ್ರಮಾಣ ಗಮನಿಸಿದರೆ ಎಲ್ಲ ಇಂಧನಗಳು ಬಹುಬೇಗ ಮುಗಿಯುವ ಸ್ಥಿತಿ ಎದುರಾಗಲಿದೆ. ಇಂಥ ಸ್ಥಿತಿಯಲ್ಲಿ ನಮಗೆ ಉಳಿಯುವುದು ಸೌರಶಕ್ತಿ ಮಾತ್ರ. ಇದು ಮುಗಿಯದ ಸಂಪನ್ಮೂಲ. ಹೀಗಾಗಿ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕು ಎಂದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ನಿರ್ದೇಶಕ ಡಾ. ಎಂ. ಪ್ರಕಾಶ್, ಪ್ರಾಂಶುಪಾಲ ಡಾ. ಎಸ್.ಎನ್. ವೆಂಕಟೇಶ್, ಉಪಪ್ರಾಂಶುಪಾಲ ನೇಹ ಜೈನ್, ಸಿಟಿಜನ್ಸ್ ಫೋರಂ ಅಧ್ಯಕ್ಷ ಡಾ. ಟಿ.ವಿ. ಮುನಿಯಪ್ಪ, ಕಾಂಗ್ರೆಸ್ ಮುಖಂಡ ಎಂ.ಎನ್. ಗೋಪಾಲಕೃಷ್ಣ, ಧರ್ಮದರ್ಶಿ ಜಿ. ಪರಮಶಿವಯ್ಯ ಮತ್ತಿತರರು ಇದ್ದರು.

ಏಕೈಕ ಮಾರ್ಗ

ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ ಸದ್ಯ ಕಡಿಮೆ ವೆಚ್ಚದ್ದಾಗಿದೆ. ಸೌರಶಕ್ತಿ ವಿದ್ಯುತ್ ಉತ್ಪಾದನೆ ನಂತರದ ಸ್ಥಾನದಲ್ಲಿದೆ. ಆದರೆ ಶಾಖೋತ್ಪನ್ನ ವಿದ್ಯುತ್‌ಗೆ ಇಂಧನದ ಅವಶ್ಯಕತೆ ಇರುವ ಕಾರಣ ಮುಂದಿನ ದಿನಗಳಲ್ಲಿ ಅದರ ಉತ್ಪಾದನಾ ವೆಚ್ಚ ಹೆಚ್ಚಾಗುವ ಸಂಭವವಿದೆ. ಹೀಗಾಗಿ ಸೌರಶಕ್ತಿಯೇ ನಮ್ಮ ಮುಂದಿರುವ ಏಕೈಕ ಮಾರ್ಗ ಎಂದು ಶಿವಕುಮಾರ್ ತಿಳಿಸಿದರು.

ಪ್ರಜಾವಾಣಿ ಸೋಮವಾರ 9ನೇ ಫೆಬ್ರುವರಿ 2015

ಸೌರಶಕ್ತಿ ಸಮಾವೇಶ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: 'ಭವಿಷ್ಯದಲ್ಲಿ ತಲೆದೋರಬಹುದಾದ ವಿದ್ಯುತ್ ಕೊರತೆಯ ನೀಗಿಸುವ ನಿಟ್ಟಿನಲ್ಲಿ ಸೌರಶಕ್ತಿಯ ಮಹತ್ವವನ್ನು ಅರಿತು, ಅದನ್ನು ಸರಿಯಾದ ರೀತಿಯಲ್ಲಿ ಬಳಸಬೇಕು. ಇದು ನಮ್ಮೆಲ್ಲರ ಕರ್ತವ್ಯ ಕೂಡ' ಎಂದು ಇಂಧನ ಸಚಿವ ಡಿ.ಕೆ.ಶಿವಕುಮಾರ್ ಹೇಳಿದರು.

ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜು ಹಾಗೂ ಸಿಟಿಜನ್ ಫೋರಂ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಸೌರಶಕ್ತಿ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

'ಶಾಲಾ–ಕಾಲೇಜುಗಳು ಹಾಗೂ ಸರ್ಕಾರಿ ಕಚೇರಿಗಳಲ್ಲಿ ಸೌರಶಕ್ತಿಯನ್ನು ಕಡಿಮೆ ವೆಚ್ಚದಲ್ಲಿ ಅಳವಡಿಸಿಕೊಳ್ಳಲು ಅವಕಾಶವಿದ್ದು, ಬ್ಯಾಂಕಿನವರು ಸಾಲ ಸೌಲಭ್ಯ ನೀಡಲು ಮುಂದೆ ಬಂದಿದ್ದಾರೆ. ಪ್ರತಿಯೊಬ್ಬರೂ ಇದರ ಸದುಪಯೋಗ ಪಡೆದುಕೊಳ್ಳಬೇಕು' ಎಂದು ಸಲಹೆ ನೀಡಿದರು.

ಸೌರಶಕ್ತಿಯನ್ನು ಅಳವಡಿಸುವ ಕಾರ್ಯದಲ್ಲಿ ವಿದ್ಯಾರ್ಥಿಗಳ ಪಾತ್ರ ಪ್ರಮುಖವಾಗಿದ್ದು, ತಮ್ಮ ಮನೆಗಳಲ್ಲಿ ಸೌರಶಕ್ತಿಯನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಅಕ್ಕಪಕ್ಕದವರಿಗೂ ಈ ಬಗ್ಗೆ ಅರಿವು ಮೂಡಿಸಬೇಕು ಎಂದರು.

ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, 'ಬೇರೆ ಬೇರೆ ಮೂಲಗಳಿಂದ ವಿದ್ಯುತ್ ಪಡೆಯುತ್ತಿದ್ದರೂ ಅವೆಲ್ಲವೂ ನಶಿಸಿಹೋಗುವ ಸಂಪನ್ಮೂಲಗಳಾಗಿರುವುದರಿಂದ ಕೊನೆಯದಾಗಿ ಶಾಶ್ವತವಾಗಿ ಉಳಿಯುವುದು ಸೌರಶಕ್ತಿ. ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು' ಎಂದು ತಿಳಿಸಿದರು.




ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ನಡೆದ ಸೌರಶಕ್ತಿ ಸಮಾವೇಶವನ್ನು ಇಂಧನ ಸಚಿವ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು. ಶಾಸಕ ಎಸ್.ಆರ್.ವಿಶ್ವನಾಥ್, ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಾ.ವೂಡೇ ಪಿ. ಕೃಷ್ಣ, ಯಲಹಂಕ ಸಿಟಿಜನ್ ಫೋರಂನ ಅಧ್ಯಕ್ಷ ಡಾ.ಟಿ.ವಿ.ಮುನಿಯಪ್ಪ, ಕಾಂಗ್ರೆಸ್ ಮುಖಂಡ ಎಂ. ಎನ್.ಗೋಪಾಲಕೃಷ್ಣ ಚಿತ್ರದಲ್ಲಿದ್ದಾರೆ

ಸರ್ಕಾರಿ ಕಚೇರಿಗಳಲ್ಲಿ ಸೌರಶಕ್ತಿ ವಿದ್ಯುತ್ ಫಲಕ

ಬೆಂಗಳೂರು, ಫೆ. 8: ಸೌರಶಕ್ತಿಗೆ ಆದ್ಯತೆ ನೀಡಲು ಎಲ್ಲ ಸರ್ಕಾರಿ ಕಚೇರಿಗಳು, ಶಾಲಾ ಕಾಲೇಜುಗಳಲ್ಲಿ ಸೌರಶಕ್ತಿ ಬಳಕೆ ಮಾಡಿಕೊಳ್ಳಲಾಗುವುದು ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜು ಹಾಗೂ ಸಿಟಿಜನ್ಸ್ ಫೋರಂ ಸಂಯುಕ್ತಾಶ್ರಯದಲ್ಲಿ ಶೇಷಾದ್ರಿಪುರಂ ಕಾಲೇಜಿನ ಸಭಾಭವನದಲ್ಲಿ ಆಯೋಜಿಸಿದ್ದ ಸೌರಶಕ್ತಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸೌರಶಕ್ತಿಯಿಂದ ವಿದ್ಯುತ್ ಉತ್ಪಾದನೆ ಮಾಡಲು ಹೆಚ್ಚಿನ ಆದ್ಯತೆ ನೀಡಲು ಸರ್ಕಾರಿ ಕಚೇರಿಯ ಕಟ್ಟಡಗಳು, ಶಾಲಾ, ಕಾಲೇಜುಗಳ ಕಟ್ಟಡಗಳ ಮೇಲೆ ಸೌರಶಕ್ತಿ ವಿದ್ಯುತ್ ಅಭಾವವನ್ನು ಎದುರಿಸುತ್ತಿರುವ ಪರಿಸ್ಥಿತಿಯಲ್ಲಿ ರಾಜ್ಯದ ಜನತೆ ಸೌರಶಕ್ತಿ ವಿದ್ಯುತ್‌ನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಸೌರಶಕ್ತಿ ವಿದ್ಯುತ್ ಉತ್ಪಾದನೆ ಸೂರ್ಯನಿರುವವರೆಗೂ ನಿರಂತರವಾಗಿ ಉತ್ಪಾದಿಸಬಹುದಾದ ಸಾಧನವಾಗಿದೆ. ಸೌರಶಕ್ತಿ ವಿದ್ಯುತ್ ಬಳಕೆ ಮತ್ತು ಮಾರಾಟ ಎರಡೂ ಕೂಡ ರಾಜ್ಯ ಹಾಗೂ ದೇಶಕ್ಕೆ ಉತ್ತಮ ಕೊಡುಗೆಯಾಗಬಲ್ಲದು. ಇದರಿಂದ ಪರಿಸರ ರಕ್ಷಣೆ ಕೂಡ ಸಾಧ್ಯವಾಗುತ್ತದೆ ಎಂದರು.

ಸೌರಶಕ್ತಿ ವಿದ್ಯುತ್ ಉತ್ಪಾದನೆ ಮಾಡಲು ಸಾರ್ವಜನಿಕರಿಗೂ ಅವಕಾಶ ಮಾಡಿಕೊಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಆನ್‌ಲೈನ್‌ನಲ್ಲಿ ಅರ್ಜಿ ಪರಿಚಯಿಸಿದ್ದು, ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸಾವಿರಾರು ಮಂದಿ ಸೌರಶಕ್ತಿ ವಿದ್ಯುತ್ ಉತ್ಪಾದನೆಗೆ ಮುಂದೆ ಬಂದಿದ್ದಾರೆ. ಇವರುಗಳ ತಮ್ಮ ಮನೆಗಳ ಮೇಲ್ಛಾವಣಿ ಮೇಲೆ ಸೌರಶಕ್ತಿ ಫಲಕಗಳನ್ನು ಅಳವಡಿಸಿ ಅದರಿಂದ ವಿದ್ಯುತ್ ಉತ್ಪಾದನೆ ಮಾಡಿದಲ್ಲಿ ಅದನ್ನು ಸರ್ಕಾರ ಖರೀದಿಸಲಿದೆ. ಈ ವ್ಯವಸ್ಥೆಯನ್ನು ಅಳವಡಿಸಿಕೊಂಡವರಿಗೆ ವಿಮಾ ಸೌಲಭ್ಯವನ್ನು ಒದಗಿಸಲಾಗುವುದು ಎಂದರು.



ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜು ಹಾಗೂ ಸಿಟಿಜನ್ಸ್ ಫೋರಂ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸೌರಶಕ್ತಿ ಸಮಾವೇಶವನ್ನು ಇಂಧನ ಸಚಿವ ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು.

ಇದೀಗ ಉಷ್ಣ ವಿದ್ಯುತ್ ಉತ್ಪಾದನೆ ಕಡಿಮೆ ವೆಚ್ಚದ್ದಾಗಿದೆ. ಇದರ ನಂತರದ ಸ್ಥಾನ ಸೌರಶಕ್ತಿ ಮೂಲಕ ವಿದ್ಯುತ್ ಉತ್ಪಾದನೆಯದ್ದಾಗಿದೆ. ಕಡಿಮೆ ವೆಚ್ಚವಾದರೂ ಉಷ್ಣ ವಿದ್ಯುತ್ ಉತ್ಪಾದನೆಗೆ ಇಂಧನದ ಅವಶ್ಯಕತೆ ಇರುವ ಕಾರಣ ಮುಂದಿನ ದಿನಗಳಲ್ಲಿ ಅದರ ಉತ್ಪಾದನಾ ವೆಚ್ಚ ಹೆಚ್ಚುವ ಸಂಭವವಿದೆ. ಈ ಹಿನ್ನೆಲೆಯಲ್ಲಿ ಸೂರ್ಯನ ಬೆಳಕಿನಿಂದ ಉತ್ಪಾದಿಸಲ್ಪಡುವ ಸೌರಶಕ್ತಿ ವಿದ್ಯುತ್ ಉತ್ಪಾದನೆ ಅದಕ್ಕಿಂತ ಕಡಿಮೆ ವೆಚ್ಚದಲ್ಲಿ ದೊರೆಯಲಿದ್ದು ಜನತೆಗೆ ಸಹಕಾರಿಯಾಗಲಿದೆ ಎಂದರು.

ರಾಜ್ಯದಲ್ಲಿ 3. ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲೆಗಳಲ್ಲಿ ಸೌರಶಕ್ತಿ ವಿದ್ಯುತ್ ಉತ್ಪಾದನೆಗೆ ಉತ್ತಮ ಅವಕಾಶವಿದೆ. ಸೌರಶಕ್ತಿ ವಿದ್ಯುತ್ ಉತ್ಪಾದನೆಗೆ ಕೈಜೋಡಿಸಿ ಕಾರ್ಯಪ್ರವೃತ್ತರಾದರೆ ಮುಂದೊಂದು ದಿನ ಯಶಸ್ಸು ಕಾಣಬಹುದು. ಮುಂದಿನ ದಿನಗಳಲ್ಲಿ ವಿಶ್ವದಲ್ಲಿ ಯುದ್ಧಗಳಾದರೆ ಅದು ನೀರು ಅಥವಾ ವಿದ್ಯುತ್‌ಗಾಗಿಯೇ ಆಗಬಹುದು ಎಂದು ಹೇಳಿದರು.ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, ಕಲ್ಲಿದ್ದಲು, ಪೆಟ್ರೋಲಿಯಂ ಹಾಗೂ ಇನ್ನಿತರೆ ಇಂಧನಗಳು ಮುಗಿದು ಹೋಗುವ ಸಂಪನ್ಮೂಲಗಳಾಗಿದ್ದು, ಇತ್ತೀಚೆಗೆ ವಿದ್ಯುತ್‌ನ ಬೇಡಿಕೆಯ ತೀವ್ರತೆಯನ್ನು ಗಮನಿಸಿದರೆ ಎಲ್ಲಾ ಇಂಧನಗಳು ಬಹುಬೇಗ ಮುಗಿದು ಹೋಗಲಿವೆ. ಇಂತಹ ಸ್ಥಿತಿಯಲ್ಲಿ ನಮಗೆ ಉಳಿಯುವುದು ಸೌರಶಕ್ತಿಯೊಂದೇ. ಇದು ಮುಗಿದು ಹೋಗುವ ಸಂಪನ್ಮೂಲವಲ್ಲದಿರುವುದರಿಂದ ಜನತೆ ಸೌರಶಕ್ತಿ ವಿದ್ಯುತ್ ಬಳಕೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಸಿಟಿಜನ್ಸ್ ಫೋರಂನ ಅಧ್ಯಕ್ಷ ಡಾ.ಟಿ.ವಿ.ಮುನಿಯಪ್ಪ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ನಿರ್ದೇಶಕ ಡಾ. ಎಂ. ಪ್ರಕಾಶ್, ಪ್ರಾಂಶುಪಾಲರಾದ ಡಾ. ಎಸ್.ಎನ್. ವೆಂಕಟೇಶ್, ಉಪಪ್ರಾಂಶುಪಾಲರಾದ ನೇಹ ಜೈನ್, ಕಾಂಗ್ರೆಸ್ ಮುಖಂಡ ಎಂ.ಎನ್. ಗೋಪಾಲಕೃಷ್ಣ, ಧರ್ಮದರ್ಶಿ ಜಿ. ಪರಮಶಿವಯ್ಯ, ಸೇರಿದಂತೆ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

ಈ ಸಂಜೆ

ಭಾನುವಾರ, 8-2-2015


ಸೌರ ವಿದ್ಯುತ್ ಬಳಕೆಗೆ ಡಿಕೆಶಿ ಕರೆ

ಯಲಹಂಕ,ಫೆ.8- ವಿದ್ಯುತ್ ಅಭಾವ ಎದುರಿಸುತ್ತಿರುವ ಇಂದಿನ ದಿನಗಳಲ್ಲಿ ರಾಜ್ಯದ ಜನತೆ ಸೌರಶಕ್ತಿ ವಿದ್ಯುತ್‌ನ್ನು ಸಮರ್ಥವಾಗಿ ಬಳಸಿಕೊಳ್ಳಬೇಕೆಂದು ಇಂಧನ ಸಚಿವ ಡಿ.ಕೆ.ಶಿವಕುಮಾರ್ ಕರೆ ನೀಡಿದ್ದಾರೆ.

ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಹಾಗೂ ಸಿಟಿಜನ್ಸ್ ಫೋರಂ ಇವರುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸೌರಶಕ್ತಿ ಸಮಾವೇಶ ಉದ್ಘಾಟಿಸಿ ಮಾತನಾಡಿ, ರಾಜ್ಯದ ಮೂರು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲ ಜಿಲ್ಲೆಗಳಲ್ಲಿ ಸೌರಶಕ್ತಿ ವಿದ್ಯುತ್ ಉತ್ಪಾದನೆಗೆ ಉತ್ತಮ ಅವಕಾಶವಿದೆ ಎಂದು ಹೇಳಿದರು.

ರಾಜ್ಯದಲ್ಲಿ 1000ದಿಂದ 1400 ಮೆಗಾವ್ಯಾಟ್ ವಿದ್ಯುತ್ ಕೊರತೆಯಿದೆ. ಇದನ್ನು ಸರಿದೂಗಿಸಲು ಸರ್ಕಾರ ಹರಸಾಹಸಪಡುತ್ತಿದೆ.

ಇಂತಹ ವಿಷಮ ಪರಿಸ್ಥಿತಿಯಲ್ಲಿ ರಾಜ್ಯದ ಜನತೆ ಸೌರಶಕ್ತಿ ವಿದ್ಯುತ್ ಉತ್ಪಾದಿಸುವ ಮೂಲಕ ಸರ್ಕಾರದ ವಿದ್ಯುತ್



ಅಭಾವ ನೀಗಿಸುವಲ್ಲಿ ತಮ್ಮ ಕೊಡುಗೆ ನೀಡಬೇಕಿದೆ. ಇದೀಗ ಥರ್ಮಲ್ ವಿದ್ಯುತ್ ಉತ್ಪಾದನೆ ಅತಿ ಕಡಿಮೆ ವೆಚ್ಚದ್ದಾಗಿದ್ದು ಸೌರಶಕ್ತಿ ವಿದ್ಯುತ್ ಉತ್ಪಾದನೆ ನಂತರದ ಸ್ಥಾನದಲ್ಲಿದೆ ಎಂದರು.

ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, ಕಲ್ಲಿದ್ದಲು, ಪೆಟ್ರೋಲಿಯಂ ಹಾಗೂ ಇನ್ನಿತರ ಇಂಧನಗಳು ಮುಗಿದು ಹೋಗುವ ಸಂಪನ್ಮೂಲಗಳಾಗಿದ್ದು, ಇತ್ತೀಚೆಗೆ ಜನತೆ ಉಪಯೋಗಿಸುತ್ತಿರುವ ವಿದ್ಯುತ್‌ನ ತೀವ್ರತೆ ಗಮನಿಸಿದರೆ ಎಲ್ಲ ಇಂಧನಗಳು ಬಹುಬೇಗ ಮುಗಿದು ಹೋಗಲಿವೆ.

ಇಂತಹ ಸ್ಥಿತಿಯಲ್ಲಿ ನಮಗೆ ಉಳಿಯುವುದು ಸೌರಶಕ್ತಿಯೊಂದೇ. ಇದು ಮುಗಿದು ಹೋಗುವ ಸಂಪನ್ಮೂಲ ವಲ್ಲದಿರುವುದರಿಂದ ಜನತೆ ಸೌರಶಕ್ತಿ ವಿದ್ಯುತ್ ಬಳಕೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು ಎಂದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಾ. ಊಡೆ ಪಿ.ಕೃಷ್ಣ, ಸಿಟಿಜನ್ಸ್ ಫೋರಂನ ಅಧ್ಯಕ್ಷ ಡಾ. ಟಿ.ವಿ.ಮುನಿಯಪ್ಪ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ನಿರ್ದೇಶಕ ಡಾ.ಎಂ.ಪ್ರಕಾಶ್, ಪ್ರಾಂಶುಪಾಲ ಡಾ.ಎಸ್.ಎನ್.ವೆಂಕಟೇಶ್, ಉಪಪ್ರಾಂಶುಪಾಲ ನೇಹಾ ಜೈನ್, ಧರ್ಮದರ್ಶಿ ಜಿ.ಪರಮಶಿವಯ್ಯ ಮತ್ತಿತರರು ಉಪಸ್ಥಿತರಿದ್ದರು.

ಸಂಜೆವಾಣಿ

ಸೋಮವಾರ
2 ಫೆಬ್ರವರಿ 2015



ನಗರದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ದಿವಂಗತ ಕೆ.ಎಂ. ನಂಜಪ್ಪರ 103ನೇ ಹುಟ್ಟುಹಬ್ಬದ ಅಂಗವಾಗಿ ಏರ್ಪಡಿಸಿದ್ದ ಬೃಹತ್ ರಕ್ತದಾನ ಶಿಬಿರವನ್ನು ಮೇಯರ್ ಡಾ. ಎನ್. ಶಾಂತಕುಮಾರಿ ಉದ್ಘಾಟಿಸಿದರು. ಚಿತ್ರದಲ್ಲಿ ಡಾ. ವೂಡೇ. ಪಿ. ಕೃಷ್ಣ, ಎಸ್.ಆರ್. ಪಂಡಿತಾರಾಧ್ಯ, ರಾಜುಚಂದ್ರಶೇಖರ್, ಪ್ರತಾಪ್ ಲಿಂಗಯ್ಯ ಇದ್ದಾರೆ.

ಈ ಸಂಜೆ

ಭಾನುವಾರ, 01 ಫೆಬ್ರವರಿ 2015



ಬೆಂಗಳೂರಿನಲ್ಲಿ ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮೆಗಾ ರಕ್ತದಾನ ಶಿಬಿರವನ್ನು ಮೇಯರ್ ಶಾಂತಕುಮಾರಿ ಉದ್ಘಾಟಿಸಿದರು. ಟ್ರಸ್ಟ್ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಡಬ್ಲ್ಯೂ.ಪಿ. ಕೃಷ್ಣ, ರಾಜು ಚಂದ್ರಶೇಖರ್, ರವಿಶೇಖರ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.



ದಿ.ಕೆ.ಎಂ. ನಂಜಪ್ಪರ 103ನೇ ಹುಟ್ಟುಹಬ್ಬದ ಪ್ರಯುಕ್ತ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಶನಿವಾರ ಏರ್ಪಡಿಸಿದ್ದ ರಕ್ತದಾನ ಶಿಬಿರದಲ್ಲಿ ಮೇಯರ್ ಶಾಂತಕುಮಾರಿ ಅವರನ್ನು ಸನ್ಮಾನಿಸಲಾಯಿತು. ವೂಡೇ ಪಿ. ಕೃಷ್ಣ, ಪಂಡಿತಾರಾಧ್ಯ, ರಾಜುಚಂದ್ರಶೇಖರ್, ಪ್ರತಾಪ್‌ಲಿಂಗಯ್ಯ ಉಪಸ್ಥಿತರಿದ್ದರು.

ವಿಜಯವಾಣಿ
ಭಾನುವಾರ 01 ಫೆಬ್ರವರಿ [illegible] ಕೆ

ನಗರ ಸಂಸ್ಕೃತಿ ದರ್ಪಣ... ಮೇಯರ್‌ಗೆ ಗೌರವ

ಸಂಯುಕ್ತ ಕರ್ನಾಟಕ ಗುರುವಾರ 29 ಜನವರಿ 2015

ಮದ್ಯಪಾನ ನಿಷೇಧಕ್ಕೆ ಆಗ್ರಹ


ಎಬಿವಿಪಿ ಆಯೋಜಿಸಿದ್ದ 'ನಶಾಮುಕ್ತ ಭಾರತ ಜಾಗೃತಿ ಅಭಿಯಾನ' ಕಾರ್ಯಕ್ರಮದಲ್ಲಿ ಸಹಿ ಸಂಗ್ರಹಿಸಲಾಯಿತು.

ಬೆಂಗಳೂರು, ಜ. 28: ಕುಡಿತ, ಧೂಮಪಾನ, ಮಾದಕ ದ್ರವ್ಯ ಸೇವನೆಯಂತಹ ಸಾಮಾಜಿಕ ದುಷ್ಪರಿಣಾಮ ಬೀರುವ ಚಟಗಳನ್ನು ಕೇಂದ್ರ, ರಾಜ್ಯ ಸರ್ಕಾರಗಳು ಸಂಪೂರ್ಣ ನಿಷೇಧಿಸುವಂತೆ ಎಬಿವಿಪಿ ಪ್ರಾಂತೀಯ ಕಾರ್ಯದರ್ಶಿ ಎನ್. ರವಿಕುಮಾರ್ ಆಗ್ರಹಿಸಿದರು.

ಬೀಡಿ, ಸಿಗರೇಟ್ ಸೇವನೆ, ತಂಬಾಕು ಜಗಿಯುವುದು, ಮಾದಕ ದ್ರವ್ಯಗಳ ಚಟಕ್ಕೆ ಒಳಗಾದವರಿಗೆ ಕ್ಯಾನ್ಸರ್ ಸೇರಿದಂತೆ ಇತರೆ ಮಾರಕ ಕಾಯಿಲೆಗಳು ಬರುತ್ತವೆ. ಇವುಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಸಂಪೂರ್ಣ ನಿಷೇಧ ಹೇರುವ ಅಗತ್ಯವಿದೆ ಎಂದರು. ಎಬಿವಿಪಿ ಆಯೋಜಿಸಿದ್ದ ನಶಾಮುಕ್ತ ಭಾರತ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದಲ್ಲಿ ವರ್ಷಕ್ಕೆ ಕುಡಿತ ಹಾಗೂ ಧೂಮಪಾನದಿಂದ 9 ಸಾವಿರ ಕೋಟಿ ರೂ. ಆದಾಯ ಬರುತ್ತಿದೆ. ಆದರೆ ಇದರಿಂದಾಗುವ ದುಷ್ಪರಿಣಾಮಗಳು ಹಾಗೂ ವಿವಿಧ ಕಾಯಿಲೆಗಳಿಗಾಗಿ 30 ಸಾವಿರ ಕೋಟಿ ರೂ. ಖರ್ಚು ಮಾಡಲಾಗುತ್ತಿದೆ. ಇದನ್ನು ಮನಗಂಡು ಮದ್ಯಪಾನ ಹಾಗೂ ಧೂಮಪಾನಕ್ಕೆ ಸಂಪೂರ್ಣ ನಿಷೇಧ ಹೇರಬೇಕೆಂದು ಆಗ್ರಹಿಸಿದರು.

ರಾಜ್ಯದಲ್ಲಿ ಏಳೂವರೆ ಸಾವಿರ ಬಾರ್‌ಗಳಿವೆ. ದುರಂತವೆಂದರೆ, ಬಡಜನರು ಹಾಗೂ ಸ್ಲಂ ಜನರು ಇಂತಹ ಕೆಟ್ಟ ಚಟಕ್ಕೆ ದಾಸರಾಗಿದ್ದಾರೆಂದು ವಿಷಾದಿಸಿದ ಅವರು, ಚಿಕ್ಕಚಿಕ್ಕ ಮಕ್ಕಳೂ ಕುಡಿತದ ಚಟ ಅಳವಡಿಸಿಕೊಂಡಿರುವುದು ದುರದೃಷ್ಟಕರ ಸಂಗತಿ ಎಂದು ಹೇಳಿದರು. ಮಜುಂದಾರ್ ಕ್ಯಾನ್ಸರ್ ಆಸ್ಪತ್ರೆ ನಿರ್ದೇಶಕ ಡಾ. ಪಾಲ್. ಸಿ.ಸಾಲಿಂಗ್, ಡಾ. ಎಂ.ಕೆ. ಶ್ರೀಧರ್, ಡಾ. ಜಯಕರಶೆಟ್ಟಿ, ಡಾ. ಜಯಕೃಷ್ಣ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವೂಡೆ ಪಿ. ಕೃಷ್ಣ ಇದ್ದರು.

ಕನ್ನಡಪ್ರಭ ಬೆಂಗಳೂರು | ಗುರುವಾರ, 29 ಜನವರಿ 2015

ಡ್ರಗ್ಸ್ ಮುಕ್ತ ಬೆಂಗಳೂರು ವಿದ್ಯಾರ್ಥಿಗಳ ಸಂಕಲ್ಪ



ಬೆಂಗಳೂರು: ಎಬಿವಿಪಿ ಹಾಗೂ ತಾರುಣ್ಯ ಶಿಕ್ಷಣ ಸೇವಾಸಂಸ್ಥೆ ಹಮ್ಮಿಕೊಂಡ 'ನಶಾಮುಕ್ತ ಭಾರತ' ಜಾಗೃತಿ ಅಭಿಯಾನದಲ್ಲಿ ನೂರಾರು ವಿದ್ಯಾರ್ಥಿಗಳು 'ಡ್ರಗ್ಸ್ ಮುಕ್ತ ಬೆಂಗಳೂರು' ಜನಜಾಗೃತಿಯ ಸಂಕಲ್ಪ ಮಾಡಿದರು.

ಜಾಗೃತಿ ಸಭೆಯಲ್ಲಿ ಪ್ರಮುಖ ಕ್ಯಾನ್ಸರ್ ತಜ್ಞರು ಮಾದಕದ್ರವ್ಯ ಸೇವನೆಯ ದುಷ್ಪರಿಣಾಮಗಳನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು. ಡ್ರಗ್ಸ್- ತಂಬಾಕು ಸೇವನೆಯಿಂದ ದೂರ ಇರುವಂತೆ ಸಲಹೆ ನೀಡಿದರು. ಧೂಮಪಾನ-ತಂಬಾಕು ಸೇವನೆಯಿಂದಾಗಿ ಕ್ಯಾನ್ಸರ್‌ಗೊಳಗಾಗಿ ಚಿಕಿತ್ಸೆ ಪಡೆಯುತ್ತಿರುವ ಇಬ್ಬರು ಇದೇ ವೇಳೆ ತಮ್ಮ ಅನುಭವವನ್ನು ಹೇಳಿಕೊಂಡರು.

ಡ್ರಗ್ಸ್, ಧೂಮಪಾನ, ಮದ್ಯಪಾನದಿಂದಾಗುವ ಅವಘಡಗಳ ಬಗ್ಗೆ ಚಿತ್ರಸಹಿತ ಮಾಹಿತಿ ನೀಡುವ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಬೃಹತ್ ಪರದೆ ಮೇಲೆ ಸಹಿ ಹಾಕುವ ಮೂಲಕ ವಿದ್ಯಾರ್ಥಿಗಳು ಡ್ರಗ್ಸ್ ಮುಕ್ತ ಬೆಂಗಳೂರು ಜಾಗೃತಿ ಆಂದೋಲನಕ್ಕೆ ಬೆಂಬಲ ಸೂಚಿಸಿದರು.

ದಿಕ್ಸೂಚಿ ಭಾಷಣ ಮಾಡಿದ ಎಬಿವಿಪಿ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಎನ್.ರವಿಕುಮಾರ್, ತಂಬಾಕು, ಕುಡಿತ ಮತ್ತು ಡ್ರಗ್ಸ್ ದೇಶದ ದೊಡ್ಡ ಸಮಸ್ಯೆಯಾಗಿ ಬೆಳೆಯುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಅವುಗಳನ್ನು ಸಂಪೂರ್ಣ ನಿಷೇಧಿಸಬೇಕು ಎಂದರು.

> ಸಣ್ಣ ವಯಸ್ಸಿನಲ್ಲಿ ತಂಬಾಕು ಸೇವನೆ ಗೀಳಿಗೆ ಬಿದ್ದರೆ ಅದರ ಪರಿಣಾಮ ಕಾಣುವುದು ಮಧ್ಯ ವಯಸ್ಸು ದಾಟಿದ ನಂತರ. ಹೀಗಾಗಿ ಯುವಕರಾಗಿದ್ದಾಗ ಯಾವುದೇ ಚಟಕ್ಕೆ ದಾಸರಾಗದೇ ಇರುವುದು ಭವಿಷ್ಯದ ಆರೋಗ್ಯಕ್ಕೆ ಬಂಡವಾಳ ಹೂಡಿದಂತೆ.
>
> • ಡಾ.ಪಾಲ್ ಸಿ ಸಾಲಿನ್ಸ್ ಮಜುಮ್‌ದಾರ್ ಕ್ಯಾನ್ಸರ್ ಆಸ್ಪತ್ರೆ ನಿರ್ದೇಶಕ

ನಾವು ತಂಬಾಕು, ಡ್ರಗ್ಸ್ ಸೇವನೆ ಮಾಡುವುದಿಲ್ಲ ಮತ್ತು ಈ ಬಗ್ಗೆ ಜಾಗೃತಿ ಮೂಡಿಸುತ್ತೇವೆ ಎಂದು ಸಂಕಲ್ಪ ತೊಡಲಾಯಿತು.

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಉಪ ಕುಲಸಚಿವ ಡಾ.ರಿಯಾಜ್, ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್‌ನ ನಿರ್ದೇಶಕ ಡಾ.ಎಂ.ಕೆ. ಶ್ರೀಧರ್, ಮಜುಮ್‌ದಾರ್ ಕ್ಯಾನ್ಸರ್ ಆಸ್ಪತ್ರೆಯ ನಿರ್ದೇಶಕ ಡಾ.ಪಾಲ್ ಸಾಲಿನ್ಸ್, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ವೂಡೆ ಪಿ.ಕೃಷ್ಣ, ರಾಜ್ಯ ತಂಬಾಕು ಮಂಡಳಿ ನಿಯಂತ್ರಣಾಧಿಕಾರಿ ಡಾ.ವಿಶಾಲ್ ರಾವ್, ಡಾ.ಜಯಕರ ಶೆಟ್ಟಿ, ಡಾ.ಜಯಕೃಷ್ಣ ಮತ್ತಿತರರು ಇದ್ದರು.

ವಿಜಯವಾಣಿ
ಗುರುವಾರ ○ 29 ಜನವರಿ 2015

ನಶಾಮುಕ್ತಿ ಭದ್ರ ಭವಿಷ್ಯದ ಬಂಡವಾಳ

ಮಾದಕ ವಸ್ತುಗಳಾದ ಬೀಡಿ, ಸಿಗರೇಟು ಹಾಗೂ ತಂಬಾಕು ಸೇವನೆಯ ಅಲ್ಪಾವಧಿಯ ಸುಖಕ್ಕಾಗಿ; ದೀರ್ಘಾವಧಿಯ ಉಜ್ವಲ ಭವಿಷ್ಯವನ್ನೇ ಬಲಿಕೊಡಬೇಕಾಗುತ್ತದೆ ಎಂದು ಮಜುಮ್ದಾರ್ ಷಾ ಕ್ಯಾನ್ಸರ್ ಆಸ್ಪತ್ರೆಯ ನಿರ್ದೇಶಕ ಡಾ. ಪಾಲ್ ಸಿ. ಸಾಲಿನ್ಸ್ ವಿದ್ಯಾರ್ಥಿಗಳಿಗೆ ಎಚ್ಚರಿಕೆ ನೀಡಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಹಾಗೂ ತಾರುಣ್ಯ ಶಿಕ್ಷಣ ಸೇವಾಟ್ರಸ್ಟ್ ಬುಧವಾರ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ನಶಾಮುಕ್ತ ಭಾರತ ಜಾಗೃತ ಅಭಿಯಾನ ಹಾಗೂ ವಿದ್ಯಾರ್ಥಿ, ಯುವಜನರಲ್ಲಿ ಜಾಗೃತಿ ಮತ್ತು ಸಂಕಲ್ಪ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ದುಶ್ಚಟಗಳಿಂದ ದೂರವಿರುತ್ತೇವೆ ಎಂದು ಪಣತೊಡುವುದೇ ಭವಿಷ್ಯದ ಭದ್ರತೆಗೆ ಹೂಡುವ ದೊಡ್ಡ ಬಂಡವಾಳ. ಮನುಷ್ಯನಿಗೆ ಜೀವ, ಆರೋಗ್ಯ ಮತ್ತು ಮೆದುಳು ಅತಿಮುಖ್ಯ. ಧೂಮಪಾನ ಮತ್ತು ಮದ್ಯಪಾನದಿಂದ ಅನೇಕರು ಈ ಮೂರನ್ನೂ ಬಲಿಕೊಡುತ್ತಿದ್ದಾರೆ. ದುಶ್ಚಟಕ್ಕೆ ತಮ್ಮನ್ನು ತಾವು ಬಲಿಕೊಡುವುದಲ್ಲದೇ ಸಂಸಾರವನ್ನು ಹಾಳು ಮಾಡುತ್ತಿದ್ದಾರೆ ಎಂದು ವಿಷಾದಿಸಿದರು.

ಧೂಮಪಾನದಿಂದ ಬಾಯಿ ಕ್ಯಾನ್ಸರ್‌ನ ಪ್ರಮಾಣ ಹೆಚ್ಚಾಗುತ್ತಿದೆ. ಒಮ್ಮೆ ಕ್ಯಾನ್ಸರ್ ಬಂತೆಂದರೆ ನಾಲಿಗೆ, ಗಂಟಲು, ದವಡೆ ಮತ್ತಿತರ ಭಾಗಗಳನ್ನು ತೆಗೆಯಬೇಕಾಗುತ್ತದೆ. ಕ್ಯಾನ್ಸರ್ ಮಿತಿಮೀರಿದರೆ ಪ್ರಾಣವನ್ನೇ ಕಳೆದುಕೊಳ್ಳಬೇಕಾಗುತ್ತದೆ. ಇಂಥ ಪ್ರಕರಣಗಳು ಪ್ರತಿನಿತ್ಯ ನೂರಾರು ಸಂಖ್ಯೆಯಲ್ಲಿ ಸಂಭವಿಸುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು.



ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ನಶಾಮುಕ್ತ ಭಾರತ ಮತ್ತು ವಿದ್ಯಾರ್ಥಿ, ಯುವಜನರಲ್ಲಿ ಜಾಗೃತಿ ಕಾರ್ಯಕ್ರಮದಲ್ಲಿ ಸಹಿ ಅಭಿಯಾನ ನಡೆಸಲಾಯಿತು.

ಎಬಿವಿಪಿ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಎನ್. ರವಿಕುಮಾರ್ ಮಾತನಾಡಿ, ರಾಜ್ಯದಲ್ಲಿ 7500 ಬಾರ್‌ಗಳಿದ್ದು, ಬೆಂಗಳೂರಿನಲ್ಲಿ 2500 ಬಾರ್ ಇದೆ. ಹಳ್ಳಿ ಪ್ರದೇಶದಲ್ಲಿ ಪ್ರತಿ 20 ಕಿ.ಮೀ. ಗೊಂದು ಬಾರ್ ಇದೆ. ಹೊಸವರ್ಷದ ಒಂದು ರಾತ್ರಿಗೆ ಕರ್ನಾಟಕವೊಂದರಲ್ಲೇ ಬರೋಬ್ಬರಿ 105 ಕೋಟಿ ರೂ. ಮದ್ಯಪಾನಕ್ಕೆ ಖರ್ಚು ಮಾಡಲಾಗಿದೆ. ದೇಶಕ್ಕೆ ಮದ್ಯಪಾನ ಮಾರಾಟದಿಂದ ಬರುವ ಆದಾಯಕ್ಕಿಂತ ಅದರಿಂದಾಗುವ ದುಷ್ಪರಿಣಾಮದ ಖರ್ಚೇ ಹೆಚ್ಚು. ಇದು ದೇಶದ ಅಭಿವೃದ್ಧಿಗೆ ಮಾರಕವೇ ಹೊರತು ಪೂರಕವಲ್ಲ. ದೇಶಾದ್ಯಂತ ಧೂಮಪಾನ ಮತ್ತು ಮದ್ಯಪಾನ ನಿಷೇಧವಾಗಬೇಕು ಮತ್ತು ಇದು ಜನಾಂದೋಲನದ ರೀತಿಯಲ್ಲಿ ಎಲ್ಲೆಡೆ ವ್ಯಾಪಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ದಂತ ವೈದ್ಯರಾದ ಡಾ. ಜಯಕರ್ ಶೆಟ್ಟಿ, ಡಾ. ಜಯಕೃಷ್ಣ ಉಪಸ್ಥಿತರಿದ್ದರು.

ಮನೆಮನದಲ್ಲಿ ನಶಾಮುಕ್ತ ವಾತಾವರಣ ಸೃಷ್ಟಿಯಾಗಬೇಕು. ಪ್ರತಿಯೊಬ್ಬರು ತಮ್ಮ ಸಹಪಾಠಿಗಳನ್ನು ನಶೆಯಿಂದ ಮುಕ್ತಗೊಳಿಸುವ ಪಣ ತೊಡಬೇಕು. ವಿದ್ಯಾವಂತರೇ ಮಾದಕವ್ಯಸನದತ್ತ ವಾಲುತ್ತಿರುವುದು ವಿಷಾದಕರ.

ಡಾ. ಎಂ.ಕೆ.ಶ್ರೀಧರ್ ನಿರ್ದೇಶಕ,
ಕೆನರಾಬ್ಯಾಂಕ್ ಸ್ಕೂಲ್
ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್

ವಿದ್ಯಾರ್ಥಿಗಳು ನಶಾಮುಕ್ತ ಭಾರತದ ರಾಯಭಾರಿಯಾಗಬೇಕು. ಇಲ್ಲಿನ ಯುವಕರಿಗೆ ರಾಷ್ಟ್ರೀಯತೆ ಮತ್ತು ದೇಶದ ಕಾನೂನಿನ ಅರಿವಿಲ್ಲದ ಕಾರಣ ಬೇಗನೆ ದುಶ್ಚಟದ ದಾಸರಾಗುತ್ತಾರೆ. ಧೂಮಪಾನ ಮತ್ತು ಮದ್ಯಪಾನ ನಿಷೇಧಕ್ಕೆ ಜನಾಭಿಪ್ರಾಯ ಸಂಗ್ರಹಿಸಿ, ಅದರ ಆಧಾರದಲ್ಲಿ ಮುಂದಿನ ನಿರ್ಧಾರ ಕೈಗೊಳ್ಳಬೇಕು.

ಡಾ. ವೂಡೇ ಪಿ. ಕೃಷ್ಣ
ಕಾರ್ಯದರ್ಶಿ, ಶೇಷಾದ್ರಿಪುರಂ
ಶಿಕ್ಷಣ ದತ್ತಿ ಸಂಸ್ಥೆ

ಪ್ರಜಾವಾಣಿ ಶನಿವಾರ 21ನೇ ಫೆಬ್ರುವರಿ 2015



ನಗರದ ವೆಂಕಟಪ್ಪ ಕಲಾ ಗ್ಯಾಲರಿಯಲ್ಲಿ ಶುಕ್ರವಾರ ನಡೆದ ಹಿರಿಯ ಕಲಾವಿದೆ ವಿನಯಾ ಸುವರ್ಣ ಅವರ ವರ್ಣ ಚಿತ್ರ ಕಲಾಕೃತಿಗಳ ಪ್ರದರ್ಶನವನ್ನು ಕಲಾಸಕ್ತರು ವೀಕ್ಷಿಸಿದರು —ಪ್ರಜಾವಾಣಿ ಚಿತ್ರ

'ಕಲಾವಿದರಿಗೆ ಬದ್ಧತೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲಾವಿದರಿಗೆ ಬದ್ಧತೆ ಹಾಗೂ ಸವಾಲು ಸ್ವೀಕರಿಸುವ ಗುಣ ಇರಬೇಕು' ಎಂದು ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಡಾ.ಬಿ.ಎಲ್.ಶಂಕರ್ ಹೇಳಿದರು.

ನಗರದ ವೆಂಕಟಪ್ಪ ಕಲಾ ಗ್ಯಾಲರಿಯಲ್ಲಿ ಶುಕ್ರವಾರ ನಡೆದ ಹಿರಿಯ ಕಲಾವಿದೆ ವಿನಯಾ ಸುವರ್ಣ ಅವರ ವರ್ಣ ಚಿತ್ರ ಕಲಾಕೃತಿಗಳ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು.

'ಒಂದೆರಡು ಪ್ರದರ್ಶನಗಳನ್ನು ನೀಡಿದ ಕೆಲವು ಯುವ ಕಲಾವಿದರು ದೊಡ್ಡ ಸಾಧನೆ ಮಾಡಿದ್ದೇವೆ ಎಂಬಂತೆ ಬಿಂಬಿಸಿಕೊಳ್ಳುತ್ತಿದ್ದಾರೆ. ದೊಡ್ಡ ಸಾಧನೆ ಮಾಡಿದವರು ಸದ್ದುಗದ್ದಲ ಇಲ್ಲದೆ ಬದುಕುತ್ತಾರೆ. ಕಡಿಮೆ ಸಾಧನೆ ಮಾಡಿದವರು ಸದಾ ಸದ್ದುಗದ್ದಲ ಮಾಡುತ್ತಾರೆ' ಎಂದರು.

ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಹಾಗೂ ಕಲಾವಿದೆ ವಿನಯಾ ಸುವರ್ಣ ಉಪಸ್ಥಿತರಿದ್ದರು.

ಪ್ರದರ್ಶನ ಇದೇ 26ರ ವರೆಗೆ ಬೆಳಿಗ್ಗೆ 10ರಿಂದ ಸಂಜೆ 6ರ ವರೆಗೆ ಇರಲಿದೆ.

ವಿಜಯವಾಣಿ

ಸೋಮವಾರ • 12 ಜನವರಿ 2015



ವಾರ್ಷಿಕೋತ್ಸವ

ಕೆಂಗೇರಿ ಶೇಷಾದ್ರಿಪುರಂ ಪ.ಪೂ. ಕಾಲೇಜಿನ ವಾರ್ಷಿಕೋತ್ಸವವನ್ನು ನಟ ಕೃಷ್ಣ ಅಜೇಯ್ ರಾವ್ ಉದ್ಘಾಟಿಸಿದರು. ನಿರ್ದೇಶಕ ಶಶಾಂಕ್, ನಟಿ ಮಯೂರಿ, ಎನ್.ಆರ್. ಪಂಡಿತಾರಾಧ್ಯ, ಡಾ. ವೂಡೇ ಪಿ. ಕೃಷ್ಣ, ಆರ್.ಡಿ. ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

ವಿಜಯವಾಣಿ ಶುಕ್ರವಾರ 9 ಜನವರಿ 2015

ಕನ್ನಡ ಉಳಿಯಲು ಕಾರಣ ಸಾಹಿತ್ಯ ಪರಿಷತ್ತು

ನಾಡೋಜ ಹಂಪನಾ ಅಭಿಮತ
ಕಸಾಪ ಅಧ್ಯಕ್ಷರಾಗಿದ್ದವರಿಗೆ ಸನ್ಮಾನ

ಎಕ್ಕಡ ಹಾಗೂ ಎನ್ನಡ ನಡುವೆ ನಲುಗುತ್ತಿದ್ದ ಕನ್ನಡವನ್ನು ಉಳಿಸಿದ ಕೀರ್ತಿ ಕನ್ನಡ ಸಾಹಿತ್ಯ ಪರಿಷತ್‌ಗೆ ಸಲ್ಲುತ್ತದೆ ಎಂದು ನಾಡೋಜ ಡಾ.ಹಂಪ ನಾಗರಾಜಯ್ಯ ಹೇಳಿದರು.

ಗಾಂಧಿನಗರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ ಕಸಾಪ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರಿಗೆ ಗೌರವ ಸಮರ್ಪಿಸಲು ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಗೌರವ ಸ್ವೀಕರಿಸಿ ಮಾತನಾಡಿದರು.

ನಾನು ನಿರಂತರ 16 ವರ್ಷಗಳ ಕಾಲ ಕನ್ನಡ ಸಾಹಿತ್ಯ ಪರಿಷತ್ತಿನ ಸೇವೆ ಸಲ್ಲಿಸಿದ್ದೇನೆ. ಅನ್ಯ ಭಾಷಿಗರಿಂದ ನಲುಗುತ್ತಿದ್ದ ಕನ್ನಡವನ್ನು ಕಸಾಪ ಉಳಿಸಿ ಬೆಳೆಸಿದೆ. ಪರಿಷತ್ತು ಇಲ್ಲದಿದ್ದರೆ ನಗರದಲ್ಲಿ ಕನ್ನಡ ಮಾಯವಾಗಿರುತ್ತಿತ್ತು. ಕನ್ನಡ ಭಾಷೆ ಸ್ಥಿತ್ಯಂತರದಲ್ಲಿದ್ದು, ಬದಲಾವಣೆ ಬಯಸುತ್ತಿದೆ. ಬದಲಾವಣೆಗಾಗಿ ಕಸಾಪ ಅಧ್ಯಕ್ಷರು ಹಲವು ತೀರ್ಮಾನಗಳನ್ನು ಕೈಗೊಳ್ಳಬೇಕಿದೆ. ಹೀಗಾಗಿ ಅವರ ತೀರ್ಮಾನವನ್ನು ಟೀಕಿಸಬಾರದು ಎಂದರು.

ಅಭಿನಂದನೆ: ನಾಡೋಜ ಡಾ.ಹಂಪ ನಾಗರಾಜಯ್ಯ ದಂಪತಿ, ಪ್ರೊ.ಜಿ.ಎಸ್.ಸಿದ್ದಲಿಂಗಯ್ಯ, ಡಾ.ಸಾ.ಶಿ.ಮರುಳಯ್ಯ, ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಬೇಲಿಮಠದ ಶ್ರೀಶಿವರುದ್ರ ಸ್ವಾಮೀಜಿ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಧರ್ಮದರ್ಶಿ ಡಾ.ವೂಡೇ ಪಿ.ಕೃಷ್ಣ, ನಗರ ಜಿಲ್ಲಾ ಕಸಾಪ ಅಧ್ಯಕ್ಷ ಟಿ.ತಿಮ್ಮೇಶ್, ಗಾಂಧಿನಗರ ವಿಧಾನಸಭಾ ಕ್ಷೇತ್ರ ಕಸಾಪ ಅಧ್ಯಕ್ಷೆ ಹಾ.ವೀ.ಮಂಜುಳಾ ಶಿವಾನಂದ ಮತ್ತಿತರರು ಇದ್ದರು.



ಗಾಂಧಿನಗರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ.ಜಿ.ಎಸ್.ಸಿದ್ದಲಿಂಗಯ್ಯ, ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ, ಡಾ.ಸಾ.ಶಿ.ಮರುಳಯ್ಯ, ಡಾ.ಹಂಪ ನಾಗರಾಜಯ್ಯ ಅವರನ್ನು ಸನ್ಮಾನಿಸಲಾಯಿತು. ಬೇಲಿಮಠದ ಶ್ರೀಶಿವರುದ್ರ ಸ್ವಾಮೀಜಿ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಧರ್ಮದರ್ಶಿ ಡಾ.ವೂಡೇ ಪಿ.ಕೃಷ್ಣ, ನಗರ ಜಿಲ್ಲಾ ಕಸಾಪ ಅಧ್ಯಕ್ಷ ಟಿ.ತಿಮ್ಮೇಶ್ ಮತ್ತಿತರರಿದ್ದರು.

ಪ್ರಚಾರಕ್ಕಾಗಿ ಟೀಕೆ

ದೇವನೂರು ಮಹದೇವ ನಿರಾಕರಿಸಿದ ಕಸಾಪ ಸಮ್ಮೇಳನದ ಅಧ್ಯಕ್ಷಗಿರಿಗೆ, ಪುಂಡಲೀಕ ಹಾಲಂಬಿ ಅವರು ಎಲ್ಲರ ಜತೆ ಚರ್ಚಿಸಿದ ನಂತರ ದಲಿತ ಕವಿ ಸಿದ್ದಲಿಂಗಯ್ಯ ಅವರನ್ನು ಆಯ್ಕೆ ಮಾಡಿದ್ದಾರೆ. ಆದರೆ ಕೆಲವರು ಇದನ್ನು ಟೀಕಿಸುತ್ತಿದ್ದಾರೆ. ಪ್ರಚಾರಕ್ಕಾಗಿ ಈ ರೀತಿ ಮಾಡುತ್ತಿದ್ದಾರೆ ಎಂದು ಪ್ರಾಧ್ಯಾಪಕ ಡಾ.ಬೈರಮಂಗಲ ರಾಮೇಗೌಡ ಆಕ್ರೋಶ ವ್ಯಕ್ತಪಡಿಸಿದರು.

ಹೊಸ ದಿಗಂತ

ಬೆಂಗಳೂರು
ಶುಕ್ರವಾರ, 9 ಜನವರಿ 2015

ಕನ್ನಡದ ಆಳ ಅಧ್ಯಯನ ಅಗತ್ಯ: ಹಂಪನಾ

- ಕನ್ನಡ ಭಾಷೆ ಪುರಾತನ ಸಾಹಿತ್ಯ ಭಾಷೆ
- ನಾನಾ ಭಾಷಿಕರು ಕನ್ನಡ ಉಳಿವಿಗೆ ಶ್ರಮಿಸಬೇಕಿದೆ

ಬೆಂಗಳೂರು: ಪ್ರಸ್ತುತ ದಿನಗಳಲ್ಲಿ ಯುವ ಸಮುದಾಯಕ್ಕೆ ಕನ್ನಡದ ಆಳವಾದ ಅಧ್ಯಯನ ಅವಶ್ಯಕವಾಗಿದೆ ಎಂದು ಸಾಹಿತಿ ಹಂ.ಪಾ. ನಾಗರಾಜಯ್ಯ ಅಭಿಪ್ರಾಯಪಟ್ಟರು.

ಗಾಂಧಿನಗರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶೇಷಾದ್ರಿಪುರ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್‌ನ ನೂರರ ಸಂಭ್ರಮೋತ್ಸವದಲ್ಲಿ ಅವರು ಮಾತನಾಡಿದರು.



ಕನ್ನಡ ಭಾಷೆ ಬಹಳ ಪುರಾತನ ಸಾಹಿತ್ಯ ಭಾಷೆಯಾಗಿದ್ದು ಇದರ ಆಳವಾದ ಅಧ್ಯಯನವು ಇಂದಿನ ಯುವ ಸಮುದಾಯಕ್ಕೆ ಬೇಕಾಗಿದೆ. ಕನ್ನಡದ ಕಂಪು ಎಲ್ಲಡೆ ಹಬ್ಬುವಂತಾಗಬೇಕು. ಸಾಹಿತ್ಯ ಪರಿಷತ್ತಿನ ಇತಿಹಾಸವು ಮಹತ್ವದಾಗಿದ್ದು ನಾನಾ ಭಾಷಿಕರು ಹಾಗೂ ಭಾಷೆಗಳ ನಡುವೆ ಕನ್ನಡನಾಡಿನಲ್ಲಿ ಕನ್ನಡ ಭಾಷೆ ಉಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದರು.

ಅನ್ಯ ಭಾಷೆಗೆ ವಿರೋಧ ಇಲ್ಲ

ಸಾಹಿತಿ ಡಾ.ಸಾ.ಶಿ. ಮರುಳಯ್ಯ ಮಾತನಾಡಿ, ಕನ್ನಡ ಆಡು ಭಾಷೆಗೆ ಸೀಮಿತವಾಗದೆ ಕರಳುಬಳ್ಳಿಯ ಸಂಬಂಧ ಬೆಸೆದುಕೊಳ್ಳಬೇಕು. ಕನ್ನಡಕ್ಕೆ ಮೊದಲ ಆದ್ಯತೆ ನೀಡಬೇಕು. ಇಂದಿನ ಯುವ ಸಮುದಾಯ ಆಂಗ್ಲ ಭಾಷೆಯ ವ್ಯಾಮೋಹಕ್ಕೆ ಬಲಿಯಾಗುತ್ತಿದ್ದು ಆಂಗ್ಲ ಭಾಷೆಯ ಕಲಿಕೆಗೆ ವಿರೋಧವಿಲ್ಲ. ಆದರೆ, ಅದುವೇ ಆಡು ಭಾಷೆಯಾಗಬಾರದು. ಅಗತ್ಯವಿದ್ದಲ್ಲಿ ಮಾತ್ರ ಅನ್ಯ ಭಾಷೆ ಬಳಸಬೇಕು. ಮಾತೃ ಭಾಷೆ ಮರೆತರೆ ಹೆತ್ತ ತಾಯಿಗೆ ದ್ರೋಹ ಮಾಡಿದಂತೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಯುವಕರು ಕನ್ನಡದ ಆಸ್ತಿ

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಮಾತನಾಡಿ, ಕನ್ನಡ ಆಸ್ತಿ, ಕನ್ನಡ ಉಳಿಸಿ ಬೆಳೆಸುವುದು ಯುವ ಸಮುದಾಯದ ಮೇಲಿರುವ ಜವಾಬ್ದಾರಿಯಾದೆ. ಅವರಿಗೆ ಹಿರಿಯರಾಗಿ ನಾವು ಮಾರ್ಗದರ್ಶನ ಮಾತ್ರ ನೀಡಬಲ್ಲೆವು. ಕನ್ನಡ ಸಾಹಿತ್ಯದ ಮಹತ್ವ ತಿಳಿದುಕೊಳ್ಳಲು ಮುಂದಾಗಬೇಕು ಎಂದು ಕರೆ ನೀಡಿದರು.

ಬೇಲಿ ಮಠದ ಶ್ರೀ ಶಿವರುದ್ರ ಸ್ವಾಮೀಜಿ, ಪ್ರಾಧ್ಯಾಪಕ ಡಾ.ಬೈರಮಂಗಲ ರಾಮೇಗೌಡ, ಕಮಲಾ ಹಂಪನಾ, ಬೆಂಗಳೂರು ನಗರ ಘಟಕ ಕಸಾಪ ಅಧ್ಯಕ್ಷ ಟಿ.ತಿಮ್ಮೇಶ್, ಪ್ರೊ.ಜಿ.ಎಸ್. ಸಿದ್ದಲಿಂಗಯ್ಯ, ಡಾ.ವೂಡೆ.ಪಿ. ಕೃಷ್ಣ, ಗಾಂಧಿನಗರ ವಿಧಾನಸಭಾ ಕ್ಷೇತ್ರದ ಕಸಾಪ ಅಧ್ಯಕ್ಷೆ ಹಾ.ವಿ ಮಂಜುಳಾ ಶಿವಾನಂದ ಉಪಸ್ಥಿತರಿದ್ದರು.

ಸಂಜೆವಾಣಿ
ಶುಕ್ರವಾರ 9 ಜನವರಿ 2015



ಶೇಷಾದ್ರಿಪುರಂ ಸಂಯುಕ್ತ ಪದವಿಪೂರ್ವ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ಚಲನಚಿತ್ರ ನಿರ್ದೇಶಕ ಯೋಗರಾಜ್ ಭಟ್ ಅವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ನಿರ್ಮಾಪಕ ಪ್ರಸಾದ್, ಶೇಷಾದ್ರಿಪುರ ಶಿಕ್ಷಣ ದತ್ತಿ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಮತ್ತಿತರರು ಇದ್ದಾರೆ.

ಯೋಗರಾಜ್ ಭಟ್‌ಗೆ ಸನ್ಮಾನ

ವಿಜಯವಾಣಿ

ಗುರುವಾರ ○ 8 ಜನವರಿ 2015



ಶೇಷಾದ್ರಿಪುರಂ ಸಂಯುಕ್ತ ಪದವಿಪೂರ್ವ ಕಾಲೇಜಿನ ವಾರ್ಷಿಕೋತ್ಸವ ಸಂದರ್ಭ ಚಲನಚಿತ್ರ ನಿರ್ದೇಶಕ ಯೋಗರಾಜ ಭಟ್ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಎನ್.ಆರ್. ಪಂಡಿತಾರಾಧ್ಯ, ಡಾ. ವೂಡೇ ಪಿ. ಕೃಷ್ಣ, ಕೆ. ಕೃಷ್ಣಸ್ವಾಮಿ, ಆರ್. ಸಂತಾನಮ್, ಪ್ರೊ. ಜಿ.ಕೆ. ಮಂಜುನಾಥ್ ಭಾಗವಹಿಸಿದ್ದರು.

ವಿಜಯವಾಣಿ
ನಂ. 1 ಕನ್ನಡ ದಿನಪತ್ರಿಕೆ

ಸಂಯುಕ್ತ ಕರ್ನಾಟಕ | ಬುಧವಾರ | 7 | ಜನವರಿ | 2015

ಮಾಧುರ್ಯ ಮೊಳಗಿಸಿದ ಗಾನಯಾನ



ಬೆಂಗಳೂರು, ಜ. 6: ಬದಲಾದ ಕಾಲಘಟ್ಟದಲ್ಲಿಯು ಕನ್ನಡದ ಹಳೆಯ ಚಿತ್ರಗೀತೆಗಳು ಮನ ಮತ್ತು ಹೃದಯ ತುಂಬುವ ಮಾಧುರ್ಯ ಉಳಿಸಿಕೊಂಡಿವೆ ಎಂದು ಖ್ಯಾತ ಸಂಗೀತ ನಿರ್ದೇಶಕ ವಿ. ಮನೋಹರ ಮೆಚ್ಚುಗೆ ವ್ಯಕ್ತಪಡಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಯಲಹಂಕದಲ್ಲಿನ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಗಾನಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಚಿತ್ರರಂಗ ಆರಂಭದ ದಿನಗಳಲ್ಲಿ ರಚಿತವಾದ ಕನ್ನಡದ ಸಂಗೀತಗಳನ್ನು ಮೆಲುಕುಹಾಕಿದ ಅವರು, ಅಂದಿನ ದಿನಗಳಲ್ಲಿ ಹಾಡುಗಳೆ ಚಿತ್ರಕ್ಕೆ ಜೀವಾಳವಾಗಿರುತ್ತಿದ್ದವು ಎಂದ ಅವರು ಎಲ್ಲಾ ಸಂಗೀತ ನಿರ್ದೇಶಕರ ಸಾಹಿತ್ಯದ ಕೊಡುಗೆಯನ್ನು ಸ್ಮರಿಸಿದರು.

ವಾರ್ತಾ ಇಲಾಖೆಯ ನಿರ್ದೇಶಕ ಎನ್. ಆರ್.ವಿಶುಕುಮಾರ್ ಮಾತನಾಡಿ, ಹಳೆಯ ಚಿತ್ರಗಳ ಸಂಗೀತದಲ್ಲಿ ಅರ್ಥಪೂರ್ಣ ಸಾಹಿತ್ಯ, ಮನತುಂಬುವ ಮಾಧುರ್ಯ, ಸಮಾಜಕ್ಕೆ ಸಂದೇಶ ನೀಡುವಂತಹ ಸತ್ವವಿದ್ದು, ಅವುಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಪರಿಕಲ್ಪನೆಯಲ್ಲಿ ವಾರ್ತಾ ಇಲಾಖೆ "ಗಾನಯಾನ" ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಹಮ್ಮಿಕೊಂಡಿದೆ. ಯುವ ಪೀಳಿಗೆಯಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಮುಂದಿನ ದಿನಗಳ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮಕ್ಕೆ ಚಾಲನೆ ದೊರಕಿಸಿಕೊಡಲಾಗುವುದು ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ. ಕೃಷ್ಣ ಅವರು ಮಾತನಾಡಿ, ಬೇರೆ ಯಾವುದೇ ಭಾಷೆ ಹಾಡುಗಳಿಗೆ ಕಡಿಮೆಯಿಲ್ಲದಂತೆ ಕನ್ನಡ ಚಿತ್ರಗೀತೆಗಳು ಸತ್ವ ಮಾಧುರ್ಯದಿಂದ ಕೂಡಿವೆ ಎಂದು ಕೆಲವೊಂದು ಚಿತ್ರಗಳ ಹಾಡಿನ ಸಾಲುಗಳನ್ನು ಸ್ಮರಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಸಂದರ್ಭದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿ ನಿರ್ದೇಶಕ ಡಾ.ಎಂ.ಪ್ರಕಾಶ್, ವಾರ್ತಾ ಇಲಾಖೆ ಜಂಟಿ ನಿರ್ದೇಶಕ ಆರ್.ಕೆ.ಶಿವರಾಂ, ಉಪ ನಿರ್ದೇಶಕ ಹೆಚ್.ಬಿ.ದಿನೇಶ್ ಹಾಗೂ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಎನ್. ವೆಂಕಟೇಶ್ ಉಪಸ್ಥಿತರಿದ್ದರು. ಶಬ್ಬೀರ್ ಮತ್ತು ತಂಡದವರಿಂದ ಪ್ರಸ್ತುತಪಡಿಸಿದ ಹಳೆಯ ಹಾಡುಗಳಿಗೆ ನಿರೂಪಕಿ ಅಪರ್ಣಾ ಅವರು ಅರ್ಥಪೂರ್ಣ ವಿವರಣೆ ನೀಡಿದರು.

ನಂ. 1 ಕನ್ನಡ ದಿನಪತ್ರಿಕೆ 2015 ಬುಧವಾರ 7 ಜನವರಿ

ಹಳೇ ಚಲನಚಿತ್ರಗಳ ಸಂಗೀತ ಅತಿಮಧುರ

ಹಳೆಯ ಚಲನಚಿತ್ರಗಳ ಸಂಗೀತ ಸಂಯೋಜಕರು ಹಾಗೂ ಚಿತ್ರಸಾಹಿತಿಗಳು ಸ್ಮರಣಾರ್ಹರು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಎನ್.ಆರ್. ವಿಶುಕುಮಾರ್ ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಮತ್ತು ಕರ್ನಾಟಕ ಚಲನಚಿತ್ರ ಅಕಾಡೆಮಿ ಸಹಯೋಗದಲ್ಲಿ ಕನ್ನಡ ಚಲನಚಿತ್ರ ಸಂಗೀತ ನಡೆದು ಬಂದ ಮಧುರ ನೆನಪನ್ನು ಸ್ಮರಿಸಲು ಶೇಷಾದ್ರಿಪುರಂ ಕಾಲೇಜಿನಲ್ಲಿ ಮಂಗಳವಾರ ನಡೆದ 'ಗಾನಯಾನ'ದಲ್ಲಿ ಮಾತನಾಡಿದರು.

ತೆರೆಯ ಹಿಂದೆ ಶ್ರಮಿಸಿದ ಕಲಾಪ್ರತಿಭೆಗಳನ್ನು ಸ್ಮರಿಸಿ, ಗೌರವ ಸಮರ್ಪಿಸುವುದು 'ಗಾನಯಾನ'ದ ಉದ್ದೇಶ. ಚಿತ್ರದ ಯಶಸ್ಸಿಗೆ ಸಂಗೀತ ಕೂಡ ಮುಖ್ಯ. ಕನ್ನಡ ಚಲನಚಿತ್ರ ಸಂಗೀತ ದಕ್ಷಿಣ ಭಾರತದಲ್ಲಿಯೇ ಅತಿ ಮಧುರವಾದುದು. 'ಬೇಡರ ಕಣ್ಣಪ್ಪ'ದಿಂದ ಹಿಡಿದು ಇತ್ತೀಚಿನ ಚಿತ್ರಗಳವರೆಗೆ ಪ್ರತಿಚಿತ್ರದಲ್ಲೂ ರಸ-ಮಾಧುರ್ಯವಿದೆ. 50 ವರ್ಷಗಳ ಹಿಂದಿನ ಚಿತ್ರಸಂಗೀತ ಇಂದಿಗೂ ಮನದಲ್ಲಿ ಗುನುಗುನಿಸುತ್ತದೆ ಎಂದರು.

ಸಂಗಿತ ನಿರ್ದೇಶಕ ವಿ.ಮನೋಹರ್ ಮಾತನಾಡಿ, ದಶಕಗಳ ಹಿಂದೆ ಸಂಗೀತಗಾರರು ಚಿತ್ರೀಕರಣ ವೇಳೆಯೇ ಟ್ರ್ಯಾಲಿಯಲ್ಲಿ ಹಾರ್ಮೋನಿಯಂ ಹಿಡಿದು ಗಟ್ಟಿಯಾಗಿ ಹಾಡಬೇಕಿತ್ತು. ಅದು ಚಿತ್ರದ ರೀಲ್‌ಗಳಲ್ಲಿಯೇ ರೆಕಾರ್ಡ್ ಆಗುತ್ತಿತ್ತು. ಆದರೆ ಕ್ರಮೇಣ ಸಂಗೀತ ನಿರ್ದೇಶನ ಆಧುನಿಕವಾದ್ದರಿಂದ ಸರಳೀಕೃತಗೊಂಡಿತು. ಹಳೆಯ ಸಂಗೀತ ನಿರ್ದೇಶಕ ಕೊಡುಗೆ ಅಪೂರ್ವವಾದುದು. ಅವರು ನೀಡಿರುವ ಸಂಗೀತ, ಸ್ವರಸಂಯೋಜನೆ, ಗೀತೆಗಳು ಇಂದಿಗೂ ಅರ್ಥ ಮತ್ತು ಮಾಧುರ್ಯ ಉಳಿಸಿಕೊಂಡಿವೆ. ಇದರಲ್ಲಿ ಎರಡು ಮಾತಿಲ್ಲ. ಆದರೆ ಇತ್ತೀಚಿನ ಸಂಗೀತ ನಿರ್ದೇಶಕರು ಮತ್ತು ಗೀತೆರಚನೆಕಾರರ ಬಗ್ಗೆ ಟೀಕೆ ಸಲ್ಲದು. ಆಯಾ ಕಾಲಕ್ಕನುಗುಣವಾಗಿ ಸಂಗೀತ ಕ್ಷೇತ್ರವೂ ಬದಲಾಗಿದೆ. ಹಳೆಯ ಮತ್ತು ಇಂದಿನ ಸಂಗೀತ ನಿರ್ದೇಶನ ಆಯಾ ಕಾಲಕ್ಕೆ ಪ್ರಸ್ತುತವಾಗಿವೆ ಎಂದು ಸಮರ್ಥಿಸಿಕೊಂಡರು.

ಖ್ಯಾತ ಗಾಯಕರಿಂದ ಸುಮಾರು 2 ಗಂಟೆ ಕಾಲ ಕನ್ನಡದ ಖ್ಯಾತ ಸಾಹಿತಿಗಳ ಹಳೆಯ ಮಧುರ ಗೀತೆಗಳ ಗಾಯನ ನಡೆಯಿತು. ಸಮಾರಂಭದ ಅಧ್ಯಕ್ಷತೆಯನ್ನು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ. ಕೃಷ್ಣ ವಹಿಸಿದ್ದು, ಕಾರ್ಯಕ್ರಮದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಜಂಟಿ ನಿರ್ದೇಶಕ ಆರ್.ಕೆ. ಶಿವರಾಮ್, ಶೇಷಾದ್ರಿಪುರಂ ಶಿಕ್ಷಣ ದತ್ತಿ ಅಧ್ಯಯನ ನಿರ್ದೇಶಕ ಡಾ.ಎಂ.ಪ್ರಕಾಶ್, ಪ್ರಾಂಶುಪಾಲ ಎಸ್.ಎನ್. ವೆಂಕಟೇಶ್, ಉಪ ಪ್ರಾಂಶುಪಾಲ ನೇಹಾಜೈನ್, ವಾರ್ತಾ ಇಲಾಖೆ ಅಧಿಕಾರಿ ಹೆಚ್.ಪಿ. ದಿನೇಶ್ ಮತ್ತಿತರರು ಉಪಸ್ಥಿತರಿದ್ದರು.



ವಾರ್ತಾ ಇಲಾಖೆ ಆಯೋಜಿಸಿದ ಗಾನಯಾನ ಕಾರ್ಯಕ್ರಮದಲ್ಲಿ ಇಲಾಖೆ ನಿರ್ದೇಶಕ ವಿಶುಕುಮಾರ್, ಸಂಗೀತ ನಿರ್ದೇಶಕ ವಿ. ಮನೋಹರ್ ಮತ್ತಿತರರಿದ್ದರು.